(ಶ್ರೀ ಜೆ. ಎಲ್. ಕಬಾಡಿ)

ಬೇಕೆಂದು ಹೇಳಿದ್ದಾರೆ. ಈ ಫಾರಂಗಳನ್ನು ಸರ್ಕಾರಿ ಮುದ್ರಣಾಲಯದಿಂದ ಎಲ್ಲ ಕಡೆಗೂ ಕಳುಹಿಸಬೇಕು. ಈ ಫಾರಂಗಳು ರಾಜ್ಯದ ವಿವಿಧ ಭಾಗಗಳಲ್ಲಿ ಜನರಿಗೆ ಸಕಾಲದಲ್ಲಿ ಮುಟ್ಟದೆ ಇರುವುದಕ್ಕೆ ಕಾರಣ ಆಯಾ ಭಾಗದಲ್ಲಿರುವ ಬುಕ್ ಡಿಪೋಗಳಿಂದ ರೆಕಗ್ನೈಸ್ಡ್ ಡೀಲರ್ಸ್‌ಗೆ ಮಾರಿದ್ದಾರೆ. ಅವರು ಕಾಳಸಂತೆಯಲ್ಲಿ ಮಾರಾಟ ಮಾಡಲು ನಾಲ್ಕಾಣೆಯ ಒಂದು ಫಾರಂಗೆ ಐದು, ಹತ್ತು ರೂಪಾಯಿ ತೆಗೆದುಕೊಳ್ಳುವುದಕ್ಕೆ ಇದು ಒಂದು ಸಮಯ ಎಂದು ತಿಳಿದುಕೊಂಡು ಮಾರುವುದರಿಂದ ಎಷ್ಟೋ ಜನರಿಗೆ ಫಾರಂಗಳು ಸಿಕ್ಕಿಲ್ಲ. ಹೀಗಾಗಿ ಡೇಟ್ ಬಾರ್ ಆಗಿರುವುದರಿಂದ ಎಷ್ಟೋ ಜನರಿಗೆ ಅರ್ಜಿ ಮಾಡಿಕೊಳ್ಳುವುದಕ್ಕೆ ಸಮಯವಾಗಲಿಲ್ಲ. ಅದಕ್ಕೋಸ್ಕರ ಟೈಂ ವಿಸ್ತರಿಸುವುದಲ್ಲದೆ ರಿಕ್ರೂಟ್‌ಮೆಂಟ್ ಕಮಿಟಿ ಚೇರ್‌ಮನ್ ಅವರು ಒಂದು ರೀ ನೋಟಿಫಿಕೇಷನ್ ಹೊರಡಿಸಿದ್ದಾರೆ. ಅದರ ಪ್ರಕಾರ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಫಾರಂ ನಂಬರ್ 1ರಲ್ಲಿ ಅರ್ಜಿ ಮಾಡಿಕೊಳ್ಳಬೇಕು. ಈ ನೋಟಿಫಿಕೇಷನ್‌ಗಳಲ್ಲಿ ತಿಳಿಸಿರುವಂತೆ 12 ಪೈಸೆಗೆ ಸಿಕ್ಕುವ ಫಾರಂಗಳಿವೆ ಮತ್ತು ನಾಲ್ಕಾಣೆಗೆ ಒಂದರಂತೆ ಎರಡು ಫಾರಂ ತೆಗೆದುಕೊಂಡು ಕಳುಹಿಸಬೇಕಾಗುತ್ತದೆ. ಹೀಗಾಗಿ ಯಾವ ಫಾರಂನಲ್ಲಿ ಅರ್ಜಿ ಕಳುಹಿಸಬೇಕು ಎನ್ನುವ ಕನ್‌ಫ್ಯೂಷನ್ ಉಂಟಾಗಿದೆ. ಇದರ ಬಗ್ಗೆ ಕೂಡ ಜನರಿಗೆ ಸರಿಯಾಗಿ ತಿಳಿಸಬೇಕು.

Sri D. DEVARAJ URS.—We are not in a position to answer the question raised by Sri J. L. Kabadi. Let the Hon. Member bring the matter in the form of a subject to be disscussed on the floor of the House.

Sri H. SIDDAVEERAPPA (Minister for Health).—If there is any mistake, it can be rectified. ಮಾನ್ಯ ಸದಸ್ಯರು ದಯಮಾಡಿ ಕಾಗದ ಬರೆದರೆ ಆಗ ವಿಷಯ ತರಿಸಿ ಏನಾದರೂ ಅನಾನುಕೂಲವಿದ್ದರೆ ಅದನ್ನು ಸರಿಪಡಿಸೋಣ.

Purchase of bungalows by the Corporation.

ಶ್ರೀ ಟಿ. ಆರ್ ಶಾಮಣ್ಣ.—ಸರ್ಕಾರದವರು ಅರ್ಬನ್ ಪ್ರಾಪರ್ಟಿ ಸೀಲಿಂಗ್ ತರಬೇಕೆಂದಿದ್ದಾರೆ. ಪ್ರೈವೇಟ್ ಪಾರ್ಟಿಗಳು ದೊಡ್ಡ ದೊಡ್ಡ ಬಂಗಲೆಗಳನ್ನು ಕೊಂಡುಕೊಳ್ಳುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ. ಕಾರ್ಪೊರೇಷನ್‌ನವರು 90 ಲಕ್ಷ ರೂಪಾಯಿಗಳ ಆಸ್ತಿಯನ್ನು ಅಕ್ವೈರ್ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದಾರೆ. ಈ ಬಂಗಲೆಗಳು ಪಬ್ಲಿಕ್ ಪರ್ಪಸ್‌ಗೆ ಬೇಕು ಎಂದು ಅನೇಕ ಬಂಗಲೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ರೈಲ್ವೆ ಸೇತುವೆಗಳ ಸಂಬಂಧದಲ್ಲಿ ಬೇಕು ಎಂದು 9 ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಇಟ್ಟಿದ್ದರೆ ಕಾರ್ಪೊರೇಷನ್‌ನವರು 90 ಲಕ್ಷ ರೂಪಾಯಿಗಳ ಆಸ್ತಿಯನ್ನು ಕೊಂಡುಕೊಳ್ಳುವುದಕ್ಕೆ ರೆಸಲ್ಯೂಷನ್ ಮಾಡಿದ್ದಾರೆ. ಸರ್ಕಾರದವರು ಇದರ ಬಗ್ಗೆ ಗಮನ ಕೊಟ್ಟು ಈ ರೀತಿಯ ವ್ಯವಹಾರಗಳು ನಡೆಯದಂತೆ ಮಾಡಬೇಕು. ರಾತ್ರಿ ಹೊತ್ತು ವಿರೋಧ ಪಕ್ಷದ ಸದಸ್ಯರು ಹೊರಟು ಹೋದ ಮೇಲೆ ಮತ್ತು ಪ್ರೆಸ್‌ನವರು ಹೋದ ಮೇಲೆ ರೆಸಲ್ಯೂಷನ್‌ಗಳು ಪಾಸಾಗಿವೆ ಎಂದು ಬರೆದುಕೊಳ್ಳತಕ್ಕ ಪರಿಸ್ಥಿತಿ ಇದೆ. ಸರ್ಕಾರದವರು ಇದರ ಬಗ್ಗೆ ಸೂಕ್ತ ಗಮನ ಕೊಟ್ಟು, ಅಕ್ವಿಜಿಷನ್‌ಗೆ ಸಂಬಂಧಪಟ್ಟ ಫೈಲುಗಳನ್ನು ತರಿಸಿಕೊಂಡು ಇಂಥ ವ್ಯವಹಾರಗಳು ನಡೆಯದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

Mr SPEAKER.—Now we shall proceed to General Discussion on the Revised Budget Estimates for 1972–73.

Revised Budget Estimates for 1972-73—General Discussion

(*Debate continued*)

† ಶ್ರೀ ಆರ್. ಗುಂಡುರಾವ್ (ಸೋಮವಾರಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಪ್ರಥಮವಾಗಿ ನಮ್ಮ ರಾಜ್ಯದ ಅರ್ಥ ಮಂತ್ರಿಗಳು ಬಹಳ ಪರಿಣಾಮಕಾರಿಯಾದ ಹಾಗೂ ಉತ್ತಮವಾದ ಆಯವ್ಯಯ ಪತ್ರವನ್ನು ಮಂಡಿಸಿದ್ದಕ್ಕಾಗಿ ಅದನ್ನು ಸ್ವಾಗತಿಸುತ್ತಾ ನಾನು ಅವರಿಗೆ ವಂದನೆ

ಯನ್ನರ್ಪಿಸುತ್ತೇನೆ. ಪ್ರಥಮವಾಗಿ ಕೇಂದ್ರಸರ್ಕಾರದವರು ನಮ್ಮ ರಾಜ್ಯದ ಓವರ್ ಡ್ರಾಫ್ಟ್‌ಗೆ ಸಹಾಯ ಮಾಡಲು ಮುಂದೆ ಬಂದು ನಮ್ಮ ರಾಜ್ಯವನ್ನು ಓವರ್ ಡ್ರಾಫ್ಟ್‌ನಿಂದ ಮುಕ್ತಗೊಳಿಸಿದ್ದಕ್ಕಾಗಿ ನಾನು ಹಣಕಾಸಿನ ಮಂತ್ರಿಗಳನ್ನು ಬಹಳವಾಗಿ ವಂದಿಸಬೇಕಾಗಿದೆ. ಹಿಂದುಳಿದ ವರ್ಗದ ಜನಾಂಗಕ್ಕೆ ಬಜೆಟ್ಟಿನಲ್ಲಿ ಅವರು ಇಟ್ಟಿರುವಂತಹ ಹಣ ಸಾಲದು ಎಂದು ಹೇಳಿ ಅದನ್ನು ಹೆಚ್ಚಿಸಬೇಕೆಂದು ಹಣಕಾಸಿನ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ ಮುಖ್ಯವಾಗಿ ಹರಿಜನ ಗಿರಿಜನರ ಮತ್ತು ಹಿಂದುಳಿದ ವರ್ಗದವರ ಒಂದು ಅಭಿವೃದ್ಧಿಗಾಗಿ ಹೆಚ್ಚಿನ ಹಣವನ್ನು ಅವರು ಮುಂದೆ ಆದರೂ ಬಜೆಟ್ಟಿನಲ್ಲಿ ಏರ್ಪಾಡು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಹಾಗೂ ಯುವಜನ ಕಲ್ಯಾಣಕ್ಕಾಗಿ ಕೇವಲ 54ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಯುವಜನ ಕಲ್ಯಾಣ ದೇಶದಲ್ಲಿ ಬಹಳ ಮುಖ್ಯವಾದುದು. ಅವೂ ಅಲ್ಲದೆ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಯುವಜನ ಕಲ್ಯಾಣ ಯೋಜನೆಯಲ್ಲಿ ಒಳ್ಳೆಯ ಅವಕಾಶವಿದೆ. ಈ ದಿಸೆಯಿಂದ 54 ಲಕ್ಷ ರೂಪಾಯಿಗಳು ಯಾವುದೇ ರೀತಿಯಲ್ಲಿಯೂ ಸಾಲದು. ಅದನ್ನು ಒಂದು ಕೋಟಿ ರೂಪಾಯಿಗಳಿಗಾದರೂ ಹೆಚ್ಚಿಸಬೇಕು ಎಂದು ಅರ್ಥಮಂತ್ರಿಗಳಿಗೆ ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಮುಖ್ಯವಾಗಿ ಬಸ್ಸುಗಳ ಮೇಲೆ ಹಾಕಿರುವಂತಹ ಟ್ಯಾಕ್ಸ್ ಸ್ವಾಗತಾರ್ಹವಾದುದು. ಇದನ್ನು 100 ರೂಪಾಯಿಗಳಿಂದ 150ಕ್ಕೆ ಹೆಚ್ಚಿಸಿದರೂ ತೊಂದರೆ ಇಲ್ಲ. ಏಕೆಂದರೆ ಅನೇಕ ಟೂರಿಸ್ಟ್ ಬಸ್ಸು ಮಾಲೀಕರು ಸರ್ಕಾರಕ್ಕೂ ಮೋಸ ಮಾಡುತ್ತಾ ಜನತೆಗೂ ಮೋಸ ಮಾಡುತ್ತಾ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆಮಾಡುತ್ತಿದ್ದಾರೆ. ನೂರು ರೂಪಾಯಿಗಳಿಗೆ ಏರಿಸಿರುವುದು ಪ್ರಸಂಶನೀಯವಾದುದು. ಅದನ್ನು 150 ರೂಪಾಯಿಗಳಿಗೆ ಏರಿಸಲಿಕ್ಕೆ ಅರ್ಥ ಮಂತ್ರಿಗಳು ಗಮನಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಕುದುರೆ ಜೂಜು ಬಗ್ಗೆ ಒಂದು ಮಾತು. ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಹಣಕಾಸಿನ ಕೊರತೆ ಇದೆ. ನಮ್ಮದು ಬಡತನದ ದೇಶ ಎಂದು ಒಂದು ಕಡೆ ಹೇಳುತ್ತಿದ್ದೇವೆ.

ಬಹುಶಃ ಲಕ್ಷಾಂತರ ಅಥವಾ ಕೋಟ್ಯಾಂತರ ರೂಪಾಯಿಗಳನ್ನು ಕುದುರೆ ಜೂಜಿನ ಆಟದಲ್ಲಿ ಕಳೆಯುತ್ತಿರುವುದು ಕಂಡುಬರುತ್ತಿದೆ. ಈ ರೇಸಿನ ಆಡಳಿತದ ಮೇಲೆ ಸರ್ಕಾರಕ್ಕೆ ಹಿಡಿತ ಕಡಿಮೆ ಇದೆ. ಈ ಒಂದು ರೇಸಿನ ಮೇಲೆ ಸರ್ಕಾರದವರು ಬೇರೆ ಯಾವುದಾದರೂ ಒಂದು ರೀತಿಯಲ್ಲಿ ಹೆಚ್ಚಿನ ಹಿಡಿತವನ್ನು ಇಟ್ಟುಕೊಳ್ಳುವುದು ಒಳ್ಳೆಯದು. ಇಲ್ಲದೇ ಹೋದರೆ ಅದನ್ನು ನಿಲ್ಲಿಸುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಅರ್ಥಮಂತ್ರಿಗಳು ಇದನ್ನು ಚೆನ್ನಾಗಿ ಪರಿಶೀಲಿಸಬೇಕು. ಏಕೆಂದರೆ ಇದರಿಂದ ಸಾಧಾರಣವಾಗಿ ಸರ್ಕಾರಕ್ಕೆ ಹೆಚ್ಚಿನ ಲಾಭ ಬಾರದೆ ಮಧ್ಯಮ ವರ್ಗದ ಜನ ಹೆಚ್ಚಿನ ಲಾಭವನ್ನು ಪಡೆಯುತ್ತಿದ್ದಾರೆ. ಬುಕ್ಕೀಸ್ ಅಥವಾ ಮಧ್ಯ ಏಜೆಂಟರುಗಳಿಗೆ ಹಣ ಸಂಪಾದನೆ ಆಗುವ ದೆಸೆಯಿಂದ ಸರ್ಕಾರದವರು ಈ ಒಂದು ಕಾನೂನನ್ನು ಬದಲಾವಣೆ ಮಾಡಿ ಸರ್ಕಾರಕ್ಕೆ ಹಣಕಾಸಿನ ಸ್ಥಿತಿ ಹೆಚ್ಚಾಗಿ ಅನುಕೂಲವಾಗುವ ರೀತಿಯಲ್ಲಿ ಅರ್ಥಮಂತ್ರಿಗಳು ಪ್ರಯತ್ನ ಪಡಬೇಕು ಎಂದು ಸಲಹೆ ಮಾಡುತ್ತೇನೆ.

ಇನ್ನು ಹಾರಂಗಿ ಯೋಜನೆಗೆ ಹೆಚ್ಚಿನ ಹಣವನ್ನು ಒದಗಿಸಬೇಕಾಗಿತ್ತು. ಈ ಹಾರಂಗಿ ಯೋಜನೆ ಆಗಬೇಕೆಂದು 50 ವರ್ಷಗಳಿಂದ ಕಂಡುಬರುತ್ತಿದೆ. ಆದರೆ ಇಲ್ಲಿಯ ಕೆಲಸಗಳು ಬಹಳ ನಿಧಾನವಾಗಿ ನಡೆದು ಬರುತ್ತಿದೆ. ಬಜೆಟ್ಟಿನಲ್ಲಿ ಇಟ್ಟಿರುವ ಹಣ ಸಾಲದು ಹಾರಂಗಿ ಯೋಜನೆಯನ್ನು ಪೂರ್ತಿಗೊಳಿಸುವುದಕ್ಕೆ ಹೆಚ್ಚಿನ ಹಣ ಒದಗಿಸಬೇಕು ಎಂದು ನಾನು ಮಾನ್ಯ ಅರ್ಥಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇನ್ನು ಕಾಳಿ ನದಿ ಯೋಜನೆಗೆ ಕೇಂದ್ರ ಸರ್ಕಾರ ಪೂರ್ತಿ ಸಹಾಯ ಮಾಡುತ್ತದೆ. ಕಾಳೀ ನದಿ ಯೋಜನೆಯಿಂದ ಇಡೀ ಮೈಸೂರಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ ಎಂದು ಕೇಳಿ ನನಗೆ ಸಂತೋಷವಾಗಿದೆ. ಈ ಕಾರ್ಯಕ್ರಮಗಳನ್ನು ಅರ್ಥ ಮಂತ್ರಿಗಳು ಹಾಕಿರುವುದು ನಿಜವಾಗಿಯೂ ಸ್ವಾಗತಾರ್ಹವಾದುದು. ನಮ್ಮ ಸರ್ಕಾರ ಆಡಳಿತಕ್ಕೆ ಬಂದಮೇಲೆ ನಮ್ಮ ಅರ್ಥಮಂತ್ರಿಗಳು ಎಷ್ಟು ಉತ್ತಮವಾದ ಬಜೆಟ್ಟನ್ನು ಮಂಡಿಸಿದ್ದಾರೆ ಎಂಬುದಕ್ಕೆ ನಮ್ಮ ಕಾಳೀ ನದಿ ಯೋಜನೆ ಮತ್ತು ಓವರ್ ಡ್ರಾಫ್ಟ್ ಇವೆರಡು ಸಾಕ್ಷಿಯಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಹೇಳುತ್ತಿದ್ದರು ಈ ಬಜೆಟ್ ಸ್ವಾಗತಾರ್ಹವಲ್ಲ ಎಂದು. ಸರ್ಕಾರ ಕಳೆದ ಐದು ವರ್ಷಗಳಿಂದ ಎಷ್ಟು ಓವರ್ ಡ್ರಾಫ್ಟ್ ಪಡೆದಿತ್ತು. ನಮ್ಮ ಸರ್ಕಾರ ಎಷ್ಟು ಕಷ್ಟ ಸ್ಥಿತಿಯಲ್ಲಿತ್ತು ಎನ್ನುವುದನ್ನು ನೋಡಿದರೆ ನಿಜವಾಗಿಯೂ ಈಗಿನ ಸರ್ಕಾರ ಬಹಳ ಹೆಚ್ಚಿನ ರೀತಿಯಲ್ಲಿ ನಮ್ಮ ದೇಶವನ್ನು ಅಭಿವೃದ್ಧಿ ಮಾಡುವುದರಲ್ಲಿ ಯಾವುದೇ ಸಂದೇಹವೂ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈ ಓವರ್ ಡ್ರಾಫ್ಟನ್ನು ರೈಟ್ ಆಫ್ ಮಾಡಿಸಿ

ಶ್ರೀ ಆರ್. ಗುಂಡೂರಾವ್.—ಮಾಡಿಸುತ್ತೇವೆ, ಬಿಡುವುದಿಲ್ಲ. ಇನ್ನು ಶರಾವತಿಯ ಯೋಜನೆಯ ವಿಷಯದಲ್ಲಿ ನಮ್ಮ ಲೋಕೋಪಯೋಗಿ ಮಂತ್ರಿಗಳು, ವಿರೋಧಪಕ್ಷದವರು ಕೇಳಿದ್ದಕ್ಕೆ ತಕ್ಷಣ ನಿಜಸ್ಥಿತಿ ಏನು, ಏನು ಏನು ಅನ್ಯಾಯವಾಗಿದೆ ಕಂಟ್ರಾಕ್ಟ್‌ದಾರರಿಂದ ಎಲ್ಲೆಲ್ಲಿ ಮೋಸವಾಗಿದೆ, ಎನ್ನುವುದನ್ನು ಪರಿಶೀಲಿಸಿ ಕೇವಲ ಮೂರು ದಿವಸದಲ್ಲಿ ನಿಜಸ್ಥಿತಿಯನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಅನೇಕ ಲೋಪದೋಷಗಳು ಹತ್ತಾರು ವರ್ಷಗಳ ಕಾಲ ನಡೆದುದು ಸರ್ಕಾರದ ಗಮನಕ್ಕೆ ಬಂದಿದೆ. ಅವರು ಮೊನ್ನೆ ಈ ಮನೆಯಲ್ಲಿ ಮಾತನಾಡುತ್ತಾ ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡುವುದಿಲ್ಲಾ ಎಂದೂ ಹೇಳಲಿಲ್ಲ. ಮಾಡಬೇಕು ಎಂದೂ ಹೇಳಲಿಲ್ಲ. ಅದನ್ನು ಲೋಕೋಪಯೋಗಿ ಮಂತ್ರಿಗಳು ಸಮಗ್ರವಾಗಿ ಪರಿಶೀಲಿಸುತ್ತೇನೆ ಎಂದು ಭರವಸೆ ಕೊಟ್ಟಿರುವುದು ಸ್ವಾಗತಾರ್ಹವಾದುದು ಎಂದು ತಿಳಿದುಕೊಂಡಿದ್ದೇನೆ.

ಕೊನೆಯದಾಗಿ ವಿದ್ಯಾ ಇಲಾಖೆ ಬಹಳ ಮುಖ್ಯವಾದ ಇಲಾಖೆ, ಈ ಇಲಾಖೆಗೆ 55 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, ಅದು ಸಾಲದು, ಏಕೆಂದರೆ ಬಡ ಜನರ ಮಕ್ಕಳಿಗೆ ವಿದ್ಯೆ ಸಿಕ್ಕಲಿಕ್ಕೆ ಮತ್ತು ಬಡ ಜನರಿಗೆ ಅನುಕೂಲವಾಗುವುದಕ್ಕೆ 55 ಕೋಟಿ ರೂಪಾಯಿಗಳಿಂದ 80 ಕೋಟಿ ರೂಪಾಯಿಗಳವರೆಗೆ ಏರಿಸಬೇಕು ಎಂದು ಹಣಕಾಸಿನ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಖಾಸಗೀ ಶಾಲೆಗಳನ್ನು ರಾಷ್ಟ್ರೀಕರಣ ಮಾಡಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕು. ಅದರಿಂದ ಬಡವರಿಗೆ ಹೆಚ್ಚು ಪ್ರಯೋಜನವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಹಾಗೆಯೇ ಅನೇಕ ಸರ್ಕಾರಿ ಜಾಗಗಳನ್ನು ದೊಡ್ಡ ದೊಡ್ಡ ಹಣವಂತರು ಮತ್ತು ಅಧಿಕಾರಿ ವರ್ಗದವರು ಆಕ್ರಮಿಸಿಕೊಂಡು ಆ ಜಾಗದ ಪೂರ್ತಿ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಸರ್ಕಾರಕ್ಕೆ ಅದರಿಂದ ಯಾವ ತರಹದ ಪ್ರಯೋಜನವೂ ಬಂದಿಲ್ಲ. ಈ ದಿಸೆಯಿಂದ ಸರ್ಕಾರದವರು ಕೂಡಲೇ ಪರಿಶೀಲಿಸಿ ಆ ಜಾಗಗಳನ್ನು ಸರ್ಕಾರಕ್ಕೆ ವಾಪಸ್ ತೆಗೆದುಕೊಳ್ಳಬೇಕು. ಇಲ್ಲದೆ ಹೋದರೆ ಹೆಚ್ಚಿನ ಪೆನಾಲ್ಟಿಯನ್ನು ಹಾಕಿ ಆ ಮೂಲಕ ಜನತೆಗೆ ಹೆಚ್ಚಿನ ಪ್ರಯೋಜನವಾಗುವ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಎಂದು ಈ ಸಮಯದಲ್ಲಿ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಇಷ್ಟೊಂದು ಸಲಹೆಗಳನ್ನು ಕೊಟ್ಟು, ಈ ಕುದುರೆ ಜೂಜಿನ ಬಗ್ಗೆ ನಮ್ಮ ಅರ್ಥ ಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕು ಎಂದು ಒತ್ತಾಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ, ಮತ್ತು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎ. ಎಂ. ಸೂರ್ಯನಾರಾಯಣಗೌಡ (ಯಲಹಂಕ).—ಅಧ್ಯಕ್ಷರೇ, ಈ ಸಭೆಯ ಮುಂದೆ ಮಂಡಿಸಿರತಕ್ಕ ಬಜೆಟ್ಟನ್ನು ನಾನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಮಾರಾಟ ತೆರಿಗೆಯನ್ನು ಇನ್ನೂ ಹೆಚ್ಚು ಹೆಚ್ಚಾಗಿ ಹಾಕಬೇಕಾಗಿತ್ತು. ಬಸ್ಸುಗಳ ಮೇಲೆ ಹಾಕಿರತಕ್ಕ ತೆರಿಗೆ ಸರಿಯಾಗಿದೆ ಮತ್ತು ಸಾಧ್ಯವಾದರೆ ಅದನ್ನು ಹೆಚ್ಚಾಗಿ ಹಾಕಲು ಪ್ರಯತ್ನಪಡಬೇಕು. ಈ ದಿಸೆಯಲ್ಲಿ ಆರ್ಥಿಕ ಮಂತ್ರಿಗಳು ಯೋಚನೆ ಮಾಡಿರುವುದು ಮತ್ತು ತೆರಿಗೆಯನ್ನು ಹಾಕಿರುವುದು ಸರಿ ಎಂದು ನಾನು ಅದನ್ನು ಸ್ವಾಗತಿಸುತ್ತೇನೆ. ಈಗ ಅನೇಕ ಸದಸ್ಯರು ಅನೇಕ ವಿಷಯಗಳ ಮೇಲೆ ಮಾತನಾಡಿದ್ದಾರೆ. ಅನೇಕ ಲೋಪಗಳು ಅಧಿಕಾರಿಗಳಲ್ಲಿವೆ ಎಂದು ಹೇಳಿದ್ದಾರೆ. ಈಗಿರತಕ್ಕ ವಿದ್ಯಾಭ್ಯಾಸ ಜಾತೀಯ ಮತ್ತು ಧರ್ಮದ ಆಶ್ರಯದಲ್ಲಿ ನಡೆಯುತ್ತಿದೆ. ಸಮಾಜವಾದಕ್ಕೆ ಮೂಲಭೂತವಾದ ಒಂದು ಫೌಂಡೇಷನ್, ಒಂದು ಅಸ್ತಿಭಾರ ಎಂದರೆ, 6 ವರ್ಷದಿಂದ 16 ವರ್ಷದವರೆಗೆ ಇರತಕ್ಕ ಯುವಕರು. ಅವರ ಮೇಲೆ ಸಮಾಜವಾದದ ಪರಿಣಾಮ ಆಗಬೇಕಾದರೆ, ಈಗಿರತಕ್ಕ ವಿದ್ಯಾಭ್ಯಾಸವನ್ನು ಸಮಾಜವಾದದ ಕಡೆಗೆ ಎಳೆಯತಕ್ಕ ರೀತಿಯಲ್ಲಿ ವಿದ್ಯಾಭ್ಯಾಸದ ಮಾರ್ಪಾಡಾಗಬೇಕು. ಆದ್ದರಿಂದ ಶಾಸಕರು, ಸರ್ಕಾರ ಮತ್ತು ಸಂಬಂಧಪಟ್ಟ ಮಂತ್ರಿಗಳು ಹೆಚ್ಚಾಗಿ ವಿದ್ಯಾಭ್ಯಾಸದ ಕ್ರಾಂತಿಕಾರಕ ಬದಲಾವಣೆಯ ಕಡೆಗೆ ಗಮನಕೊಡಬೇಕು.

ಈಗ ನಡೆಯುತ್ತಿರುವ ವಿದ್ಯಾಭ್ಯಾಸದ ಕ್ರಮದಂತೆ ಜಾತಿ ಅದು ಧರ್ಮದ ಆಶ್ರಯದಲ್ಲಿ ಬೆಳೆದಂಥ ಮಕ್ಕಳಲ್ಲಿ ಸಮಾಜವಾದ ಪದ ಕೇವಲ ಆಶ್ಚರ್ಯದ ಪದವಾಗುತ್ತದೆ. ಅದರಮೇಲೆ ಕೆಟ್ಟ ಪರಿಣಾಮವಾಗಿ ಈಗಿನ ಪೀಳಿಗೆಯನ್ನು ಸಮಾಜವಾದಕ್ಕೆ ದೂರದಲ್ಲಿ ಇಡತಕ್ಕ ಏರ್ಪಾಡಾಗಿದೆ. ಅದು ಬದಲಾವಣೆ ಆಗಬೇಕಾದರೆ, ವಿದ್ಯಾಭ್ಯಾಸ ಕ್ರಮ ತತ್‌ಕ್ಷಣ ಬದಲಾವಣೆಯಾಗಿ ಸಮಾಜವಾದದ ಕಡೆಗೆ ಹುಡುಗರನ್ನು ಎಳೆಯತಕ್ಕ ಶಿಕ್ಷಣ ಆಗಬೇಕು. (glimpses of History) ಯಲ್ಲಿ ಸುಭಾಸ್‌ಚಂದ್ರಬೋಸ್, ಗಾಂಧೀಜಿ ಮುಂತಾದವರು ಸಮಾಜವಾದದ ಬಗ್ಗೆ ಹೇಳಿರತಕ್ಕ ಸಾಹಿತ್ಯವನ್ನು ಪ್ರೈಮರಿ, ಮಿಡ್ಲ್ ಮತ್ತು ಹೈಸ್ಕೂಲುಗಳ ಪಠ್ಯ ಪುಸ್ತಕಗಳಲ್ಲಿ ಅಳವಡಿಸಬೇಕು. ಯುವಕ ಜನಾಂಗವನ್ನು ನಾವು ಒಂದು ಉತ್ತಮ ದರ್ಜೆಗೆ ಉತ್ತಮ ಸ್ಥಾನಗಳಿಗೆ ತೆಗೆದುಕೊಂಡು

ಹೋಗಬೇಕಾದರೆ ಅವರನ್ನು ಉತ್ತಮ ಆಡಳಿತಗಾರರನ್ನು ಮಾಡಬೇಕಾದರೆ ಸಮಾಜದಲ್ಲಿ ಉತ್ತಮ ಶಕ್ತಿ ಬೆಳೆಸಬೇಕಾದರೆ ನಮ್ಮ ನಾಯಕರು ಏನು ಹೇಳಿದ್ದಾರೆ, ಅದನ್ನು ಮೂರು ದರ್ಜೆಯ ಪಾಠ ಪ್ರವಚನಗಳಲ್ಲಿ ವ್ಯಾಪಕಮಾಡಿ, ಪ್ರೈಮರಿ, ಮಿಡ್ಲ್ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಲ್ಲಿ ಸಮಾಜ ವಾದ ಎಂದರೆ ಏನು ಎಂದು ಸಮಾಜವಾದದ ಬಗ್ಗೆ ಚಿಂತನೆಯನ್ನು ಯೋಚನೆ ಮಾಡಬೇಕಾದ ಶಕ್ತಿ ಮತ್ತು ಪ್ರತಿಕ್ರಿಯೆಯನ್ನು ಅವರಲ್ಲಿ ಬೆಳೆಸತಕ್ಕ ಯೋಜನೆ ಮಾಡದೆ ಬೇರೆ ಯಾವ ರೀತಿಯಿಂದ ರಿಫಾರ್ಮ್ಸ್ ಆಗಲಿ ಯಾವರೀತಿ ಬದಲಾವಣೆ ತೆಗೆದುಕೊಂಡು ಬಂದರೆ ಫೌಂಡೇಷನ್ ಇಲ್ಲದ ಕಟ್ಟಡದೋಪಾದಿಯಲ್ಲಿ ಆಗುತ್ತದೆಯೇ ಹೊರತು ಮೂಲತಹ ಬದಲಾವಣೆ ಆಗತಕ್ಕ ಮಾರ್ಗದಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಅರ್ಥಮಂತ್ರಿಗಳು ಸಹ ಮಂಡಿಸಿರತಕ್ಕ ತಮ್ಮ ಬಡ್ಜೆಟಿನಲ್ಲಿ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನಕೊಟ್ಟು ಈಗ ಇರತಕ್ಕ ನೀತಿಯನ್ನು ಬದಲಾವಣೆ ಮಾಡಿ ಯುವಕರನ್ನು ಸಮಾಜವಾದದ ಕಡೆಗೆ ತೆಗೆದುಕೊಂಡು ಹೋಗತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡು ಅದರ ಕಡೆ ಸಾಹಿತ್ಯ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಇದರ ಹೊರತು ಬೇರೆ ಉದ್ದೇಶಗಳಲ್ಲಿ ಸಮಾಜವಾದದ ಕಡೆ ಹೋಗುವ ಗುರಿ ದಿಟ್ಟಗುರಿಯಾಗಿದೆ. ಇದು ಆಗಲೇಬೇಕಾದ ಗುರಿಯಾಗಿ ಪರಿಣಮಿಸುವಂತಾಗಬೇಕಾದರೆ ಸಾಹಿತ್ಯವನ್ನು ಬದಲಾವಣೆ ಮಾಡಿ ಸೆಕೆಂಡರಿ ಅಥವಾ ಪ್ರೌಢಶಾಲೆ ವಿದ್ಯಾಭ್ಯಾಸದವರೆಗೂ ಯುವಕರಿಗೆ ಸಮಾಜವಾದದ ಬಗ್ಗೆ ಬೋಧನೆ ಮಾಡುವುದಕ್ಕೆ ಏರ್ಪಾಡು ಮಾಡಿ ಸಮಾಜವಾದವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ಹೇಳುತ್ತಾ ನನ್ನ ಕೆಲವು ಮಾತುಗಳನ್ನು ಮುಗಿಸುತ್ತೇನೆ.

† Sri DIGAMBAR RAO BALWANT RAO (Afzalpur).—Mr. Speaker Sir, While welcoming this Budget, which, I think is a landmark in the history of the finances of our State, I can very well say that it is the first step in creating an atmosphere and the necessary infra-structure for socialistic pattern to be brought into the State of Mysore. Our young Finance Minister has tried his best to clean the mess that was created by the predecessor Government and the credit goes to Mr. Ghorpade for having found out ways and means for the clearance of Rs. 71 crores overdraft. It is an other feather in his cap. Another gratifying feature is that the financial needs of Kalinadi Project will be fully met by the Government of India. It is a great achievement as far as the new Government of Mysore State is concerned. At the same time, he has cautioned that while we should see that we assure reasonable growth we should see that social justice is done. In order to create the necessary infra structure, he has taken some necessary steps.

When the interim Budget was introduced, the deficit was to the extent of 43 crores of rupees. Now because of his fiscal strategy, he has been able to bring it down to 4.5 crores. This is also a very important thing that he has done for the State.

Coming to the Power Generation and Distribution in our State, it is heartening to note that the Kalinadi Hydroelectric Projcet, which is being financed by the Central Government is expected to generate 270 MW and 640 MW by the year 1976 and 1981 respectively. Our present generation capacity is 960 MW.

In the agricultural sector, I am very glad that we have been able to achieve self-sufficiency in food production. It has come to 62 lakh tons and we have been able to achieve self-sufficiency.

The new Government has taken certain good and bold steps in regard to providing certain amenities to the people. For example they have launched on a programme to provide three lakh house sites to the

(SRI DIGAMBAR RAO BALWANT RAO)

landless people and the Government appears to be firm in its policy regarding site distribution, the first phase of which is expected to be completed before 15th August 1972, the 25th Anniversary of Independence. That is a very right step that has been taken for solving the problems of the have-nots and poor people.

Government has also taken some effective steps to solve the unemployment problem. The Government of India is expected to provide 1.43 crores of rupees this year for a Special Employment programme in the state. It requires more amount and special employment programme requires to be taken all over the State. There are about 300 Doctors and so many technical hands who are not getting employment. So far as the Matriculates are concerned, I think there is not a single M.L.A. who may not be receiving daily, representations from 20-30 persons who are seeking employment. So, as far as the unemployment problem is concerned, I urge the Hon. Finance Minister that he must give more importance to solve this problem.

Then, there is the question of providing drinking water wells. It is a necessity I am very sorry, that, after twenty-five years of independence, so many villages–almost half the villages in the State have not been provided with drinking water. This shows that we have failed in giving priority to some important things. They must try to differentiate between the essential services and other services which are not so necessary. Since our finances are very limited, the best way is to see that they earmark more funds to the basic necessities of life which our people want and for which have given a promise at the time of election.

3-00 P.M.

I now come to the special problems of the Hyderabad Karnatak area, the Upper Krishna Project. The Upper Krishna Project has not received much attention of the Hon'ble Finance Minister. You have only earmarked 184 lakhs out of which 120 lakhs are spent for execution. This way of executing the project will deprive the Hyderabad Karnatak area of its due share of waters and will make that area a permanent scarcity area. I would suggest to the Hon'ble Finance Minister that just as he has been successful in taking the assistance of the Central Government for the Kalinadi project, so also he should try to canvass support and assistance for this Upper Krishna Project and I trust he will be able to convince the Central Government of the necessity of taking over this big project which is going to help the districts of Bijapur, Gulbarga and Raichur at a later stage. For the time being I am requesting that there is a project which if completed will providing irrigation facilities to large areas of Shorapur and Shahpur which will cost 30 crores of rupees. You have already spent 13 crores on this project and it is only a matter of spending 17 crores on that and

if that is done, I think you will be solving the problems of two talukas of Gulbarga district.

Then I come to the University. As it is known to this August House, it is being heard from Malnad area that we need a university. I want to tell you Sir, that Hyderabad Karnatak is a backward area. It has got many colleges and as you know very well, Marathwada has got a university for its educational development Similarly, I would say that preference should be given to the Hyderabad Karnatak area and a University should be started in Gulbarga. Already post-graduate studies are carried on there and the circumstances are very favourable. So I would request that this particular demand of the Hyderabad Karnatak area may be conceded and Hyderabad Karnatak area may be given an opportunity to develop in the same way as the other counter parts of the State.

With these few words, since there are many more Hon'ble Members to participate in the debate, I close my speech. I have many more things to say and I will try to take an opportunity to speak on the Demands.

† Smt. ADDY SALDHANA (Mangalore-1).—Mr. Speaker Sir, Let me congratulate the Finance Minister for the Budget for the year 1972-73 placed before the House. I fully support it.

I wish to make a few observations on the Budget. The Finance Minister in his Budget Estimates has made a careful assessment of the financial situation and has taken account of the pressing needs of the State. In keeping with the nationally accepted progammes towards socialism, he has devised expenditure patterns and tax plans.

There are, however, a few disquieting features which need thrashing out. There has been a persistent and increasing over-draft which has been a threat to our financial balance. No doubt, the needs of our development are partly responsible for this dificit. The Finance Minister has for the present found a way of wiping off the overdraft very much like the housewife who draws on her husband frequently to meet her deficits. This is no permanent solution for a Finance Minister. The heavy overdraft with the Reserve Bank has been cleared by a ways and means advance from the Government of India. By this budgetary device we have not reduced the net burden of our debt. What we formally owed to the Reserve Bank, we now owe to the Government of India.

In the coming years, we should strive to muster our financial resources so as to avoid budget deficits. The Chief ways of doing it are :

Firstly, to tap new and additional means of revenues such as taxation of agricultural wealth and income ;

Secondly to press our demands successfully for a larger share of the Central Revenues which are made up of all productive and elastic Sources.

(SMT. ADDY SALDHANA)

The time has now come when we have boldly to tax the agricultural surpluses. Our past investments on irrigation, power, agricultural improvements and technology are visibly bearing fruit. Agriculture should contribute to the State Treasury much more than it does now. This in contrast to industry and commerce where the incomes have been taxed to the utmost, assuming of course that the taxes levied are collected.

The farms and fields should make a larger contribution towards the rural amenities such as well, tanks, Communications, education improved agricultural practices and technology.

It may be recalled that the Mysore Irrigation Act was passed in 1957. It was called the Levy of water rates Maintenance cess and betterment contribution. But as the Finance Minister points out, it took as long as 1965 to make the necessary rules. The present water rates, says the Finance Minister, do not even cover the maintenance and working expenses, nor the interest and return on investment. The Water rates are now proposed to be revised upwards and the time for this is a appropriate.

We have been talking too long and too eloquently about the distressing problems of poverty and unemployment, stagnation and distress. The budget has made a good attempt to solve these problems within the means and measures available for it. The expenditure on social services of Rs. 113 crores, which, I hope will be doubled in the years to come, is a sure sign that we are earnest about our socialist goals. The word 'socialism' hardly figures in the budget speech but the spirit of socialism hovers about.

I thank the Chair for having given me an opportunity to speak.

† ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಸನ್ಮಾನ್ಯ ಅಧ್ಯಕ್ಷರೇ, ಈ ಸಧನದಲ್ಲಿ ಮಾನ್ಯ ಶ್ರೀ ಘೋರ್ಪಡೆಯವರು ಮಂಡಿಸಿಧಂಥ ಆಯವ್ಯಯ ಪತ್ರವನ್ನು ತುಂಬು ಹೃದಯದಿಂದ ಸ್ವಾಗತಿಸಿ ಅದನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು 32 ಸಾವಿರ ಪ್ರಾಥಮಿಕ ಶಾಲೆಗಳು ಇವೆ. ನಮ್ಮ ದೇಶದ ಕಲ್ಯಾಣವಾಗಬೇಕಾದರೆ, ನಮ್ಮ ದೇಶದ ಇಂದಿನ ಪೀಳಿಗೆ ಮುಂದೆ ಉತ್ತಮ ನಾಗರೀಕರಾಗಬೇಕಾದರೆ ನಮ್ಮ ಶಿಕ್ಷಣದ ವ್ಯವಸ್ಥೆ ಸುವ್ಯವಸ್ಥಿತವಾಗಿರಬೇಕು. ಈ ಒಂದು ದಿಶೆಯಲ್ಲಿ ನಾವು ನಮ್ಮ ಪ್ರಾಥಮಿಕ ಶಾಲೆಗಳ ಪರಿಸ್ಥಿತಿಯನ್ನು ನೋಡಿದರೆ ಬಹಳ ಚಿಂತಾಜನಕವಾಗಿದೆ. ಏಕೆಂದರೆ ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಯಾವುದೇ ಒಂದು ಕನ್ನಡ ಶಾಲೆಗೆ ಹೋಗಿ ನೋಡಿದರೆ ಅವು ದನಗಳ ದೊಡ್ಡಿಯಂತೆ ಕಾಣುತ್ತವೆ. ಆ ಶಾಲೆಯನ್ನು ನೋಡಿಕೊಳ್ಳಲು ಸಿಪಾಯಿಕೂಡ ಇರುವುದಿಲ್ಲ. 6 ವರ್ಷದಿಂದ 12 ವರ್ಷಗಳವರೆಗೆ ವಯಸ್ಸು ಉಳ್ಳ ಮಕ್ಕಳನ್ನು ಶಾಲೆಗೆ ಕಳಿಸಿದರೆ ಅಲ್ಲಿ ಕುಳಿತುಕೊಳ್ಳುವುದಕ್ಕೆ ಅವರಿಗೆ ಸರಿಯಾದ ನೆಲ ಕೂಡ ಇರುವುದಿಲ್ಲ. ನೆಲದ ಮೇಲೆ ಬಿದ್ದಿರುವ ಕಸವನ್ನು ಬಾಲಕರೇ ಬಳಿಯಬೇಕಾದ ಪರಿಸ್ಥಿತಿ ಇದ್ದ ಇಂತಹ ಒಂದು ದುಸ್ಥಿತಿ ಹಳ್ಳಿಗಳ ಶಾಲೆಗಳಲ್ಲಿ ಇದೆ. ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಯೋಜನೆಗಳಿಗಾಗಿ ಖರ್ಚು ಮಾಡುವಾಗ, ಶಾಲೆಗಳ ಸುಧಾರಣೆಗಾಗಿ ಸಾಕಷ್ಟು ಹಣವನ್ನು ಖರ್ಚು ಮಾಡದಿರುವುದು ನೋಡಿದರೆ ಕನಿಕರವಾಗುತ್ತದೆ. ಇನ್ನು ಮುಂದೆಯಾದರೂ ಕೂಡ ಸರ್ಕಾರದವರು ಈ ಪ್ರಾಥಮಿಕ ಶಾಲೆಗಳನ್ನು ಸುವ್ಯವಸ್ಥಿತವಾಗಿ ಇಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರತಿಯೊಂದು ಹಳ್ಳಿಗೂ ಪ್ರಾಥಮಿಕ ಶಾಲಾ ಕಟ್ಟಡವನ್ನು ಕಟ್ಟಿಸಿಕೊಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಶಾಲಾ ಕಟ್ಟಡವನ್ನು

ಕಟ್ಟಿಸುವ ಬಗ್ಗೆ ಈಗಿನ ನಿಯಮದಂತೆ ಅಭಿವೃದ್ಧಿ ಮಂಡಲಿಗಳಿಗೆ ಹಳ್ಳಿಯವರು ಮತ್ತು ಹಳ್ಳಿಯ ಗ್ರಾಮ ಪಂಚಾಯಿತಿಯವರು ತಮ್ಮ ಪಾಲಿನ ದುಡ್ಡು ಕೊಟ್ಟಿದ್ದರೂ ಕೂಡ ಶಾಲೆಗಳನ್ನು ಕಟ್ಟಿಸದಂಥ ಪರಿಸ್ಥಿತಿ ಇದೆ. ಕೆಲವು ಕಡೆಗಳಲ್ಲಿ ಹಳ್ಳಿಯ ಜನರು ಮತ್ತು ಗ್ರಾಮಪಂಚಾಯಿತಿಯವರು ತಮ್ಮ ಪಾಲಿನ ಹಣ ಕೊಡದಿದ್ದರೂ ಕೂಡ ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡಲಾಗಿದೆ. ಈ ಒಂದು ಪಕ್ಷಪಾತ ಇರಬಾರದು. ಈ ಬಗ್ಗೆ ಸರ್ಕಾರದವರು ರಾಜ್ಯದ ಎಲ್ಲ ಹಳ್ಳಿಗಳಿಗೂ ಒಂದೇ ತತ್ವವನ್ನು ಅನುಸರಿಸಿ ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಒತ್ತಿ ಹೇಳುತ್ತೇನೆ.

ಒಕ್ಕಲುತನದ ದೃಷ್ಟಿಯಿಂದ ಹೇಳುವುದಾದರೆ ರಾಜ್ಯದಲ್ಲಿ ಈಗ 25—30 ಸಾವಿರ ಕೆರೆಗಳಿಗೆ ಲಕ್ಷಾಂತರ ಎಕರೆ ಜಮೀನು ನೀರಾವರಿ ಆಗುತ್ತದೆ, ಆದರೆ ಕೆಲವು ಕೆರೆಗಳಲ್ಲಿ ಸಾಕಷ್ಟು ನೀರು ನಿಲ್ಲುವುದಕ್ಕೆ ಜಾಗವಿಲ್ಲ. ಸಹಸ್ರಾರು ಕೆರೆಗಳು ಹೂತು ಹೋಗಿವೆ. ಆ ಕೆರೆಗಳಲ್ಲಿ ಹೂತು ಹೋಗಿರತಕ್ಕ ಮಣ್ಣನ್ನು ತೆಗೆಯುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿಲ್ಲ. ಆದ್ದರಿಂದ ಹೂಳು ತುಂಬಿಕೊಂಡಿರತಕ್ಕ ಕೆರೆಗಳಲ್ಲಿ ಹೂಳು ಮಣ್ಣನ್ನು ತೆಗೆದು ಆ ಕೆರೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ನಿಲ್ಲುವಂತೆ ಮಾಡಬೇಕೆಂದು ನಾನು ಹೇಳುತ್ತೇನೆ.

ಕಾಲೇಜುಗಳ ವಿಚಾರದಲ್ಲಿ ಹೇಳುವುದಾದರೆ ಕೆಲವು ಕಾಲೇಜುಗಳಿಗೆ ಧನ ಸಹಾಯವನ್ನು ನೀಡುವುದರಲ್ಲಿ ಏರುಪೇರಾಗಿದೆ. ಆದ್ದರಿಂದ ಕಾಲೇಜುಗಳಿಗೆ ಧನಸಹಾಯ ಮಾಡುವುದರಲ್ಲಿ ಏರುಪೇರಾಗದಂತೆ ಎಲ್ಲಾ ಕಾಲೇಜುಗಳಿಗೂ ಒಂದೇ ಸಮನಾಗಿ ಹಣವನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಮತ್ತು ಪ್ರತಿಯೊಂದು ಶಾಲೆಯೂ ಉತ್ತಮ ರೀತಿಯಲ್ಲಿ ನಡೆಯುವ ಹಾಗೆ ಸರ್ಕಾರದವರು ಧನಸಹಾಯವನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ.

ಪ್ರತಿಯೊಂದು ಗ್ರಾಮಕ್ಕೂ ವಾಚನಾಲಯ ಬೇಕು. ಗ್ರಾಮಾಂತರ ಜನಗಳಿಗೆ ದೇಶದಲ್ಲಿ ನಡೆಯತಕ್ಕ ಸುದ್ದಿಸಮಾಚಾರಗಳು ತಿಳಿಯುವಂತಾಗಬೇಕು. ಕೆಲವು ಪಂಚಾಯಿತಿಗಳು ವೃತ್ತಪತ್ರಿಕೆಗಳನ್ನು ತರಿಸುತ್ತಾರೆ. ಪ್ರತಿಯೊಂದು ಹಳ್ಳಿಗೂ ಕೂಡ ವಾಚನಾಲಯವನ್ನು ಒದಗಿಸತಕ್ಕ ಅವಶ್ಯಕತೆ ಇದೆ. ಗ್ರಾಮಾಂತರಗಳಲ್ಲಿ ಪಂಚಾಯಿತಿಗಳ ಪರಿಸ್ಥಿತಿಯು ತೀರಾ ಚಿಂತಾಜನಕವಾಗಿದೆ. ಪಂಚಾಯಿತಿಯ ಕಾರ್ಯದರ್ಶಿಯವರಿಗೆ 50 ರೂಪಾಯಿ ಪಗಾರ ಕೊಡುತ್ತಿದ್ದಾರೆ. ಆ ಹಣದಿಂದ ಪಂಚಾಯಿತಿಯ ಸೆಕ್ರೆಟರಿ ಯಾವ ರೀತಿ ಮಾಡಬೇಕು. ಪಂಚಾಯಿತಿಗಳಿಗೆ ಸಾಕಷ್ಟು ಉತ್ಪನ್ನ ಸಿಕ್ಕುವುದಿಲ್ಲ. ಆದ್ದರಿಂದ ಈ ಪಂಚಾಯಿತಿಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕಾಗಿ ರಾಜ್ಯ ಸರ್ಕಾರದವರು ಹಣ ಸಹಾಯ ಮಾಡಬೇಕು. ಪಂಚಾಯಿತಿ ರಾಜ್ಯ ನಿಜವಾಗಿ ಸ್ಥಾಪನೆಯಾಗಿ ಅಧಿಕಾರ ವಿಕೇಂದ್ರಿಕರಣವಾಗಬೇಕೆನ್ನುವ ಕನಸು ಏನಿದೆ ಅದು ನನಸಾಗಬೇಕು. ಮತ್ತು ಪಂಚಾಯಿತಿಗಳ ಪರಿಸ್ಥಿತಿ ಸುಧಾರಣೆಯಾಗಬೇಕು, ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಆಗಬೇಕು ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸಹಕಾರ ಸಂಘಗಳ ಪರಿಸ್ಥಿತಿಯನ್ನು ನೋಡಿದರೆ ರಾಜ್ಯದಲ್ಲಿ 100ಕ್ಕೆ 70 ಸಹಕಾರ ಸಂಘಗಳು ಸುಸ್ತಿಯಾಗಿ ಹಳ್ಳಿಗಳಲ್ಲಿ ಸಾಲವನ್ನು ವಸೂಲು ಮಾಡುವಂತಹ ಪರಿಸ್ಥಿತಿಯಲ್ಲಿ ಇಲ್ಲ. ರೈತರಿಗೆ ತೆಗೆದುಕೊಂಡಂತಹ ಸಾಲವನ್ನು ವಾಪಸ್ಸು ಕೊಡುವಂತಹ ಮನೋಭಾವವಿಲ್ಲ. ಪ್ರತಿಯೊಂದು ಹಳ್ಳಿಯಲ್ಲಿಯೂ ಪ್ರತಿಯೊಂದು ಸಹಕಾರ ಸಂಘಗಳಲ್ಲಿಯೂ 100ಕ್ಕೆ 60 ಜನರ ಮೇಲೆ ಆರ್ಬಿಟ್ರೇಷನ್ ಕೇಸು ಹಾಕಿದ್ದಾರೆ. ಇದರಿಂದ 100ಕ್ಕೆ 10ರಷ್ಟು ಖರ್ಚು ಬರುತ್ತದೆ. ಆದ್ದರಿಂದ ಸಹಕಾರ ಸಂಘಗಳಲ್ಲಿ ಅನೇಕ ರೀತಿಯ ಸುಧಾರಣೆಗಳನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ಪತ್ರೆಗಳ ವಿಷಯದಲ್ಲಿ ಹೇಳುವುದಾದರೆ ಸಣ್ಣ ಸಣ್ಣ ದವಾಖಾನೆಗಳಲ್ಲಿ ಎಂ. ಡಿ. ಆಗಿರುವ ಡಾಕ್ಟರನ್ನು ನೇಮಕ ಮಾಡುತ್ತಿದ್ದಾರೆ, ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಮಾತ್ರ ಎಂ.ಬಿ.ಬಿ.ಎಸ್. ಆಗಿರುವ ಡಾಕ್ಟರನ್ನು ನೇಮಕ ಮಾಡಿದ್ದಾರೆ. ಅದು ಸರಿಯಲ್ಲ. ಸಣ್ಣ ದವಾಖಾನೆ ಆಗಲೀ, ಹೆಲ್ತ್ ಯೂನಿಟ್ ಆಗಿರಲೀ, ಜನರಲ್ ಆಸ್ಪತ್ರೆಯಾಗಿರಲಿ, ಕಾಟೇಜ್ ಆಸ್ಪತ್ರೆಯಾಗಿರಲಿ ಎಲ್ಲಾ ಆಸ್ಪತ್ರೆಗಳಿಗೂ ಕೂಡ ಎಂ.ಬಿ.ಬಿ.ಎಸ್. ಆಗಿರತಕ್ಕ ಡಾಕ್ಟರನ್ನೇ ನೇಮಿಸಬೇಕು. ಕೆಲವು ಕಡೆ ದವಾಖಾನೆಗಳನ್ನು ತೆರೆದು ಡಾಕ್ಟರಿದ್ದರೆ, ಔಷಧಿ ಇರುವುದಿಲ್ಲ, ಔಷಧಿ ಇದ್ದರೆ ಕಾಂಪೌಂಡರು ಇರುವುದಿಲ್ಲ, ಕಾಂಪೌಂಡರ್ ಇದ್ದಗೆ ನರ್ಸ್ ಇರುವುದಿಲ್ಲ. ಇದು ಸರಿಯಲ್ಲ. ದವಾಖಾನೆಗಳನ್ನು ತೆರೆದ ಮೇಲೆ ಅಲ್ಲಿಗೆ ಏನೇನು ಸೌಲಭ್ಯಗಳನ್ನು ಒದಗಿಸಬೇಕೋ ಅದೆಲ್ಲವನ್ನೂ ಒದಗಿಸುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು.

ನಮ್ಮ ರಾಜ್ಯದ ಅಭಿವೃದ್ಧಿಯಾಗಬೇಕಾದರೆ, ನಮ್ಮ ರಾಜ್ಯದ ಕಲ್ಯಾಣ ಸುಗಮವಾಗಿ ನಡೆಯಬೇಕಾದರೆ ಬಹಳ ಮುಖ್ಯವಾಗಿ ಸರ್ಕಾರಿ ಅಧಿಕಾರಿಗಳು ಗ್ರಾಮಸೇವಕನಿಂದ ಹಿಡಿದು ಮೇಲ್ಮಟ್ಟದ ಅಧಿಕಾರಿಗಳವರೆಗೂ ವರ್ಗಾವರ್ಗಿ ವಿಷಯದಲ್ಲಿ ಒಂದು ದಿಟ್ಟ ನಿಲುವನ್ನು ತೆಗೆದು

(ಶ್ರೀ ಬಿ. ಜಿ. ಬಣಕಾರ್)

ಕೊಳ್ಳಬೇಕು. ಇಲ್ಲದೇ ಹೋದರೆ ಸರ್ಕಾರಿ ಅಧಿಕಾರಿಗಳು ಏನಿದ್ದಾರೆ ಅವರು ಮಂತ್ರಿಗಳನ್ನು ಕಡೆಗಾಣಿಸಬಹುದು, ಎಂ.ಎಲ್.ಎ.ಗಳನ್ನು ಕಡೆಗಣಿಸಬಹುದು. ಆದ್ದರಿಂದ ವರ್ಗಾವರ್ಗಿಗಳನ್ನು ಮಾಡುವಾಗ ಯಾವ ಯಾವ ಅಧಿಕಾರಿಗಳನ್ನು ಯಾವ ಯಾವ ಜಾಗದಲ್ಲಿ ಹಾಕಬೇಕು ಎಂಬುದನ್ನು ಸರಿಯಾಗಿ ಯೋಚನೆ ಮಾಡಿ ವರ್ಗಾ ಮಾಡಬೇಕು. ಮತ್ತು ಆಯಾ ಕ್ಷೇತ್ರದ ಎಂ.ಎಲ್.ಎ.ಗಳ ಅಭಿಪ್ರಾಯವನ್ನು ತೆಗೆದುಕೊಂಡು ವರ್ಗಾವರ್ಗಿಗಳನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಟ್ರಾನ್ಸ್‌ಪೋರ್ಟ್ ವಿಷಯದಲ್ಲಿ ಹೇಳುವುದಾದರೆ ಸರ್ಕಾರಿ ಬಸ್ಸಿನಲ್ಲಿ ಒಂದು ಬಸ್ಸಿನಲ್ಲಿ ಒಂದು ದಿವಸಕ್ಕೆ 200 ರೂಪಾಯಿ ಉತ್ಪತ್ತಿ ಬರುತ್ತದೆ. ಆದರೆ ಖಾಸಗೀ ಬಸ್ಸಿನಲ್ಲಿ 600 ರೂಪಾಯಿ ಬರುತ್ತದೆ. ಆದ್ದರಿಂದ ರಾಜ್ಯ ಸರ್ಕಾರದವರು ಮತ್ತು ಎಂ.ಎಸ್.ಆರ್.ಟಿ.ಸಿ. ಅವರು ಈ ಬಗ್ಗೆ ನಿಗಾ ಕೊಡಬೇಕು. ಖಾಸಗೀ ಬಸ್ಸಿನಲ್ಲಿ ಒಂದು ದಿವಸಕ್ಕೆ 600 ರೂಪಾಯಿಗಳ ಉತ್ಪತ್ತಿ ಬಂದು, ಸರ್ಕಾರಿ ಬಸ್ಸಿನಲ್ಲಿ 200 ರೂಪಾಯಿಗಳ ಉತ್ಪತ್ತಿ ಬಂದರೆ ಇದು ನಿಜವಾಗಿಯೂ ಚಿಂತಾಜನಕವಾದ ವಿಚಾರ. ಈ ದೃಷ್ಟಿಯಿಂದ ಎಂ.ಎಸ್.ಆರ್.ಟಿ.ಸಿ. ಕಾರ್ಪೋರೇಷನ್ ಏನಿದೆ ಅದರ ಆಡಳಿತ ವ್ಯವಸ್ಥೆ ಸರಿಯಾಗಿ ನಡೆಯುವಂತೆ ಮಾಡಬೇಕು, ಮತ್ತು ಹೆಚ್ಚಿನ ಉತ್ಪತ್ತಿ ಬರುವಂತೆ ಮಾಡಬೇಕು. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಗಾಡಿ ವಿರೂಪಾಕ್ಷ ಮಲ್ಲಪ್ಪ (ಹಳಿಯಾಲ).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಅರ್ಥಿಕ ಮಂತ್ರಿಗಳು 1972-73ನೇ ಸಾಲಿನ ಬಜೆಟ್ಟನ್ನು ಏನು ಈ ಸಭೆಯ ಮುಂದೆ ಮಂಡಿಸಿದ್ದಾರೆ, ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ, ಮತ್ತು ಅಭಿನಂದಿಸುತ್ತೇನೆ. ಇದು ನಿಜವಾಗಿಯೂ ಸಮಾಜವಾದದ ಮುನ್ನಡೆಯ ಮತ್ತು ಪ್ರಗತಿಪರವಾದ ಹೆಜ್ಜೆಯನ್ನು ಇಟ್ಟಿರುವುದನ್ನು ತೋರಿಸುತ್ತದೆ. ಮಾನ್ಯ ಹಣಕಾಸಿನ ಮಂತ್ರಿಗಳು ನಮ್ಮ ರಾಜ್ಯದ ಓವರ್ ಡ್ರಾಫ್ಟನ್ನು ತೀರಿಸುವ ವಿಷಯದಲ್ಲಿ ಸಾಕಷ್ಟು ಬುದ್ಧಿವಂತಿಕೆಯಿಂದ ಕೆಲಸ ಮಾಡಿದ್ದಾರೆ. ಕಾಳಿ ನದಿಯ ಯೋಜನೆಯನ್ನು ಕೇಂದ್ರ ಸರ್ಕಾರದವರು ವಹಿಸಿಕೊಂಡಿದ್ದು ಸಂತೋಷದ ಸಂಗತಿ. ಈ ವಿಷಯದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಸಂಶಯಪಡಬೇಕಾಗಿಲ್ಲ. ಅವರು ಈ ವಿಚಾರದಲ್ಲಿ ಸಂಶಯಪಟ್ಟು ಇದನ್ನು ವಿರೋಧ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಕೇಂದ್ರ ಸರ್ಕಾರದವರು ಈ ಕಾಳಿನದಿ ಯೋಜನೆಗೆ ಸಂಪೂರ್ಣ ಹಣ ಸಹಾಯವನ್ನು ಕೊಟ್ಟಿದ್ದು ಸ್ತುತ್ಯವಾದದ್ದು. ಅವರು ಈ ವಿಚಾರದಲ್ಲಿ ಯಾವುದೇ ಭಯಪಡಬೇಕಾದ ಕಾರಣವಿಲ್ಲ. ಕಾಳಿನದಿಯ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದರ ಜೊತೆಗೆ ಆ ಪ್ರದೇಶದಲ್ಲಿ ಜಮೀನು ಮುಳುಗಡೆಯಾದ ರೈತರಿಗೆ ಭೂಮಿ ಮತ್ತು ವಸತಿ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ದೇಶದಲ್ಲಿ ಇನ್ನೂ ಭೂಗರ್ಭ ಸಂಶೋಧನೆ ಆಗಿಲ್ಲ. ಖನಿಜಸಂಪತ್ತಿನ ಸಂಶೋಧನೆ, ತೈಲ ಸಂಶೋಧನೆಯನ್ನು ಮಾಡಿ ಔದ್ಯೋಗಿಕರಣವನ್ನು ಮಾಡಿದರೆ ದೇಶದ ಅಭಿವೃದ್ಧಿಯಾಗುತ್ತದೆ. ಈಗ ಮೊನ್ನೆ ಅಮೆರಿಕಾದಲ್ಲಿ ಭೂಸಂಪನ್ಮೂಲವನ್ನು ಕಂಡುಹಿಡಿಯುತಕ್ಕಂಥಾ ಎಟಿಟರ್ಸ್ ಎನ್ನತಕ್ಕಂಥಾ ಒಂದು ಉಪಗ್ರಹವನ್ನು ತಯಾರಿಸಿದ್ದಾರೆ ಎಂದು ಗೊತ್ತಾಗಿದೆ. ಈ ಉಪಗ್ರಹವನ್ನು ತರಿಸಿ ನಮ್ಮ ರಾಜ್ಯದಲ್ಲಿರತಕ್ಕ ಭೂಸಂಪನ್ಮೂಲಗಳನ್ನು ಕಂಡುಹಿಡಿದು ನಮ್ಮ ರಾಜ್ಯದಲ್ಲಿ ಔದ್ಯೋಗಿಕರಣ ಮಾಡಿ ಪ್ರಗತಿಯನ್ನು ಸಾಧನೆ ಮಾಡಬೇಕು ಎಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸರ್ಕಾರದವರು ಜನತೆಗೆ ಕೆಲವೊಂದು ಸೌಲಭ್ಯವನ್ನು ಒದಗಿಸಬೇಕಾದರೆ ಸರ್ಕಾರದವರು ಜನತೆಗೆ ಕರವನ್ನು ಹಾಕಬೇಕಾಗುತ್ತದೆ. ಈಗ ಕಾಂಟ್ರಾಂಕ್ಟ್ ಕ್ಯಾರೇಜ್‌ಗಳ ಮೇಲೆ ಕೆಲವೊಂದು ಕರವನ್ನು ಹಾಕಿದ್ದಾರೆ. ಇದನ್ನು ಹಾಕಿರುವುದು ಸ್ತುತ್ಯವಾದದ್ದು, ಆದರೆ ನೀರು ಕರ ಹಾಕಿರುವುದು ಅನ್ಯಾಯವಾಗಿದೆ. ಇದಕ್ಕೆ ಬದಲಾಗಿ ಸೇಲ್ಸ್ ಟ್ಯಾಕ್ಸ್, ಸ್ಟ್ಯಾಂಪ್ ಡ್ಯೂಟಿ ಮತ್ತು ಇನ್‌ಕಂಟ್ಯಾಕ್ಸನ್ನು ಜಾಸ್ತಿ ಮಾಡಬಹುದಾಗಿತ್ತು. ಅಧಿಕಾರಿಗಳ ವೇತನ ಮಿತಿಯನ್ನು ಒಂದು ಸಾವಿರ ರೂಪಾಯಿಗಳಿಗೆ ನಿಗದಿ ಮಾಡಬೇಕು. ಈಗ ನೀರಿನ ತೆರಿಗೆಯನ್ನು ಹಾಕಿರುವುದು ರೈತರಿಗೆ ಕಳವಳವನ್ನುಂಟುಮಾಡಿದೆ. ನಮ್ಮ ಜಿಲ್ಲೆಯಲ್ಲಿರತಕ್ಕ ಯಾವ ಕೆರೆಯಲ್ಲಿಯೂ ಕೂಡ ಒಂದು ಬೆಳೆಗೂ ಸರಿಯಾಗಿ ನೀರು ಸಿಕ್ಕುವುದಿಲ್ಲ. ಹೀಗಿರುವಾಗ ಈ ಕರವನ್ನು ಹಾಕಿರುವುದು ಅನ್ಯಾಯವಾದದ್ದು. ಆದ್ದರಿಂದ ಈ ಕರವನ್ನು ರದ್ದು ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ ಯಾವ ದೊಡ್ಡ ನೀರಾವರಿಯನ್ನೂ ತೆಗೆದು

ಕೊಳ್ಳದೇ ಇರುವುದು ಬಹಳ ವಿಷಾದದ ಸಂಗತಿ. ಬಾಳಗಡಿ, ಅತ್ತಿಗೆರೆ, ಹುಟಿಗೇರಿ ಯೋಜನೆಗಳನ್ನು ಸರ್ವೆ ಮಾಡಿಸಿದರೂ ಕೂಡ ಅವುಗಳನ್ನು ಕೈಬಿಡುವುದಕ್ಕೆ ಕಾರಣವೇನೆಂಬುದು ಗೊತ್ತಾಗಲಿಲ್ಲ. ಈ ಯೋಜನೆಗಳನ್ನು ಕೈಗೊಳ್ಳಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಅರಣ್ಯ ಮಂತ್ರಿಗಳು ಒಂದು ಇಂಚು ಭೂಮಿಯನ್ನೂ ಸಹಿತ ಅರಣ್ಯದಲ್ಲಿ ಬಿಟ್ಟುಕೊಡುವುದಿಲ್ಲ ಎಂದು ಹೇಳಿದಂತಹ ಮಾತು ಬಹಳ ವಿಷಾದದ ಸಂಗತಿ. ನಿಜವಾಗಿಯೂ ಮಲೆನಾಡಿನ ಪರಿಸ್ಥಿತಿ ಬಹಳ ಕಠಿಣವಾದ ಪರಿಸ್ಥಿತಿಯಾಗಿದೆ. ಆದ್ದರಿಂದ ಅಲ್ಲಿ ಭೂಮಿ ಇಲ್ಲದೇ ಇರುವವರಿಗೆ ಭೂಮಿಯನ್ನು ಕೊಡಲೇಬೇಕಾಗುತ್ತದೆ. ರಾಷ್ಟ್ರಪತಿಗಳ ಆಳ್ವಿಕೆಯಲ್ಲಿ ಸಲಹಾ ಸಮಿತಿಗಳನ್ನು ಮಾಡಿದ್ದರೂ ಕೂಡ ರಾಜ್ಯಪಾಲರು ನೇರವಾಗಿ ಭೂಮಿಯನ್ನು ಹಂಚಿರುವುದು ಕಂಡುಬರುತ್ತದೆ. ಈ ಭೂಮಿಯನ್ನು ಹಂಚುವುದರಲ್ಲಿ ಬಹಳ ಅನ್ಯಾಯಗಳು ಆಗಿವೆ. ಶ್ರೀಮಂತರಿಗೇ ಭೂಮಿಯನ್ನು ಹಂಚಿದ್ದಾರೆ. ಕೆಲವರಿಂದ ಲಂಚವನ್ನು ತೆಗೆದುಕೊಂಡು ಎರಡು ಸಲ ಒಬ್ಬರಿಗೆ ಭೂಮಿಯನ್ನು ಹಂಚಿದ್ದಾರೆ. ಆದ್ದರಿಂದ ಇಂಥಾ ಅನ್ಯಾಯಗಳನ್ನು ಪರಿಶೀಲಿಸಿ ಪುನಃ ಭೂಮಿಯನ್ನು ಹಂಚುವ ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ. ಇನ್ನು ನಮ್ಮ ಮಲೆನಾಡಿನ ಯಲ್ಲಾಪುರಕ್ಕೆ ಅನುಕೂಲವಾಗುವಂತಹ ಒಂದು 21 ಲಕ್ಷ ರೂಪಾಯಿಯ ಯೋಜನೆಯನ್ನು ಸ್ವಿಸ್ ಸಹಾಯದಿಂದ ತಯಾರು ಮಾಡಿದ್ದರು. ಆದರೆ ಅದನ್ನು ಅಮಲಿನಲ್ಲಿ ತರಲಿಲ್ಲ. ಆದ್ದರಿಂದ ಈ ಯೋಜನೆಯನ್ನು ಕೂಡಲೇ ಕಾರ್ಯಗತಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಇನ್ನು ಶಿಕ್ಷಣದ ಬಗ್ಗೆ ಹೇಳುವುದಾದರೆ ವಿದ್ಯೆ ಮಾನವ ಕುಲದ ಕಲ್ಯಾಣದ ಕಲ್ಪವೃಕ್ಷ. ಮಹಾತ್ಮ ಗಾಂಧೀಜಿಯವರು ಸಹ, ದೇಶದ ಪ್ರಗತಿಯಾಗಬೇಕಾದರೆ ವಿದ್ಯೆಯು ಬಹಳ ಮುಖ್ಯವಾದುದು ಎಂದು ಹೇಳಿದ್ದಾರೆ. ಆದರೆ ಇವೊತ್ತಿನ ದಿವಸ ಇಂತಹ ಪವಿತ್ರವಾದ ಕ್ಷೇತ್ರದಲ್ಲಿ ಲಂಚವು ತಾಂಡವಾಡುತ್ತಿರುವುದನ್ನು ನೋಡಿದರೆ ನನಗೆ ಬಹಳ ವಿಷಾದವಾಗುತ್ತದೆ. ಇಂದು ಆಫೀಸುಗಳಲ್ಲಿ ಸಣ್ಣ ಕ್ಲರ್ಕುಗಳಿಂದ ಹಿಡಿದು ಮೇಲಾಧಿಕಾರಿಗಳ ವರೆಗೆ ನೇಮಕ ಮತ್ತು ಟ್ರಾನ್ಸ್‌ಫರ್‌ಗಳನ್ನು ಮಾಡಬೇಕಾದರೆ 200ರಿಂದ 500 ರವರೆಗೆ ಹಣವನ್ನು ಕೊಡಬೇಕಾಗಿದೆ. ಇದರಿಂದ ಅಂತಹ ಅಧಿಕಾರಿಗಳು ರಿಟೈಯರ್ ಆದಮೇಲೆ ದೊಡ್ಡ ದೊಡ್ಡ ಆರ್. ಸಿ. ಸಿ. ಮನೆಗಳನ್ನು ಕಟ್ಟುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದು ಬಹಳ ವಿಷಾದಕರವಾದ ಸಂಗತಿ. ಅದೇ ರೀತಿ ಶಿಕ್ಷಕರು ಇವತ್ತು ತಮ್ಮ ಶಿಕ್ಷಣ ವೃತ್ತಿಯನ್ನು ಬಿಟ್ಟು ಬೇರೆ ಉದ್ಯೋಗ ಮಾಡುತ್ತಿದ್ದಾರೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಒಬ್ಬ ಶಿಕ್ಷಕ ಪಗಾರ ತೆಗೆದುಕೊಳ್ಳುವುದಕ್ಕೆ ಮಾತ್ರ ಬರುತ್ತಾನೆ. ಉಳಿದ ಸಮಯದಲ್ಲಿ ಫಾರೆಷ್ಟ್ ಕಂಟ್ರಾಕ್ಟ್ ಮಾಡುತ್ತಿದ್ದಾನೆ ಅವನೇ ಒಂದು ಸಾರಿ ಅದನ್ನು ಒಪ್ಪಿ ಕ್ಷಮೆ ಕೇಳಿದ್ದಾನೆ. ಅದೇ ರೀತಿ ಈ ಮಿಡ್ಡೇ ಮೀಲ್ ಪ್ರೋಗ್ರಾಂಮನ್ನು ತೆಗೆದು ಹಾಕಬೇಕು. ಅದರಿಂದ ಶಿಕ್ಷಕರು ಬಹಳ ದುರುಪಯೋಗ ಮಾಡಿಕೊಂಡು ಹಣ ಮಾಡುತ್ತಿದ್ದಾರೆ. ಆದ್ದರಿಂದ ಇಂತಹ ವಿಚಾರಗಳಿಗೆ ಸರ್ಕಾರದವರು ಹೆಚ್ಚಿನ ಗಮನ ಕೊಟ್ಟು, ಶಿಕ್ಷಣ ಕ್ಷೇತ್ರದಲ್ಲಿ ಒಂದು ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿ ದೋಷರಹಿತ ಆಡಳಿತ ಬರುವ ಹಾಗೆ ಮಾಡಬೇಕಾಗಿದೆ. ಅದರಂತೆ, ಹರಿಜನ ಗಿರಿಜನರಿಗೆ ಪುಕ್ಕಟೆಯಾಗಿ ಪಠ್ಯಪುಸ್ತಕಗಳನ್ನು ಹಂಚಬೇಕು. ಮತ್ತು ಎಷ್ಟೋ ಸಾರಿ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಪುಸ್ತಕಗಳು ದೊರೆಯುತ್ತಾ ಇಲ್ಲ. ಅದನ್ನು ಕೂಡ ಸಕಾಲದಲ್ಲಿ ದೊರೆಯುವಂತೆ ಮಾಡಬೇಕು ಮತ್ತು ನಮ್ಮ ಪರೀಕ್ಷಾ ಪದ್ಧತಿಯನ್ನು ಬದಲಾಯಿಸಲು ಒಂದು 5 ಮಂದಿ ಸದಸ್ಯರ ಕಮಿಷನ್ ನೇಮಕ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಐ. ಜಿ. ಸನದಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಉಜ್ವಲ ಭವಿಷ್ಯತ್ತಿನ ಸ್ಪಷ್ಟ ಹಾಗೂ ವಿಶ್ವಾಸ ಪೂರಿತವಾದ ಅರ್ಥ ಸಚಿವ ಶ್ರೀ ಎಂ. ವೈ. ಘೋರ್ಪಡೆಯವರು ಮಂಡಿಸಿದ ಆಯವ್ಯಯ ಪತ್ರವನ್ನು ಕರ್ನಾಟಕದ ಕುಲಕೋಟಿ ಹಾರ್ದಿಕವಾಗಿ ಸ್ವಾಗತಿಸಿದೆ—ಅವರಿಗೆ ಅಭಿನಂದನೆಗಳು.

ರಾಜ್ಯದ ಅರ್ಥ ಮಂತ್ರಿಯವರು ಬಡ ಜನತೆಯ ಮೇಲಿನ ಹೆಚ್ಚಿನ ಕರಭಾರವನ್ನು ತಪ್ಪಿಸುವಲ್ಲಿ ತೋರಿದ ಕಾರ್ಯ ಕುಶಲತೆ ಪ್ರಶಂಸನೀಯವಾಗಿದೆ.

ರಾಜ್ಯದ ಅಭಿವೃದ್ಧಿ ನಿರಾತಂಕವಾಗಿ ಸಾಗಬೇಕು; ಕೇಂದ್ರಕ್ಕೆ ಕೊಡಬೇಕಾಗಿದ್ದ ಸಾಲ ತೀರಿಸುತ್ತಾ ಹೋಗಬೇಕು; ಆದರೂ ಶ್ರೀಸಾಮಾನ್ಯನ ಮೇಲೆ ಅಧಿಕ ಕರಭಾರವಿಲ್ಲದ ಚಮತ್ಕಾರ ಮಾಡಿ ತೋರಿಸಿದ ಅರ್ಥ ಮಂತ್ರಿಯವರು ಮುಂದಿನ ಎರಡು ವರ್ಷಗಳು ಆರ್ಥಿಕವಾಗಿ ತುಂಬಾ ಕಷ್ಟದಾಯಕವಾಗಲಿವೆ ಎರಿಬ ಭವಿಷ್ಯ ನುಡಿದು ಎಚ್ಚರಿಕೆ ನೀಡಿದ್ದಾರೆ. ರಾಜ್ಯದ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಜನತೆಯನ್ನು ಚೇತರಿಸಿದ ಚಾಟಿಯ ಏಟು ಇದು. ಇದಕ್ಕೆ ಹೆದರಬೇಕಿಲ್ಲ. ಆರ್ಥಿಕ ಅಭಿವೃದ್ಧಿ—ಹಾಗೂ ಸ್ವಾವಲಂಬನೆಯ ಆಶಯದ ಅವರ ಮನೋಧೈರ್ಯವನ್ನು ಇಲ್ಲಿ ನೆನೆದುಕೊಳ್ಳಬೇಕು.

(ಶ್ರೀ ಐ. ಜಿ. ಸನದಿ)

ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸ್ ಹಾಗೂ ಅರ್ಥಮಂತ್ರಿಗಳ, ಕೇಂದ್ರ ಮಂತ್ರಿಗಳ ಸಾಧನೆಯಾಗಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರ ಮೇಲೆ ಕರ್ನಾಟಕದ ಜನಸ್ತೋಮ ಇರಿಸಿದ ಅಪಾರ ವಿಶ್ವಾಸದ ಪ್ರತೀಕವಾಗಿ ಕಾಳೀ ನದಿ ಜಲವಿದ್ಯುತ್ ಯೋಜನೆಗೆ ರಕ್ಷಾಕವಚವಾಗಿ ಕೇಂದ್ರದಿಂದ ಸಂಪೂರ್ಣ ನೆರವು ದೊರೆಯಲಿದೆ—ಎಂಬುದು ಹೆಮ್ಮೆಯ ವಿಷಯ.

164 ಕೋಟಿ ರೂಪಾಯಿಯ ಕರ್ನಾಟಕಕ್ಕೆ ವರದ ಹಸ್ತ ನೀಡುವ ಕಾಳೀ ನದಿ ಯೋಜನೆಯನ್ನು ಅದಕ್ಷ ಕಂಟ್ರಾಕ್ಟರ್ ಹಾಗೂ ವ್ಯಾಪಾರೀ ರಾಜಕಾರಣಿಗಳ ಪಾಪದ ಕೈಗಳಿಗೆ ಸಿಲುಕಿ ಸೋರುತ್ತಿರುವ ಶರಾವತಿಯ ಕರ್ಮಕಥೆಯಂತಾಗಬಾರದಾಗಿದ್ದರೆ ಸರಕಾರ ಈಗಿನಿಂದಲೇ ಎಚ್ಚರಿಕೆ ವಹಿಸಬೇಕು.

ಸರಕಾರದ ದುಡ್ಡು ನಮ್ಮ ದುಡ್ಡು; ಸರಕಾರಕ್ಕೆ ಆದ ಹಾನಿ ನಮಗಾದ ಹಾನಿ—ಎಂಬ ಸದಾಚಾರ ಸಂಹಿತೆಯ ಪ್ರಜ್ಞೆ ಮೂಡಿಸುವ ಲೋಕೋಪಯೋಗಿ ಶಾಖೆಯ ಮಂತ್ರಿ ಶ್ರೀಮಾನ್ ಚನ್ನಬಸಪ್ಪನವರು ಮೈತುಂಬ ಕಣ್ಣುಳ್ಳವರಾಗಿದ್ದಾರೆ ಎಂಬ ವಿಶ್ವಾಸ ನನಗಿದೆ.

ಸುಡುವ ಮನೆಗಳ ಹಿರಿದಂತೆ ಸರಕಾರದ ದುಡ್ಡನ್ನು ಕಬಳಿಸುತ್ತಿರುವ ಕದೀಮರಿಗೆ ತಕ್ಕ ಶಾಸ್ತಿಯಾಗಬೇಕು. ಸರಕಾರ ಹಾಗೂ ಅಧಿಕಾರಿ ವರ್ಗ ಸತ್ಯದ ಸಂಕೀರ್ಣವಾದ ಮಾರ್ಗವನ್ನು ಬಿಟ್ಟು ಭ್ರಷ್ಟಾಚಾರದ ಬೃಹತ್ ವಾಮ ಮಾರ್ಗವನ್ನು ಹಿಡಿದಾಗ ಕಣ್ಣು ತೆರೆಯದಿದ್ದರೆ ಜನತೆ ಸಾಮಾಜಿಕ ಬಹಿಷ್ಕಾರ ಹಾಕುವ ಕಾಲ ಸನ್ನಿಹಿತವಾಗಲಿದೆ.

ಬೆಕ್ಕು ತಾನು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಜಗತ್ತು ನೋಡಲಾರದೆ? ರಾಜಕಾರಣಿಗಳು ಮಾಡಿದ ಅವ್ಯವಹಾರಗಳು ಮುಚ್ಚಲಾರವು ಎಂಬುದಕ್ಕೆ ಶರಾವತಿಯ ಕರ್ಮಕಥೆಯೇ ಸಾಕ್ಷಿಯಾಗಿದೆ.

ರಾಜ್ಯದ ಯೋಜನೆಗಳು ಅಭಿವೃದ್ಧಿ ಹೊಂದಬೇಕಿದ್ದಲ್ಲಿ 'ಸದ್ಗುಣಿ' ಶೀಲ ಸಂಪನ್ನ ಪ್ರಾಮಾಣಿಕ ಹಾಗೂ ಸೇವಾನಿಷ್ಠ ಜನತೆ ಹಾಗೂ ರಾಜಕಾರಣಿಗಳ ಅವಶ್ಯಕತೆ ಇಂದು ನಾಡಿಗೆ ಇದೆಯೆಂಬುದನ್ನು ಈ ಮಹಾಮನೆಯ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ಘೋರ್ಪಡೆಯವರು, ಹಳ್ಳಿ ಪಟ್ಟಣಗಳ ಅಂತರ ಕಡಮೆ ಮಾಡಿ ಕರ್ನಾಟಕದ ತುಂಬೆಲ್ಲಾ ವಿದ್ಯುತ್ ಒದಗಿಸಿ ನೀರಾವರಿಯ ಜಲ ಜಾಲ ನಿರ್ಮಿಸಿ ಕನ್ನಡದ ನೆಲವನ್ನು 'ಸುಜಲಾಂ ಸುಫಲಾಂ' ಆಗಿಸಬೇಕೆಂದಿದ್ದಾರೆ. ಪ್ರತಿಯೊಬ್ಬ ದೃಢಕಾಯನಿಗೆ ಉದ್ಯೋಗ ಒದಗಿಸುವ ಭರವಸೆ ನೀಡಿದ್ದಾರೆ. ಪ್ರಸಕ್ತ ವರ್ಷದಲ್ಲಿ ಕೃಷಿ, ನೀರಾವರಿ, ವಿದ್ಯುತ್‌ಗಾಗಿ ಸುಮಾರು 50 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದಿರುವುದು ಹೆಮ್ಮೆಪಡುವ ವಿಷಯ.

ಕಾಳೀ ನದಿ ಯೋಜನೆ ರೂಪುಗೊಳ್ಳುತ್ತಿರುವಂತೆ 750 ಕೋಟಿ ರೂಪಾಯಿ ವಿಜಯನಗರದ ಉಕ್ಕಿನ ಕಾರ್ಖಾನೆಯ ಶೀಘ್ರ ರಚನೆಗೆ ಮಾನ್ಯ ಘೋರ್ಪಡೆಯವರು, ಸಚಿವ ಕೃಷ್ಣರವರು ವಹಿಸಿದ ಶ್ರಮವನ್ನು ನೆನೆಯದೇ ಇರಲಾರೆವು.

ಭಾರೀ ಉದ್ದಿಮೆ ನಿರ್ಮಾಣಗೊಳ್ಳಲಿರುವ ಬಳ್ಳಾರಿ ಜಿಲ್ಲೆ ಹಾಗೂ ಅದರ ಪಕ್ಕದಲ್ಲಿರುವ ರಾಯಚೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಇದಕ್ಕೆ ಪೂರ್ವಭಾವಿಯಾಗಿ ಕೆಲವೊಂದು ಚಿಕ್ಕ ಪುಟ್ಟ ಕೈಗಾರಿಕೆಗಳನ್ನು ಆರಂಭಿಸಬೇಕು ಎಂದು ಸೂಚಿಸಬಯಸುತ್ತೇನೆ.

ಕನ್ನಡ ನಾಡಿನ ಅಭಿವೃದ್ಧಿಯ ಜೊತೆಗೆನೆ ತಾವು ಕನ್ನಡ ಭಾಷೆಯ ಅಭಿವೃದ್ಧಿಗಾಗಿ 10 ಲಕ್ಷ, ವಿಶ್ವವಿದ್ಯಾನಿಲಯಗಳಲ್ಲಿ ಪ್ರಾದೇಶಿಕ ಸೂಕ್ತ ಗ್ರಂಥಗಳ ಪ್ರಕಟಣೆಗೆ 30 ಲಕ್ಷ, ನಾಡಿನ ಸಾಂಸ್ಕೃತಿಕ, ಸಂಗೀತ, ಸಾಹಿತ್ಯ, ಕಲೆಗಳ ಅಭಿವೃದ್ಧಿಗಾಗಿ ಸುಮಾರು 2 ಕೋಟಿಗೂ ಹೆಚ್ಚು ಹಣ ಒದಗಿಸಿರುವುದು, ಕನ್ನಡ ನಿಘಂಟು, ಕನ್ನಡ ವಿಶ್ವಕೋಶ, 50 ಸಾವಿರ ಪದವೀಧರರಿಗೆ ಶೀಘ್ರಲಿಪಿ ಶಿಕ್ಷಣ, ಹೊಲಿಗೆಯ ಯಂತ್ರಗಳ ಪೂರೈಕೆ— ಇವೆಲ್ಲವುಗಳು ನಾಡಿನ ಅಭಿವೃದ್ಧಿಯ ಮೇಲೆ ಇರತಕ್ಕಂಥಹ ತಮ್ಮ ಪ್ರೇಮವನ್ನು ಎತ್ತಿ ತೋರಿಸುತ್ತವೆ.

ಇನ್ನು ಶಿಕ್ಷಣದ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಮಕ್ಕಳಲ್ಲೂ ಆತ್ಮ ವಿಶ್ವಾಸ ಒಡಮೂಡಿಸುವ ಶಿಕ್ಷಣ ಇಂದು ವಿದ್ಯಾರ್ಥಿಗಳಿಗೆ ದೊರಕುತ್ತಿಲ್ಲ. ಪದವಿಯ ಪೇಪರುಗಳನ್ನು ಪಡೆದು ಹೊರಗೆ ಬರುವವರ ಸಂಖ್ಯೆಯೇ ಅಧಿಕ. ಗುಣ ರೂಪಿಸುವಲ್ಲಿ; ಆಧ್ಯಾತ್ಮ ಹಾಗೂ ನೈತಿಕ ಶಿಕ್ಷಣದ ಅವಶ್ಯಕತೆ ಹೆಚ್ಚಾಗಿದೆ. ಸದ್ಗುಣಗಳಿಂದ ಆತ ಇಂದು ವ್ಯಕ್ತಿ ಪೂಜ್ಯನಾಗಬೇಕು. ಲಿಂಗ—ಜಾತಿಗಳಿಂದಲ್ಲ —ಎಂಬುದಕ್ಕೆ ಗುಣಃ ಪೂಜಾ ಸ್ಥಾನಂ ಗುಣಿಷು ನಚ ಲಿಂಗಂ, ನಚವಯಃ ಎಂಬುದೇ ಸಾಕ್ಷಿ.

ಸಾಧ್ಯವಿದ್ದ ಕಡೆಗಳೆಲ್ಲ ಮಹಾನ್ ಧರ್ಮಗಳ ನೈತಿಕ ಉಪದೇಶಗಳ ಸಹಾಯದಿಂದ ಸಾಮಾಜಿಕ, ನೈತಿಕ, ಆಧ್ಯಾತ್ಮಿಕ—ಶಿಕ್ಷಣ ನೀಡಲು ಪ್ರಜ್ಞಾವಂತರ ಸುಸಂಘಟಿತ ಪ್ರಯತ್ನ ನಡೆಯಬೇಕು. ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳಿಗೆ ಹೆಚ್ಚು ಖರ್ಚು ಮಾಡುತ್ತಿರುವ ಸರ್ಕಾರ ಪ್ರಾಥಮಿಕ ಶಾಲೆಗಳ ಕಡೆಗೆ ಲಕ್ಷ ವಹಿಸಿಲ್ಲ. ಒಬ್ಬಗಟ್ಟಿ ಮನುಷ್ಯ ಒದ್ದರೆ ಬಿದ್ದು ಹೋಗುವ ಪ್ರಾಥಮಿಕ ಶಾಲೆಗಳು ಹುಬ್ಬಳ್ಳಿಯಂತಹ ಶಹರದಲ್ಲಿ ಇನ್ನೂ ಇವೆಯೆಂದರೆ ಹಳ್ಳಿಗಳ ಮಾತೇಕೆ?

ಇನ್ನು ಕೈಗಾರಿಕೆಗಳ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಹುಬ್ಬಳ್ಳಿ ನಗರಕ್ಕೆ ನೀರಿನ ಬವಣೆ ತಪ್ಪುತ್ತಿಲ್ಲ. ಕುಡಿಯುವ ನೀರು ಕಣ್ಣೀರು, ಕೆಲವೊಮ್ಮೆ ಸಾರ್ವಜನಿಕ ನಲ್ಲಿಗಳ ಬಳಿ ನೀರಿಗಾಗಿ ಭಾರೀ ಅನಾಹುತಗಳಾಗಿವೆ. ಹುಬ್ಬಳ್ಳಿಗೆ ಮಲಪ್ರಭೆಯ ನೀರು ದೊರೆಯುವಂತೆ ಮಾಡಬೇಕು. ಹುಬ್ಬಳ್ಳಿ— ಧಾರವಾಡ—ಕುಂದಗೋಳದ ಮಧ್ಯೆ ದೊಡ್ಡ ಪ್ರಮಾಣದ ಉದ್ದಿಮೆ ಆರಂಭಿಸಬೇಕು. ಕೊಳಚೆ ನಿರ್ಮೂಲನೆ ಹಾಗೂ ಹಳೆ ಹುಬ್ಬಳ್ಳಿಯ ಬಳಿಯ ದುರ್ಗಂಧ ನಾಲೆಯ ದುರಸ್ತಿ ಮಾಡಿಸಬೇಕು, ಬಡವರಿಗೆ ವಾಸಿಸಲು ಮನೆ ಸಿಗಬೇಕು.

ಹುಬ್ಬಳ್ಳಿ—ಧಾರವಾಡ ನಗರಗಳಲ್ಲಿ ಇರುವ ಕಡಿಮೆ ಫ್ಯಾಕ್ಟರಿಗಳಾದರೂ ಆಗಾಗ ಅವುಗಳಿಗೆ ರೋಗ ಬಂದೇ ಬರುತ್ತಿದೆ. ಧಾರವಾಡದ ಟೈವಾಕದಲ್ಲಿ ಕೇವಲ 30 ರೂಪಾಯಿ ಸಂಬಳ ಕೊಟ್ಟು ಎಸ್.ಎಸ್.ಎಲ್.ಸಿ. ಹಾಗೂ ಐ.ಟಿ.ಐ. ಆದ 164 ಜನರ ಸಸ್‌ಪೆಂಡ್ ಆದ ರೀತಿ ಹಾಗೂ ಭಾರತ ಮಿಲ್ಲು ಬಂದಾಗಿ ಸಾವಿರಾರು ಕಾರ್ಮಿಕರು ನಿರ್ಗತಿಕರಾಗಿರುವುದು ತಪ್ಪಬೇಕು.

ಆಗಾಗ ಜಾತಿ—ಮತದ ಘರ್ಷಣೆಗೆ ತುತ್ತಾಗುತ್ತಿರುವ ಹುಬ್ಬಳ್ಳಿ ಧಾರವಾಡದಲ್ಲಿ ಮತೀಯ ಸಾಮರಸ್ಯ ತರುವ ಕೆಲಸಕ್ಕೆ ಸಾಮೂಹಿಕ ಪ್ರಯತ್ನ ಆಗಬೇಕು.

Religious deferances will be irrelevant ; communal disorder will be a matter of past and real genuine communal harmony will be the order of the day. ಈರೀತಿ ಆಗಬೇಕು. ಇನ್ನೊಂದು ವಿಚಾರವೇನೆಂದರೆ ಈಗ ಹುಬ್ಬಳ್ಳಿ ಧಾರವಾಡಂತಹ ಮಹಾ ನಗರಗಳಲ್ಲಿ ಮತ್ತು ನ್ಯಾಷನಲ್ ಹೈವೇಗಳಲ್ಲಿ ಹಗಲು ದರೋಡೆಗಳು ನಡೆಯುತ್ತಿವೆ. ಅದಕ್ಕೆ ತಕ್ಕ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು, ಇಂಥವರನ್ನು ಹಿಡಿದು ಅವರಿಗೆ ತಕ್ಕ ಶಾಸ್ತಿ ಮಾಡಬೇಕು. ಅದೇ ರೀತಿ ಜಾತೀಯ ಗಲಭೆಗಳನ್ನು ಕೂಡ ಹತ್ತಿಕ್ಕಲು ಶಾಸನ ಬದ್ಧವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಕೊನೆಯದಾಗಿ ಸರ್ವಜನ ಸುಖಾಯ ಸರ್ವಜನ ಹಿತಾಯ ಮಂಡಿತವಾದ. ಈ ಆಯವ್ಯಯ ಪತ್ರ ಸಮರ್ಪಿಸಿದ ಘೋರ್ಪಡೆಯವರಿಗೆ ಅಭಿವಂದನೆಗಳನ್ನು ಸಲ್ಲಿಸಿ ನನಗೆ ಮಾತನಾಡಲು ಸಮಯ ಒದಗಿಸಿದ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

3-30 P.M.

† ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಸನ್ಮಾನ್ಯ ಸಭಾಪತಿಗಳೇ, ನಮ್ಮ ಅರ್ಥ ಸಚಿವರಾದ ಮಾನ್ಯ ಶ್ರೀ ಎಂ. ವೈ. ಘೋರ್ಪಡೆಯವರು ಬಹಳ ಚತುರರು. ಎಲ್ಲವನ್ನೂ ಕ್ರೋಢೀಕರಿಸಿ 72—73ನೇ ಆಯವ್ಯಯಪತ್ರವನ್ನು ಈ ಸದನದ ಮುಂದೆ ಮಂಡಿಸಿ ಎಲ್ಲ ಅಂಶಗಳನ್ನು ವಿಶದವಾಗಿ ತಿಳಿಸುತ್ತಾ ಹೋಗಿರುವವರಾಗಿದ್ದಾರೆ. ಆದ್ದರಿಂದ ನಾನು ಈ ಒಂದು ಆಯಪತ್ರವನ್ನು ಬೆಂಬಲಿಸಿ ಒಬ್ಬ ಶಾಸಕನಾಗಿ ಮೂರು ನಾಲ್ಕು ಸಲಹೆಗಳನ್ನು ಈ ಸಭೆಯಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮೊಟ್ಟಮೊದಲನೆಯದಾಗಿ ಅವರು ಓವರ್‌ಡ್ರಾಫ್ಟ್ ವಿಷಯವಾಗಿ ಮಾತನಾಡುತ್ತಾ ಇನ್ನು ಮುಂದೆ ಓವರ್‌ಡ್ರಾಫ್ಟ್ ಮಾಡುವುದಿಲ್ಲವೆಂದು ಹೇಳಿದರು. ಬಹಳ ಸಂತೋಷದ ವಿಚಾರ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅವರು ಬಹಳ ಬುದ್ಧಿವಂತಿಕೆಯಿಂದ ಈ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ.

ಇನ್ನು ಹಿಂದುಳಿದ ಜನಾಂಗಗಳ ಪ್ರಗತಿಗಾಗಿ ಇಟ್ಟಿರತಕ್ಕ ಹಣ ಏನೇನು ಸಾಲದು. ಹರಿಜನ—ಗಿರಿಜನರ ವಸತಿ ಸೌಕರ್ಯದ ಬಗ್ಗೆ ಇನ್ನೂ ಹೆಚ್ಚಿಗೆ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದರೆ ಬಹಳ ಚೆನ್ನಾಗಿತ್ತೆಂದು ನನ್ನ ನಂಬಿಕೆ. ಈ ವಿಚಾರವಲ್ಲಿ ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡುವುದೇನೆಂದರೆ, ಏನು ಈ ಹಣವನ್ನು ಇಟ್ಟಿದ್ದೀರೋ ಅದನ್ನು ಬೇರೆ ಯಾವ ಬಾಬುಗಳಿಗೂ ವಿನಿಯೋಗ ಮಾಡದಂತೆ ಬರೀ ಹರಿಜನ—ಗಿರಿಜನರ ವಸತಿ ಸೌಕರ್ಯಕ್ಕಾಗಿಯೇ ವಿನಿಯೋಗಿಸಬೇಕೆಂಬುದು. ಇದೊಂದು ನನ್ನ ಮುಖ್ಯವಾದ ಸಲಹೆ. ಇನ್ನು ಯೋಜನೆಗಳಿಗಾಗಿ ಎಂಬುದಾಗಿ 54 ಲಕ್ಷ

(ಶ್ರೀ ಎಂ. ಬಿ. ರಾಮಸ್ವಾಮಿ)

ರೂಪಾಯಿಗಳನ್ನು ಬೇರೆ ಇಟ್ಟಿದ್ದೀರಿ. ಆ ಒಂದು ಯೋಜನೆಯ ಕಲ್ಯಾಣಕ್ಕಾಗಿ ಇಟ್ಟಿರುವ ಪರಿಮಿತಿ ಬಹಳ ಕಡಿಮೆಯಾಗಿದೆ. ಈ ಬಾಬಿಗೆ ಕೊನೆಯ ಪಕ್ಷ ಒಂದು ಕೋಟಿ ರೂಪಾಯಿಗಳನ್ನಾದರೂ ಹೆಚ್ಚುಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಕಂಟ್ರಾಕ್ಟ್ ಬಸ್ಸುಗಳಿಗೆ 35 ರೂಪಾಯಿಗಳಿಂದ 100 ರೂಪಾಯಿಗೆ ಹೆಚ್ಚಿಸಬೇಕೆಂದು ಮಾಡಿದ್ದೀರಿ. ಅದನ್ನು ಇನ್ನೂ ಹೆಚ್ಚು ಮಾಡಿದ್ದರೆ ಬಹಳ ಚೆನ್ನಾಗಿರುತ್ತಿತ್ತೆಂದು ನನಗನ್ನಿಸುತ್ತದೆ. ಸರ್ಕಾರಿ ಬಸ್ಸುಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿಗೆ ಓಡಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

ಇನ್ನು ಕುಡಿಯುವ ನೀರಿನ ಬಾವಿಯ ವಿಷಯ. ನನ್ನ ಕ್ಷೇತ್ರ ಬಹಳ ಹಿಂದುಳಿದಿರತಕ್ಕದ್ದು. ನನ್ನ ಕ್ಷೇತ್ರವಾದ ಆನೇಕಲ್ ತಾಲ್ಲೂಕಿನಲ್ಲಿ ಸುಮಾರು 70 ಬಾವಿಗಳನ್ನು ತೋಡಿದ್ದರೂ ಸಾಕಷ್ಟು ನೀರು ಸಿಗುತ್ತಾ ಇಲ್ಲ. ಸುಮಾರು 16 ಗ್ರಾಮಗಳಲ್ಲಿ ತುಂಬಾ ತೊಂದರೆ. ಸರ್ಜಾಪುರ ಹೋಬಳಿಯಿಂದ ಅವೆಲ್ಲ ಪ್ರದೇಶಗಳಿಗೂ ರಿಗ್ಸ್ ಹಾಕಬೇಕು. ರಿಗ್ಸ್ ಅಥವಾ ಲಿಫ್ಟ್ ಪಂಪುಸೆಟ್ಟುಗಳನ್ನು ಹಾಕಿದರೆ ಆ ಗ್ರಾಮದಲ್ಲಿ ವಾಸಮಾಡುವವರೆಲ್ಲರಿಗೂ ಕುಡಿಯುವ ನೀರು ಸಿಗುವುದಕ್ಕೆ ಅನುಕೂಲವಾಗುತ್ತದೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ವಿದ್ಯಾ ಇಲಾಖೆಯ ವಿಷಯ.—ಈಗ ಈ ಆಯವ್ಯಯಪತ್ರದಲ್ಲಿ ಈ ಒಂದು ಇಲಾಖೆಗೆ ಕೇವಲ 50 ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಇದು ಒಂದು ಬಹಳ ದೊಡ್ಡ ಖಾತೆ. ಈ ಖಾತೆಗೆ ಇನ್ನೂ ಹೆಚ್ಚಿಗೆ ಹಣವನ್ನು ಒದಗಿಸಿದ್ದರೆ ಬಹಳ ಚೆನ್ನಾಗಿರುತಿತ್ತು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಿರುದ್ಯೋಗ ಸಮಸ್ಯೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

ಇನ್ನು ಮುಂದೆ ಹಳ್ಳಿಗಾಡುಗಳಲ್ಲಿ ತಾಲ್ಲೂಕು ಲೆವೆಲ್ಲಿನಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಜಾಗ್ರತೆಯಾಗಿ ಸ್ಥಾಪನೆ ಮಾಡದೆ ಹೋದರೆ, ನಿಜವಾಗಿಯೂ ನಾವು ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳು ನಮ್ಮ ಸಮಾಜವಾದದಲ್ಲಿ ಬಹುಶಃ ಒಳ್ಳೆಯ ರೀತಿಯಲ್ಲಿ ಪ್ರಗತಿಶೀಲ ಕಾರ್ಯಕ್ರಮದ ಚಿನ್ಹೆ ತಾಳಲಾರದೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬೇಕಾಗಿದೆ.

ಇನ್ನು ತೆರಿಗೆಗಳ ವಿಷಯ. ಅಬ್ಕಾರಿ ಬಗ್ಗೆ ತೆರಿಗೆಗಳನ್ನು ಅಷ್ಟಾಗಿ ಹಾಕುತ್ತಾ ಇಲ್ಲ.

ಇನ್ನು ಕಳ್ಳಸಾಗಾಣಿಕೆಯ ವಿಷಯವಾಗಿ ಸರ್ಕಾರದಲ್ಲಿ ಒಳ್ಳೆಯ ಸೂಪರ್‌ವಿಷನ್ ಇರಬೇಕು. ಸರ್ಕಾರಕ್ಕೆ ಹೆಚ್ಚಿನ ವರಮಾನ ಬರುವಂತೆ ಈ ಬಾಬಿನಲ್ಲಿ ವ್ಯವಸ್ಥೆಗೊಳಿಸಬೇಕು.

ಇನ್ನು ಕರ್ಣಾಟಕದ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಕರ್ಣಾಟಕದ ಬಗ್ಗೆ ಅವರು ಒಳ್ಳೆಯ ಮೆಚ್ಚುಗೆಯನ್ನೂ ಸಹ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಕನ್ನಡ ಮಾಧ್ಯಮ ಭಾಷೆಯಾಗಬೇಕು ಮತ್ತು ಕನ್ನಡದ ಜೊತೆಗೆ ಇಂಗ್ಲಿಷ್ ಸಹ ಇರಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ವಿಜಿಲೆನ್ಸ್ ಇಲಾಖೆಯ ಬಗ್ಗೆ ಹೇಳುವುದಾದರೆ, ವಿಜಿಲೆನ್ಸ್ ಇಲಾಖೆಯಲ್ಲಿರುವ ಸಿ.ಐ.ಡಿ. ಯವರು ಯಾವಾಗಲೂ ಸರಿಯಾಗಿ ಕೆಲಸಮಾಡುತ್ತಾ ಇಲ್ಲ. ಇವರ ಮಧ್ಯೆ ಇನ್ನೊಂದು ವಿಜಿಲೆನ್ಸ್ ಇಟ್ಟಿದ್ದಾರೆ. ಅದೂ ಸಹ ಸರಿಯಾದವರ ಹತೋಟಿಯಲ್ಲಿ ನಡೆಯುತ್ತಾ ಇಲ್ಲ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ತೀವ್ರ ಗಮನಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಐದು ಸಾವಿರ ಜನಸಂಖ್ಯೆ ಇರತಕ್ಕ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಆಸ್ಪತ್ರೆಯನ್ನು ಕೊಡುತ್ತೇವೆಂದು ಆರೋಗ್ಯ ಮಂತ್ರಿಗಳು ಹೇಳಿದ್ದಾರೆ. ಅದೇ ರೀತಿಯಲ್ಲಿ ಈಗಾಗಲೇ ಕೆಲವು ಕಡೆಗಳಲ್ಲಿ ಮೂರು ನಾಲ್ಕು ಆಸ್ಪತ್ರೆಗಳನ್ನು ಕಟ್ಟಬೇಕೆಂದು ಕೆಲವರು ದಾನವಿಮಾಡಿಕೊಂಡಿದ್ದಾರೆ. ದಯವಿಟ್ಟು ಮಾನ್ಯ ಮಂತ್ರಿಗಳು ಈ ವಿಚಾರದ ಬಗ್ಗೆ ತೀವ್ರ ಗಮನಕೊಡಬೇಕೆಂದು ನನ್ನ ಪ್ರಾರ್ಥನೆ.

ಕೊನೆಯದಾಗಿ ಒಂದು ಮಾತು. ಈಗಾಗಲೇ ನಮ್ಮಲ್ಲಿ ರೇಸಿಂಗ್ ಕ್ಲಬ್ಸ್ ಬಹಳವಾಗಿವೆ. ಇದು ತೀರಾ ಅನ್ಯಾಯ. ವಿಶೇಷವಾಗಿ ಹಣ ಪೋಲಾಗುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಏನಾದರೂ ಯೋಚನೆಮಾಡಬೇಕಾಗಿದೆ. ಇದಕ್ಕೆ ಬದಲು ಬೇರೆ ಯಾವುದಾದರೂ ಒಳ್ಳೆಯ ಯೋಜನೆಗಳನ್ನು ಮಾಡಿ. ಅವು ಸದ್ವಿನಿಯೋಗವಾದಮೇಲೆ ನಮಗೆ ಹೆಚ್ಚಿನ ಉಪಯೋಗ ಉಂಟು.

ನನಗೆ ಮಾನ್ಯ ಅಧ್ಯಕ್ಷರು ಆಯವ್ಯಯ ಪತ್ರದ ಬೇಡಿಕೆಗಳ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿದ ಆಯವ್ಯಯ ಪತ್ರವನ್ನು ಪುಷ್ಟೀಕರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ರಾಜೇಗೌಡ (ಹಾನ್ನೂರು).—ಸನ್ಮಾನ್ಯ ಸಭಾಪತಿಗಳೇ, 1972–73ನೇ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ ಮಾನ್ಯ ಹಣಕಾಸಿನ ಸಚಿವರಿಗೆ ಹಾಗೂ ಮುಖ್ಯ ಮಂತ್ರಿಗಳಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ಕಾಳಿ ನದಿಯ ಯೋಜನೆ ಬಗ್ಗೆ 164 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ನಮ್ಮ ಸರ್ಕಾರದವರು ಪಡೆದಿದ್ದಾರೆ. ನಮ್ಮ ಸರ್ಕಾರದಿಂದ ಯಾವೊಂದು ವೆಚ್ಚವಿಲ್ಲದೇ ಇರುವ ರೀತಿಯಲ್ಲಿ ಅದನ್ನು ಇವರು ಪಡೆದು ಕೊಂಡಿರುವುದರಿಂದ ಅವರಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮೊಟ್ಟಮೊದಲನೆಯದಾಗಿ ವಿದ್ಯಾಭ್ಯಾಸದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ವಿದ್ಯಾಭ್ಯಾಸಕ್ಕಾಗಿ ಮಾನ್ಯ ಅರ್ಥಸಚಿವರು 56 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇದು ಏನೇನು ಸಾಲದು. ಇದರ ಬಗ್ಗೆ ನನ್ನ ಅಭಿಪ್ರಾಯವನ್ನು ಸೂಚಿಸಲಿಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಸೇಕಡ 98 ರಷ್ಟು 6 ರಿಂದ 11 ವರ್ಷ ವಯಸ್ಸಿನವರೆಗೆ ಇರತಕ್ಕ ಮಕ್ಕಳು ವಿದ್ಯಾಭ್ಯಾಸದ ಅನುಕೂಲಗಳನ್ನು ಪಡೆಯುತ್ತಿದ್ದಾರೆಂದು ಹೇಳಿದ್ದಾರೆ. ಆ ರೀತಿ ಸೌಕರ್ಯವನ್ನು ನಮ್ಮ ಮಕ್ಕಳು ಪಡೆಯುತ್ತಾ ಇಲ್ಲವೆಂದು ನನ್ನ ಅಭಿಪ್ರಾಯ. ಪ್ರಾಥಮಿಕ ಪಾಠಶಾಲೆಯ ಕಟ್ಟಡಗಳನ್ನು ಕಟ್ಟುವುದಕ್ಕೆ ಸುಮಾರು 10 ವರ್ಷಗಳಾದರೂ ಇನ್ನೂ ಆಗದೇ ಇರತಕ್ಕ ಶಾಲಾ ಕಟ್ಟಡಗಳನ್ನು ನಾವು ಈಗ ಪ್ರತಿಯೊಂದು ತಾಲ್ಲೂಕ್‌ನಲ್ಲಿಯೂ ನೋಡುತ್ತಿದ್ದೇವೆ. ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಿಸುವಾಗ ಸರ್ಕಾರದ ವತಿಯಿಂದ ಒಂದು ಸಾವಿರ, ತಾಲ್ಲೂಕ್ ಬೋರ್ಡ್ ಮತ್ತು ಗ್ರಾಮ ಪಂಚಾಯತಿಗಳಿಂದ ಸ್ವಲ್ಪ ಮಟ್ಟಿಗೆ ಕಾಂಟ್ರಿಬ್ಯೂಷನ್ ಈಗ ತೆಗೆದು ಕೊಳ್ಳುತ್ತಿದ್ದಾರೆ. ಇವತ್ತು ಗ್ರಾಮಪಂಚಾಯತಿಗಳು ಮತ್ತು ತಾಲ್ಲೂಕು ಬೋರ್ಡ್‌ಗಳು ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ತಮ್ಮ ಭಾಗದ ದುಡ್ಡನ್ನು ಕೊಡುವುದಕ್ಕೆ ಸಾಧ್ಯವಾಗದೆ ಸರ್ಕಾರದ ವತಿಯಿಂದ ಕೊಡುವ ದುಡ್ಡನ್ನು ಮಾತ್ರ ಕಂಟ್ರಾಕ್ಟರ್‌ಗಳ ಖರ್ಚು ಮಾಡುತ್ತಾ ಆ ಶಾಲಾ ಕಟ್ಟಡಗಳನ್ನು ಈಗ ಕಟ್ಟುತ್ತಿದ್ದಾರೆ. ನಮ್ಮ ತಾಲ್ಲೂಕಿನ ಅನೇಕ ಕಡೆಗಳಲ್ಲಿ ಸುಮಾರು 10 ವರ್ಷಗಳಿಂದಲೂ ಬರೀ ಗೋಡೆಗಳೇ ನಿಂತಿವೆ. ಆದ್ದರಿಂದ ನಮ್ಮ ಸರ್ಕಾರದವರು ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಪೂರ್ತಿಯಾಗಿ ಹಣವನ್ನು ಕೊಡುವುದನ್ನು ತಾವೇ ಒಪ್ಪಿಕೊಳ್ಳಬೇಕು. ಇನ್ನು ವಿದ್ಯಾಭ್ಯಾಸದ ಕ್ರಮದ ಬಗ್ಗೆ ಒಂದು ಸೂಚನೆ. ಉಪಾಧ್ಯಾಯರುಗಳನ್ನು ಆರಿಸುವಾಗ ದಕ್ಷರಾಗಿರುವವರನ್ನು ಆರಿಸದೇ ಇದ್ದಾರೆ. ನನ್ನ ಕ್ಷೇತ್ರದಲ್ಲಿರತಕ್ಕ ಒಂದು ಪ್ರಾಥಮಿಕ ಶಾಲೆಯನ್ನು ನಾನು ನೋಡಲು ಹೋದಾಗ, ಅಲ್ಲಿನ ಉಪಾಧ್ಯಾಯರು ಒಬ್ಬರು 'ದುಃಖ' ಎಂಬ ಪದವನ್ನು ಬೋರ್ಡಿನ ಮೇಲೆ ಬರೆದಿದ್ದುದನ್ನು ನೋಡಿ ನನಗೆ ಬಹಳ ದುಃಖ ಬಂತು. 'ದುಃಖ' ಎಂಬ ಪದವನ್ನು 'ದುಖ್ಖ' ಎಂಬುದಾಗಿ ಬರೆದಿದ್ದರು. ಇಂತಹ ಉಪಾಧ್ಯಾಯರನ್ನು ನಾವು ತಯಾರುಮಾಡಿ ಪ್ರಾಥಮಿಕ ಶಾಲೆಗಳಿಗೆ ಆರಿಸಿದರೆ, ನಮ್ಮ ಮುಂದಿನ ಮಕ್ಕಳು ಇನ್ನು ಯಾವ ರೀತಿಯಲ್ಲಿ ಪ್ರಯೋಜನ ಪಡೆಯಬಹುದೆಂಬುದಾಗಿ ನಾನು ಹೇಳಬಯಸುತ್ತೇನೆ.

ಇನ್ನು ನಾನು ಲೋಕೋಪಯೋಗಿ ಇಲಾಖೆ ಬಗ್ಗೆ ಎರಡು ಮಾತುಗಳನ್ನಾಡಬೇಕೆಂದಿದ್ದೇನೆ. ನಮ್ಮ ಕೊಳ್ಳೆಗಾಲ ಈ ಮೈಸೂರಿಗೆ 1956 ರಲ್ಲೇ ಸೇರಿತು. ಆದರೆ ಅಲ್ಲಿ ಸೇರುವುದಕ್ಕೆ ಮೊದಲು ಏನು ಪರಿಸ್ಥಿತಿ ಇತ್ತೋ ಈಗಲೂ ಅದೇ ಪರಿಸ್ಥಿತಿ ಅಲ್ಲಿದೆ. ಅಲ್ಲಿ ಯಾವ ಒಂದು ನೀರಾವರಿ ಸೌಲಭ್ಯವನ್ನೂ ಇಲ್ಲಿಯತನಕ ಮಾಡಲಿಲ್ಲ. ಅಲ್ಲಿ ಅತಿ ಜರೂರಾಗಿ ಆಗಬೇಕಾದ 4—5 ಪಿಕಪ್ಪುಗಳಿವೆ. ಹಿಂದೆ ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ಪಿ.ಡಬ್ಲ್ಯೂ.ಡಿ. ಮಂತ್ರಿಗಳಾಗಿದ್ದಾಗ ಅಲ್ಲಿ ಒಂದು ಪಿಕಪ್ಪನ್ನು ಮಂಜೂರು ಮಾಡಿದ್ದರು. ಅದರ ಕೆಲಸ 1964 ರಲ್ಲೇ ಪ್ರಾರಂಭವಾಯಿತು. ಆದರೆ ಆ ಕೆಲಸ ಇನ್ನೂ ಮುಗಿದಿಲ್ಲ. ಅಂತೂ 7 ವರ್ಷಗಳು ಕಳೆದವು. ಅದಕ್ಕೆ ಇದುವರೆಗೂ ಒಂದು ಲಕ್ಷ ಐವತ್ತು ಸಾವಿರ ಖರ್ಚಾಗಿದೆ. ಕೆಲಸ ಮಾತ್ರ ಇನ್ನೂ ಅಪೂರ್ಣ. ಇದು ನಮ್ಮ

(ಶ್ರೀ ಆರ್. ರಾಜೇಗೌಡ)

ಪಿ.ಡಬ್ಲ್ಯು.ಡಿ. ನಲ್ಲಿ ಇರತಕ್ಕ ಇಂಜಿನಿಯರುಗಳ ದಕ್ಷತೆಯನ್ನು ಸೂಚಿಸುತ್ತದೆ. ರಾಜ್ಯಪುನರ್ವಿಂಗಡಣೆಯ ಕಾಲದಲ್ಲಿ ಯಾವ ಪ್ರದೇಶಗಳು ತಾಲ್ಲೂಕ್ ಮತ್ತು ಜಿಲ್ಲಾ ಮಟ್ಟದಲ್ಲಿ ಬಂದು ಸೇರಿದವೋ ಅಂಥ ಪ್ರದೇಶಗಳ ಅಭಿವೃದ್ಧಿ ಅಷ್ಟಿಷ್ಟು ಆಗಿದೆ. ಆದರೆ ನಮ್ಮ ವಿಚಾರ ಹಾಗಿಲ್ಲ. ನಮ್ಮ ತಾಲ್ಲೂಕು ಇಲ್ಲಿಗೆ ಬಂದು ಸೇರಿದ ನಂತರ ನಮಗೆ ರಸ್ತೆಗಳ ವಿಚಾರದಲಾಗಲೀ ಅಥವಾ ಒಂದು ನೀರಾವರಿ ವಿಚಾರದಲ್ಲಾಗಲೀ ಏನೂ ಅನುಕೂಲವಾಗಿಲ್ಲ. ನಮ್ಮಲ್ಲಿ ರಸ್ತೆ ಇರತಕದ್ದು ಕೇವಲ 32 ಮೈಲಿಗಳು ಮಾತ್ರ. ಇದೇ ದೊಡ್ಡ ರಸ್ತೆ. ಇಲ್ಲಿಗೆ ಕಳೆದ ಆರು ವರ್ಷಗಳಿಂದಲೂ ಆ ರಸ್ತೆಗೆ ಒಂದು ಸಾವಿರ ರೂಪಾಯಿಯನ್ನು ಕೂಡ ಖರ್ಚುಮಾಡಿಲ್ಲ. ಹೀಗಾಗಿ ನಮ್ಮಲ್ಲಿರತಕ್ಕ ಆ ರಸ್ತೆ ಬಹಳ ನಾದುರಸ್ತಾಗಿದೆ.

ಇನ್ನು ಗ್ರಾಮಂತರ ಪ್ರದೇಶಗಳ ಕುಡಿಯುವ ನೀರಿನ ಬಗ್ಗೆ ಹೇಳುವುದಾರೆ ಅಲ್ಲಿ ಇಲ್ಲಿಯವರೆಗೆ ನಾಲ್ಕು ಗ್ರಾಮಗಳಲ್ಲಿ ಈ ಕಾರ್ಯ ಪೂರ್ತಿಯಾಗಿದೆ, ಇನ್ನು 3 ಗ್ರಾಮಗಳಲ್ಲಿ ಆಗಬೇಕಾಗಿದೆ ಆದರೆ ಪಿ. ಎಚ್. ಇ. ಅವರು ಅದಕ್ಕೆ ನಿಗಾಕೊಡುತ್ತಿಲ್ಲ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇತ್ತಕಡೆಗೆ ತಮ್ಮ ಗಮನ ಕೊಟ್ಟು ಇದನ್ನು ತೀವ್ರವಾಗಿ ಮುಂದುವರಿಸವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಹರಿಜನರಿಗೆ ವಾಸದ ಮನೆಗಳನ್ನು ಮತ್ತು ಮನೆಗಳನ್ನು ಕಟ್ಟಲು ನಿವೇಶನಗಳನ್ನು ಒದಗಿಸತಕ್ಕ ಬಗ್ಗೆ ಮತ್ತು ಅವರು ಮನೆಗಳನ್ನು ಕಟ್ಟಿಕೊಳ್ಳಲು ಅನುಕೂಲವಾಗಲು ಸಹಕಾರ ಸಂಘಗಳನ್ನು ಮಾಡಿದ್ದರೂ ಅವರಿಗೆ ಏನೇನೂ ಪ್ರಯೋಜನ ಆಗುತ್ತಿಲ್ಲ. ಅವರಿಗೆ ಸೊಸೈಟಿಗಳಿಂದ ಸಾಲವಾಗಿ ಕೊಡತಕ್ಕ 3—4 ಸಾವಿರ ರೂಪಾಯಿಗಳು ಏತಕ್ಕೂ ಸಾಲದೆ ಅಲ್ಲಿ ಬರಿಗೋಡೆಗಳು ಮಾತ್ರ ನಿಂತಿರುತ್ತವೆ. ಇತ್ತಲಾಗಿ ಅವರಿಗೆ ಅಲ್ಲಿ ಮನೆಯೂ ಆಗಲಿಲ್ಲ. ಸರ್ಕಾರಕ್ಕೆ ಹಣವೂ ಉಳಿಯಲಿಲ್ಲ. ಹೀಗಾದರೇನು ಸಾರ್ಥಕ ? ಅವರಿಗೆ ಕೊಟ್ಟಿರತಕ್ಕ ಸಾಲದ ಹಣವೂ ಕೂಡ ಬರಲು ಮಾರ್ಗವಿಲ್ಲ. ಆದ್ದರಿಂದ ಇನ್ನು ಮುಂದಕ್ಕೆ ಅವರಿಗೆ ಈ ಅನುಕೂಲಗಳನ್ನು ಒದಗಿಸಲೇಬೇಕು ಎನ್ನುವುದಾಗಿದ್ದರೆ ಸರ್ಕಾರದವರೇ ಸಂಪೂರ್ಣವಾಗಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವುದು ಉತ್ತಮ. ಆಗ ಅವರಿಂದ ಆ ಸಾಲದ ಹಣ ವಸೂಲಾಗದಿದ್ದರೆ ಅವರಿಗೆ ಕೊಟ್ಟಿರತಕ್ಕ ಮನೆಗಳನ್ನೇ ವಾಪಸ್ಸು ತೆಗೆದುಕೊಳ್ಳುತ್ತಾರೆ ಎಂಬ ಭಯವಾದರೂ ಇರುತ್ತದೆ. ಇಷ್ಟು ವಿಷಯಗಳನ್ನು ತಿಳಿಸಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).—ಮಾನ್ಯ ಅಧ್ಯಕ್ಷರೇ. ನಮ್ಮ ಅರ್ಥ ಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ಮಂಡಿಸಿರತಕ್ಕ ಬಡ್ಜೆಟ್ಟನ್ನು ನಾನು ಸಮರ್ಥಿಸುತ್ತೇನೆ. ನಮ್ಮ ಸರ್ಕಾರಕ್ಕೆ ಪ್ರಾರಂಭದಿಂದಲೇ ಅನೇಕ ಆರ್ಥಿಕ ಸಮಸ್ಯೆಗಳಿದ್ದವು. ಅವುಗಳನ್ನೆಲ್ಲಾ ಸಮತೋಲನಕ್ಕೆ ತಂದು ನಮ್ಮ ಸರ್ಕಾರ ಕೊಡಬೇಕಾಗಿದ್ದ 71 ಕೋಟಿ ರೂಪಾಯಿ ಓವರ್ ಡ್ರಾಫ್ಟನ್ನೂ ತೀರಿಸಿ ಮುಂದಕ್ಕೆ ನಮಗೆ ಇದ್ದಂಥ ಆರ್ಥಿಕ ಬಿಕ್ಕಟ್ಟು ಅಂದರೆ ಕೊರತೆಯಾಗಲಿದ್ದ 43 ಕೋಟಿ ರೂಪಾಯಿಗಳನ್ನು 4.5 ಕೋಟಿ ರೂಪಾಯಿಗೆ ಇಳಿಸಿದ್ದರಿಂದಲೂ ಮತ್ತು ಭಾರತ ಸರ್ಕಾರದೊಡನೆ ಚರ್ಚೆಮಾಡಿ ನಮ್ಮ ಯೋಜನೆಗಳಿಗೆ ಅಂದರೆ ಪಂಚವಾರ್ಷಿಕ ಯೋಜನೆಗಳಿಗೆ 11.5 ಕೋಟಿ ರೂಪಾಯಿಗಳ ಹೆಚ್ಚಿನ ನೆರವನ್ನು ಪಡೆದು ನಮ್ಮ ರಾಜ್ಯದ ಪ್ಲಾನಿನ ಗಾತ್ರ 72 ಕೋಟಿಗಳಷ್ಟು ಇದ್ದುದನ್ನು ಈಗ 76 ಕೋಟಿಗಳಿಗೆ ಏರಿಸಿರತಕ್ಕದ್ದೂ ನಮ್ಮ ಆರ್ಥಿಕ ಸಚಿವರ ಚಾಕಚಕ್ಯತೆಯನ್ನು ಅವರ ಸೂಕ್ಷ್ಮ ಬುದ್ಧಿಯನ್ನು ಸೂಚಿಸುತ್ತದೆ. ಅವರು ಇಂಥ ಒಂದು ಬುದ್ಧಿವಂತಿಕೆಯ ಆಯವ್ಯಯ ಪತ್ರವನ್ನು ಮಂಡಿಸಿರುವುದರಿಂದ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇಷ್ಟೇ ಅಲ್ಲದೆ ನಮ್ಮ ಮುಖ್ಯ ಮಂತ್ರಿಗಳೂ ಮತ್ತು ಅರ್ಥಮಂತ್ರಿಗಳೂ ಕೇಂದ್ರ ಸರ್ಕಾರದೊಡನೆ ಮಾತುಕತೆಗಳನ್ನು ನಡೆಸಿ 164 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಆಗಬೇಕಾದ ಆ ಕಾಳೀ ನದಿ ಪ್ರಾಜೆಕ್ಟಿಗೆ ಕೇಂದ್ರದಿಂದಲೇ ವಿಶಿಷ್ಟ ಹಣವನ್ನು ಒದಗಿಸುವಂತೆ ವ್ಯವಸ್ಥೆಮಾಡಿರುವುದಕ್ಕೆ ಇವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಹಾಗೂ ನಾವು ಇದೇ ಸಂಧರ್ಭದಲ್ಲಿ ನಮಗೆ ಇಷ್ಟರಮಟ್ಟಿಗೆ ನೆರವನ್ನು ನೀಡುವುದಕ್ಕೆ ಮುಂದೆ ಬಂದ ಕೇಂದ್ರ ಸರ್ಕಾರಕ್ಕೆ ನಮ್ಮ ಅಭಿನಂದನೆಗಳನ್ನು ಅರ್ಪಿಸಬೇಕಾದ್ದು ಅತ್ಯಗತ್ಯ ಹಾಗೂ ಇದು ನಮ್ಮ ಆದ್ಯ ಕರ್ತವ್ಯ. ನಮ್ಮ ಆಯವ್ಯಯ ಪತ್ರದಲ್ಲಿ ಮುಖ್ಯವಾಗಿ ಅಡಗಿರತಕ್ಕ ಗುರಿ ಏನೆಂದರೆ ಬಡತನ ನಿವಾರಣೆ ಮತ್ತು

ಸಮಾಜವಾದ ಸ್ಥಾಪನೆಯು ಗುರಿ ಆಡಗಿದೆ. ಇದು ಮುಖ್ಯವಾಗಿ ಆ ಶ್ರೀಮಂತರಿಗೂ ಮತ್ತು ಬಡವರಿಗೂ ಮಧ್ಯೆ ಇರತಕ್ಕ ಅಂತರವನ್ನು ಕಡಮೆ ಮಾಡಿ ಬಡವರ ಏಳಿಗೆ ಅದಷ್ಟೂ ಸಹಾಯ ಮಾಡಬೇಕು. ಹಾಗ ಮಾಡದಿದ್ದರೆ ಬಡವರ ಏಳಿಗೆಯಾಗುವುದಿಲ್ಲ. ನಾವು ಇಲ್ಲಿ ಏನು ಬಾಯಲ್ಲಿ ಬಡತನವನ್ನು ನೀಗುತ್ತೇವೆಂದು ಹೇಳುತ್ತಿದ್ದೇವೋ ಅದು ಕಾಗದದ ಮೇಲೆ ಹಾಗೇ ನಿಂತು ಹೋಗುತ್ತದೆ. ಆದರೆ ಇದು ಹಾಗಾಗಬಾರದು ಅದಕ್ಕಾಗಿ ಆ ಗ್ರಾಮಾಂತರ ಪ್ರದೇಶ ಜನರ ಏಳಿಗೆಗೆ ಕೃಷಿ ಪಶುಪಾಲನೆ ಮೀನುಗಾರಿಗೆ ಹಯಿನ ಇವು ಅತ್ಮವಶ್ಯಕವಾಗಿ ನಡೆಯಬೇಕು. ಅದಕ್ಕಾಗಿ ಅವರಿಗೆ ಸಕಾಲಕ್ಕೆ ಸಾಲಗಳನ್ನು ಕೊಡಬೇಕಾದ್ದು ಅಗತ್ಯ. ಈ ಬಾಬುಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕು. ನಮ್ಮ ಜನರಿಗೆ ಏನು ಆ ನ್ಯೂಟ್ರಿಷಿನ್ ಫೂಡ್ ಬೇಕಾಗಿದೆ ಎಂದು ಹೇಳುತ್ತಿದ್ದಾರೋ ಅದು ದೊರೆಯಬೇಕಾಗಿದ್ದರೆ ನಮ್ಮಲ್ಲಿ ಹೆಚ್ಚು ಹೆಚ್ಚು ಪಶುಸಂಗೋಪನ ಮತ್ತು ಮೀನುಗಾರಿಕೆ ಡೈರಿಫಾರಂ ಇವುಗಳಿಗೆಲ್ಲಾ ಹೆಚ್ಚಿನ ಹಣವನ್ನು ಒದಗಿಸಲೇಬೇಕು. ಈ ದಿವಸ ಹಳ್ಳಿಗಳಲ್ಲಿ ಶೇ 75 ಭಾಗದಷ್ಟು ಜನ ವಾಸಮಾಡುತ್ತಿದ್ದಾರೆ. ಅವರಿಗೆ ವ್ಯವಸಾಯವನ್ನು ಬಿಟ್ಟರೆ ಬೇರೇನೂ ಮಾಡುವುದಕ್ಕೆ ಕಸುಬು ಇಲ್ಲ. ಆದ್ದರಿಂದ ಅವರಲ್ಲಿ ಉತ್ಪಾದನಾ ಶಕ್ತಿ ಹೆಚ್ಚಿಸುವುದಕ್ಕೆ ಅಗತ್ಯವಾದ ಎಲ್ಲ ಪ್ರಯತ್ನಗಳನ್ನೂ ಮಾಡದ ವಿನಾ ಅವರಲ್ಲಿರತಕ್ಕ ಬಡತನ ಹೋಗುವುದಿಲ್ಲ. ಈ ದಿವಸ ಪಶುಸಂಗೋಪನಕ್ಕೆ ಕೊಟ್ಟಿರತಕ್ಕ 2 ಕೋಟಿ ರೂಪಾಯಿ ಏನಿದೆ ಅದು ಅಲ್ಲಿರತಕ್ಕ ಸಿಬ್ಬಂದಿ ವರ್ಗಕ್ಕೆ ಸಂಬಳ ಕೊಡುವುದಕ್ಕೆ ಸಾಲದು ಎಂದು ಹೇಳುತ್ತೇನೆ.

ಇನ್ನೂ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರಸ್ತೆಗಳ ವಿವರವನ್ನು ಹೇಳಬೇಕೆಂದರೆ ಆ ಬರ ಗಾಲದಲ್ಲಿ ಇವುಗಳನ್ನು ಕೈಗೊಳ್ಳಲಾಯಿತು. ಆಗ ಜನರಿಗೆ ಉದ್ಯೋಗಗಳನ್ನು ಒದಗಿಸಬೇಕು ಎಂಬ ದೃಷ್ಟಿಯಿಂದ ಆ ರಸ್ತೆಗಳನ್ನು ಕೈಗೊಳ್ಳಲಾಯಿತು. ಆದರೆ ಅಗ್ಗೆ ಹಣವನ್ನು ಅಲ್ಲಿ ಸದುಪಯೋಗ ಮಾಡುವುದಕ್ಕೆ ಬದಲು ಹೆಚ್ಚು ದುರುಪಯೋಗ ಮಾಡಿದೆ ಎಂದರೆ ಅದು ಏನೂ ಅತಿಶಯೋಕ್ತಿ ಆಗುವುದಿಲ್ಲ. ಈ ದಿವಸ ಇದಕ್ಕೆ ಒದಗಿಸಿರತಕ್ಕ 4 ಕೋಟಿ ರೂಪಾಯಿಗಳೇನಿದೆ. ಇದೂ ಕೂಡ ವೇಸ್ಟಾಗುತ್ತದೆ. ಆದ್ದರಿಂದ ಅದನ್ನು ತಡೆಗಟ್ಟಬೇಕಾದ್ದರೆ ಸರ್ಕಾರದವರು ಈ ಹಣವನ್ನು ಪಿ. ಡಬ್ಲ್ಯು. ಡಿ.ಗೆ ವರ್ಗಾಯಿಸಿ ಅವರ ಮೂಲಕ ಕೆಲಸ ಮಾಡುವುದಕ್ಕೆ ವ್ಯವಸ್ಥೆಮಾಡಿದರೆ ಅನುಕೂಲವಾಗಬಹುದು.

ಇನ್ನು ಹಳ್ಳೀ ಜನರಿಗೆ ಅನುಕೂಲವಾಗಬೇಕಾಗಿದ್ದರೆ ಅವರಿಗೆ ಹೆಚ್ಚು ಪಂಪ್‌ಸೆಟ್ಟುಗಳನ್ನು ಒದಗಿಸಿ ಕರೆಂಟನ್ನು ಕೊಟ್ಟು ನೀರಾವರಿಗೆ ಅನುಕೂಲ ಮಾಡಿದರೆ ಒಳ್ಳೆಯದು.

ಇನ್ನು ತೆರಿಗೆಯನ್ನು ಇತ್ತೀಚೆಗೆ ಹೆಚ್ಚಿಸಿದ್ದಾರೆ. ಜೋಳ ರಾಗಿ ಇತ್ಯಾದಿಗಳ ಮೇಲೆಲ್ಲ ತೆರಿಗೆಯನ್ನು ಹಾಕಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಬೆಳೆ ಬರತಕ್ಕ ಗ್ಯಾರಂಟಿಯೇ ಇಲ್ಲದಿದ್ದಾಗ ಅವರಿಗೆ ಟ್ಯಾಕ್ಸನ್ನು ಹಾಕಿರತಕ್ಕದ್ದು ಬಹಳ ಶೋಚನೀಯ. ಈ ಗ್ರೀನ್ ಮೆನ್ಯೂರ್ ಮೇಲೆ ತೆರಿಗೆ ಹಾಕಿರತಕ್ಕದ್ದೂ ಶೋಚನೀಯ ; ಎಂದು ಹೇಳಿ ನನಗೆ ಇಷ್ಟು ಮಾತ ನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜೆ. ಎಲ್. ಕಬಾಡಿ.—ಮಾನ್ಯ ಸಭಾಪತಿಗಳೇ, ಈ ಆಯವ್ಯಯ ಪಟ್ಟಿ ನೋಡಿದರೆ ಕೇವಲ ಜಂಬ ಕೊಚ್ಚಿಕೊಳ್ಳಲು ಮಾಡಿರುವಂತೆ ಕಂಡುಬರುವುದು. ಏಕೆಂದರೆ ಕೆಲವೊಂದು ವಿಷಯ ಗಳನ್ನು ನೋಡಿದರೆ ಸಮಾಜ ವಿಕಾಸದ ಯೋಜನೆ ನೋಡಿದರೆ ಅದಕ್ಕೆ ಕೇವಲ 1.13 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ಯಾವರೀತಿ ಸಹಾಯಕಾರಿಯಾದ ಯೋಜನೆ, ಅಭಿವೃದ್ಧಿ ಕಾರ್ಯ ಮಾಡಿದ್ದಾರೆ ಎಂದು ನೋಡಿದರೆ ಹರಿಜನರಿಗೆ ಸ್ವಲ್ಪವೂ ಏನೂ ಅವಕಾಶಮಾಡಿಲ್ಲ ಎಂದು ಹೇಳಬಹುದು. ಹೊಸ ಮಂತ್ರಿ ಮಂಡಲ ಬಂದಮೇಲೆ ಹರಿಜನರ ಉದ್ಧಾರಕ್ಕಾಗಿ ಉನ್ನತ ಮಟ್ಟದಲ್ಲಿ ಅತಿ ಶೀಘ್ರವಾಗಿ ಪ್ರಗತಿದಾಯಕವಾದ ಕಾರ್ಯ ಕೈಕೊಳ್ಳುವರು ಎಂದು ನಾನು ತಿಳಿದಿದ್ದೆ. ಸಮಾಜ ಕಲ್ಯಾಣ ಮಂತ್ರಿಗಳು ಬಹಳ ಉದ್ವೇಗದಿಂದ ಹೇಳುತ್ತಿದ್ದರು. ಆದರೆ ಆ ರೀತಿಯಿಂದ ಮಾಡಿರುವ ಹೊಸ ಯೋಜನೆಯೊಂದೂ ಕಾಣುವುದಿಲ್ಲ. ಹರಿಜನರಿಗೆ ಸೂಕ್ತವಾದ ಪ್ರಗತಿದಾಯಕವಾದ ಯೋಜನೆಯನ್ನು ಸರಕಾರ ಖಂಡಿತವಾಗಿ ಕೈಕೊಳ್ಳಬೇಕಾಗಿತ್ತು. ಈಗ ಇತರರಿಗೆ ಲಾಭದಾಯಕವಾದ ಯೋಜನೆಗಳಿವೆಯೇ ಹೊರತು ಹರಿಜನರಿಗೆ ಲಾಭದಾಯಕವಾದ ಯಾವ ಯೋಜನೆಯೂ ಇಲ್ಲ. ಅವರಿಗೆ ಉದ್ಯೋಗದಲ್ಲಿ ಪ್ರಗತಿಯಾಗುವಂಥ ಯಾವ ಯೋಜನೆಯೂ ಇಲ್ಲ. ಈಗಲಾದರೂ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣ ಕೊಡಬೇಕು. ಪುಕ್ಕಟ್ಟೆಯಾಗಿ ಕೆಲವು ರೀತಿಯ ಸಹಾಯಧನ ಕೊಡುವ ವ್ಯವಸ್ಥೆ ಇದೆ, ಅದನ್ನು ನಿಲ್ಲಿಸಬೇಕೆಂದು ಸೂಚನೆ ಮಾಡುತ್ತೇನೆ. ಈಗಿರುವ ಆಶ್ರಮ ಶಾಲೆ, ಹಾಸ್ಟಲು ಮುಂತಾದುವುಗಳನ್ನು ಒದಗಿಸುವ ಯೋಜನೆಯೇನಿದೆ ಅದಕ್ಕೆ

(ಶ್ರೀ ಜಿ. ಎಲ್. ಕಬಾಡಿ)

ಬದಲಾಗಿ ರಾಮಕೃಷ್ಣಾಶ್ರಮದವರು ನಡೆಸುವ ರೀತಿಯಲ್ಲಿ ಹರಿಜನರ ಮಕ್ಕಳಿಗೆ ಶಾಲೆ ತೆರೆದು ಪ್ರತಿಯೊಂದು ಜಿಲ್ಲೆಯಲ್ಲೂ ವ್ಯವಸ್ಥೆ ಮಾಡುವುದು ಬಹಳ ಉತ್ತಮವೆಂದು ನಾನು ಸಲಹೆ ಮಾಡುತ್ತೇನೆ. ವಿದ್ಯಾಪ್ರಗತಿಯಾದರೆ ಹರಿಜನರ ಪ್ರಗತಿಯಾಗುವುದು.

ನಮ್ಮ ಬಿಜಾಪುರ ಜಿಲ್ಲೆಯ ಬರಗಾಲಕ್ಕೆ ಹೆಸರುವಾಸಿಯಾಗಿದೆ. ಅಲ್ಲಿ ಬರಗಾಲ ಕಾಮಗಾರಿಗಳನ್ನು ಸಾಕಷ್ಟು ಕೈಕೊಳ್ಳಬೇಕು. ಕೆಲವು ಕಡೆ 250 ಬೆಡ್ ಇರುವ ಆಸ್ಪತ್ರೆ ಮಾಡಿದರೂ ಡಾಕ್ಟರಿಗೆ ಕ್ವಾರ್ಟರಿಲ್ಲ. ಆದುದರಿಂದ ಇನ್ನುಮುಂದಾದರೂ ಡಾಕ್ಟರುಗಳು ಮತ್ತು ನರ್ಸುಗಳಿಗೆ ಕ್ವಾರ್ಟರ್ಸ್ ಕಟ್ಟಿಸಿಕೊಡಬೇಕು. ಮಹಾರಾಷ್ಟ್ರಕ್ಕೆ ವಿದ್ಯುತ್ತನ್ನು ಸರಬರಾಜು ಮಾಡಿ ಅಲ್ಲಿನ ಕೈನ ಪ್ರಾಜೆಕ್ಟಿನಿಂದ ನೀರನ್ನು ಪಡೆಯುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದರು. 12 ಮಿಲಿಯನ್ ಕಿಲೋವಾಟುಗಳಷ್ಟು ವಿದ್ಯುತ್ತನ್ನು ಮಹಾರಾಷ್ಟ್ರಕ್ಕೆ ಕೊಟ್ಟು 100 ಕ್ಯೂಸೆಕ್ಸ್ ನೀರನ್ನು ಕೈನಾ ಪ್ರಾಜೆಕ್ಟಿನಿಂದ ಕೃಷ್ಣಾನದಿಗೆ ಪಡೆಯಬೇಕಾಗಿತ್ತು ಆದರೆ ಕೃಷ್ಣ ನದಿಗೆ ನೀರು ಬರಲಿಲ್ಲ. ಇದರಿಂದ 5 ಲಕ್ಷ 30 ಸಾವಿರ ರೂಪಾಯಿ ನಷ್ಟವಾಗಿದೆ. ಇದಕ್ಕೆ ಜವಾಬ್ದಾರರು ಯಾರು ? ಇಂಥ ಬೇಜವಾಬ್ದಾರಿ ಕೆಲಸದಿಂದ ರಾಜ್ಯಕ್ಕೆ ಹಾನಿಯಾಗುವುದು. ಕೃಷ್ಣಾ ನದಿಯಲ್ಲಿ ನೀರಿಲ್ಲದೆ ಆದರಿಂದ ನೀರು ಪಡೆಯುವ ಪ್ರದೇಶಗಳಿಗೆ ತೊಂದರೆಯಾಗಿದೆ. ಇಂಥ ಕೆಲಸ ಮಾಡಬಾರದು. ಇದಕ್ಕೆ ಕೈಹಾಕದಿದ್ದರೆ ಒಳ್ಳೆಯದಾಗುತ್ತಿತ್ತು. ಇಷ್ಟು ಹೇಳಿ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ಗೋಪಿನಾಥ ಆರ್. ಸಾಂದ್ರ (ಹುಬ್ಬಳ್ಳಿ—ಗ್ರಾಮಾಂತರ).—ಸನ್ಮಾನ್ಯ ಅಧ್ಯಕ್ಷಣಿಯರೇ, ಬಡವರ ಬವಣೆಯನ್ನು ನೀಗಿಸಲು ಪ್ರಯತ್ನಿಸುವಂಥ, ಮಧ್ಯಮ ವರ್ಗದ ಕಷ್ಟಗಳನ್ನು ಕಡಿಮೆ ಮಾಡುವಂಥ ಹಾಗು ಶ್ರೀಮಂತರ ಹಣವನ್ನು ಕನ್ನಡನಾಡಿನ ಅಭಿವೃದ್ಧಿಗೆ ತೊಡಗಿಸುವಂಥ ಬಜೆಟ್ಟನ್ನು ಮಂಡಿಸಿದ ನಮ್ಮ ರಾಜ್ಯದ ಆರ್ಥಿಕ ಮಂತ್ರಿ ಶ್ರೀಮಾನ್ ಘೋರ್ಪಡೆಯವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಗತಿಸಿ ಹೋದ ಸರಕಾರ ಓವರ್ ಡ್ರಾಫ್ಟ್ ಸಮಸ್ಯೆಯನ್ನು ತಂದು ಬೆಳೆಸಿ ನಮ್ಮ ನಾಡಿನ ಪ್ರಗತಿಗೆ ದೊಡ್ಡ ಆತಂಕ ತಂದೊಡ್ಡಿದ್ದನ್ನು ಜಾಣತನದಿಂದ ನಮ್ಮ ಆರ್ಥಿಕಮಂತ್ರಿಗಳು ಪರಿಹರಿಸಿ ನಮ್ಮ ನಾಡಿಗೆ ಮಹದುಪಕಾರ ಮಾಡಿದ್ದಾರೆ. ನಾನು, ನನ್ನ ಸಂಗಡಿಗರು ಹಾಗು ಕನ್ನಡ ನಾಡಿನ ಹಿತವನ್ನು ಬಯಸುವ ಪ್ರತಿಯೊಬ್ಬ ಕನ್ನಡಿಗ ಶ್ರೀಮಾನ್ ದೇವರಾಜ ಅರಸು ಹಾಗು ಅರ್ಥ ಮಂತ್ರಿಗಳಿಗೆ ಚಿರಋಣಿಗಳು.

ಎರಡನೆಯ ಮಹತ್ವದ ಸಾಧನೆ ಎಂದರೆ 160 ಕೋಟಿ ರೂಪಾಯಿಗಳ ಸಹಾಯ ನಮ್ಮ ಕಾಳಿ ಯೋಜನೆಗೆ ತರುವ ವ್ಯವಸ್ಥೆ ಕನ್ನಡರಾಜ್ಯ ಅಸ್ತಿತ್ವದಲ್ಲಿ ಬಂದು 16 ವರ್ಷಗಳಾದರೂ ಇಷ್ಟೊಂದು ಭಾರಿ ಮೊತ್ತದ ಸಹಾಯ ಈ ಹಿಂದಿನ ಯಾವ ಸರಕಾರಗಳು ಕೇಂದ್ರ ಸರಕಾರದಿಂದ ತಾರದೆ ಇದ್ದದ್ದು ಇಲ್ಲಿ ನೆನೆದು, ಇಂಥ ಭಾರಿ ಮೊತ್ತದ ಸಹಾಯವನ್ನು ಕೇಂದ್ರದಿಂದ ತಂದು ನಮ್ಮ ಪಕ್ಷದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು, ಹಾಗು ಅರ್ಥಮಂತ್ರಿ ಶ್ರೀ ಘೋರ್ಪಡೆ ಯವರಿಗೆ ಕನ್ನಡ ನಾಡಿನ ಸಮಗ್ರ 3 ಕೋಟಿ ಜನ ಚಿರಋಣಿಯಾಗಿದ್ದಾರೆ. ಇಷ್ಟೊಂದು ಭಾರಿ ಮೊತ್ತದ ಹಣವನ್ನು ಕನ್ನಡನಾಡಿನ ಅಭಿವೃದ್ಧಿಗೋಸ್ಕರ ಕೇಂದ್ರ ಸರಕಾರದಿಂದ ತಂದದ್ದು ನಮ್ಮ ವಿರೋಧ ಪಕ್ಷದ ನಾಯಕ ಶ್ರೀಮಾನ್ ದೇವೇಗೌಡರಿಗೆ ಸಂಶಯವನ್ನುಂಟುಮಾಡಿದೆ. ಈ ಕಾರ್ಯದ ಹಿಂದೆ ಏನೋ ಮಹಾ ರಹಸ್ಯವಿದೆ, ಕನ್ನಡನಾಡನ್ನು ಒತ್ತೆ ಇಟ್ಟಿರುವರೋ ಎಂಬ ಶಂಕೆಯನ್ನು ಅವರು ವ್ಯಕ್ತಪಡಿಸಿದ್ದಾರೆ. ಇದರ ರಹಸ್ಯವನ್ನು ಹುಡುಕಲು ಇಲ್ಲದ ಸಲ್ಲದ ಕಲ್ಪನೆ ಮಾಡಿಕೊಂಡು ಒಂದು ಥೀಸಿಸ್ ಬರೆದು ಪಿ.ಎಚ್.ಡಿ. ಪದವಿ ಪಡೆಯಲು ಹೊರಟಿದ್ದಾರೆ. ಆದರೆ ಜನತಾ ಯೂನಿವರ್ಸಿಟಿಯವರು ಅವರ ಥೀಸಿಸ್ಸನ್ನು ಒಪ್ಪುವುದಿಲ್ಲವೆಂಬುದನ್ನು ಶ್ರೀಮಾನ್ ದೇವೇ ಗೌಡರು ತಿಳಿಯಬೇಕು. ಅವರಿಗೆ ಯಾವ ಸಂಶಯವೂ ಬೇಡ ಎಂದು ಹೇಳುತ್ತೇನೆ.

ಇನ್ನು ಕನ್ನಡ ಕನ್ನಡ ಎಂದು ಉಸಿರಾಡಿಸುತ್ತಿರುವ ಕನ್ನಡ ಸಾಹಿತಿ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಸರಕಾರ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲು ತೊಂದರೆಗಳಿವೆಯೆಂದು ಮುಖ್ಯಮಂತ್ರಿಗಳು ಹೇಳಿದಾಗ ಅವೆಲ್ಲ ತೊಂದರೆಗಳನ್ನು ಒಂದೆರಡು ತಿಂಗಳಲ್ಲಿ ತಾವು ಹಾಗು ಡಾ. ಜವರೇಗೌಡರು ನೀಗಿಸುವುದಾಗಿಯೂ ತಮಗೆ ಅಧಿಕಾರ ಕೊಡ ಬೇಕೆಂದೂ ಹೇಳಿದ್ದಾರೆ. ಇದೆಂಥ ಕನ್ನಡ ಅಭಿಮಾನ ? ಅಧಿಕಾರ ಕೊಟ್ಟರೆ ಮಾತ್ರ ಕನ್ನಡ ಸೇವೆ ಮಾಡುತ್ತೇವೆನ್ನುವುದು ಸರಿಯೇ ? ಶ್ರೀ ಕೋಣಂದೂರು ಲಿಂಗಪ್ಪನವರು ಸ್ವಯಂಸ್ಫೂರ್ತಿಯಿಂದ

ತಮಗೆ ಯಾರು ಬೇಕೋ ಅವರನ್ನು ಕೂಡಿಕೊಂಡು ಸರಕಾರ ಅನುಭವಿಸುತ್ತಿರುವ ತೊಂದರೆಗಳಿಗೆ ಪರಿಹಾರ ಹುಡುಕಲಿ. ಬೇಕಾದರೆ ನಾವು ಮುಖ್ಯಮಂತ್ರಿಗಳಿಗೆ ಅವರು ನೀಡಿದ ಪರಿಹಾರ ಕ್ರಮಕ್ಕೆ ಯೋಗ್ಯವಿದ್ದರೆ ಪುರಸ್ಕಾರ ಕೊಡಬೇಕೆಂದು ಸೂಚಿಸುತ್ತೇವೆ. ಆದ್ದರಿಂದ ಅವರು ಇಂದಿನಿಂದಲೇ ತಮ್ಮ ಎಲ್ಲ ಕೆಲಸಗಳನ್ನೂ ಬಿಟ್ಟು ಈ ಕಾರ್ಯಕ್ಕೆ ಕೈಹಾಕಿದರೆ ಕನ್ನಡ ಜನತೆ ಚಿರಋಣಿ ಯಾಗಿರುವುದು.

ಆಮೇಲೆ ಒಕ್ಕಲತನ ಬಿಟ್ಟರೆ ಕೈಮಗ್ಗದ ಉದ್ಯಮ ನಮ್ಮ ನಾಡಿನಲ್ಲಿ ದೊಡ್ಡ ಉದ್ಯಮ. ಈ ಉದ್ಯಮದಲ್ಲಿ 10 ಲಕ್ಷ ಜನ ತೊಡಗಿದ್ದಾರೆ. ಸುಮಾರು 1,48,000 ಹತ್ತಿ ಕೈಮಗ್ಗಗಳು ಹಾಗು 8000 ರೇಷ್ಮೆ ಕೈಮಗ್ಗಗಳು ನಮ್ಮ ನಾಡಿನಲ್ಲಿವೆ. ಇದರಲ್ಲಿ ತೊಡಗಿರುವವರಿಗೆ ಬಹಳ ತೊಂದರೆ ಇದೆ. ಇದಕ್ಕೆ ಸಂಬಂಧಪಟ್ಟಂತೆ ಎರಡು ಸೊಸೈಟಿಗಳನ್ನು ಹಿಂದೆ ಪ್ರಾರಂಭಿಸಿದ್ದು ದುರ್ದೈವದಿಂದ ಅವರೆಡೂ ಸೂಪರ್‌ಸೀಡ್ ಆಗಿವೆ. ಇವತ್ತು ಅವಕ್ಕೆ ಬೇಕಾದ ಕಚ್ಚಾ ಮಾಲು ಸಾಕಾದಷ್ಟು ಸಿಕ್ಕುವುದಿಲ್ಲ, ರಿಬೇಟ್ ಸಿಕ್ಕುತ್ತಿಲ್ಲ. ಅವುಗಳಿಗೆ ಸರಕಾರ ಹಣ ಕೊಡುತ್ತಿದ್ದರೂ ಸಕಾಲದಲ್ಲಿ ಸರಿಯಾಗಿ ಅದು ಸಿಕ್ಕುತ್ತಿಲ್ಲ. ಇದನ್ನು ಗಮನಕ್ಕೆ ತರುತ್ತೇನೆ.

ಇನ್ನು ಫಿಲ್ಮಂ ಇಂಡಸ್ಟ್ರೀಸ್ ಬಗ್ಗೆ ಎರಡು ಮಾತನ್ನು ಹೇಳಬೇಕಾಗಿದೆ. ಇದು ಹಣ ಕೊಡುವ ಉದ್ಯಮ. ಇದರಿಂದ ಈ ದಿವಸ 3 ಕೋಟಿ 83 ಲಕ್ಷ ರೂಪಾಯಿಗಳ ಉತ್ಪತ್ತಿ ಸರಕಾರಕ್ಕೆ ಬರುತ್ತಿದೆ. ಹೀಗಿರುವಾಗ ಕೇವಲ 12 ಲಕ್ಷ ರೂಪಾಯಿಗಳನ್ನು ಸಬ್‌ಸಿಡಿ ಮತ್ತು ಬಹುಮಾನಗಳ ರೂಪವಾಗಿ ಕೊಡುವುದು ಸಾಲದು. ಇದರ ಅಭಿವೃದ್ಧಿಗೆ ಹೆಚ್ಚು ಗಮನಕೊಡಬೇಕು. ಈ ಕೈಗಾರಿಕೆಗೆ ಅನೇಕ ತೊಂದರೆಗಳಿವೆ. ಥಿಯೇಟರುಗಳಿಲ್ಲ, ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಬಿಜಾಪುರಗಳಲ್ಲಿ ಥೀಯೇಟರುಗಳು ಸಿಕ್ಕುವುದಿಲ್ಲ. ಕಚ್ಚಾ ಫಿಲಂ ತರಲು ಮದ್ರಾಸಿಗೆ ಹೋಗಬೇಕು. ಹೀಗೆ ಅನೇಕ ಸಮಸ್ಯೆಗಳಿವೆ. ಈಗ ನಮ್ಮ ಕನ್ನಡನಾಡಿನಲ್ಲಿ 221 ಪಟ್ಟಣಗಳಿವೆ. ಇದರಲ್ಲಿ ಸುಮಾರು 130 ಪಟ್ಟಣಗಳಲ್ಲಿ ಖಾಸಗಿ ಥೀಯೇಟರುಗಳಿವೆ. ಸರಕಾರ ಹೆಚ್ಚುಹೆಚ್ಚಾಗಿ ಥಿಯೇಟರುಗಳನ್ನು ಕಟ್ಟಿಸಬೇಕು, ಬೇಕಾದವರಿಗೆ ಒದಗಿಸಬೇಕು, ಇಲ್ಲಿ ಸೆನ್ಸಾರ್ ಬೋರ್ಡ್ ಆಗಬೇಕು, ಥಿಯೇಟರ್ ಕಟ್ಟಲು ಧನಸಹಾಯಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

4-00 P.M.

(MR. DEPUTY SPEAKER in the Chair)

ಆಮೇಲೆ ಕನ್ನಡ ರಾಜ್ಯವಾಗಿ 16 ವರ್ಷಗಳ ಕಾಲ ಅದು ಅಸ್ತಿತ್ವದಲ್ಲಿ ಬಂದರೂ ಕಾಯಿದೆ ಯಲ್ಲಿ ಏಕತೆ ಬಂದಿಲ್ಲ. ಮದ್ರಾಸ್ ಭಾಗದಲ್ಲಿ ಒಂದು ಕಾಯಿದೆ, ಮುಂಬೈ ಭಾಗದಲ್ಲಿ ಒಂದು ಕಾಯಿದೆ, ಹೈದರಾಬಾದು ಭಾಗದಲ್ಲಿ ಒಂದು ಕಾಯಿದೆ ಇದೆ. ಸಮಗ್ರ ಒಂದೇ ಕಾಯಿದೆ ಯನ್ನು ರಚಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇಂಟರ್ ಸ್ಟೇಟ್ ಸೀನಿಯಾರಿಟಿ ಪಟ್ಟಿ ಕೂಡ ಇನ್ನೂ ಇದುವರೆಗೂ ತಯಾರಾಗಿಲ್ಲ. ಇದನ್ನು ಕೂಡಲೇ ತಯಾರಿಸಿ ಜನತೆಗೆ ಅನುಕೂಲತೆ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕೊಳಚೆ ಪ್ರದೇಶದ ಬಗ್ಗೆ ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ರಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅರ್ಬನ್ ಹೌಸಿಂಗ್ ಸ್ಕೀಂ ಎಲ್ಲಾ ಕಡೆಗಳಿಗೂ ಅನ್ವಯಿಸಬೇಕೆಂದು ಕೇಳಿಕೊಳ್ಳುತ್ತೇನೆ. ಫಾರ್ ಒನ್ ಮ್ಯಾನ್ ಒನ್ ಪ್ರೊಫೆಷನ್ ಎನ್ನುವ ತತ್ವವನ್ನು ಇಟ್ಟುಕೊಂಡಂಥ ಕೆಲವು ಮಂತ್ರಿಗಳು ಕೆಲವೊಂದು ಉಪಸಮಿತಿಗಳಿಗೆ, ಕಾರ್ಪೊರೇಷನ್ ಬೋರ್ಡುಗಳಿಗೆ ತಾವೇ ಅಧ್ಯಕರಾಗಿ ಇದ್ದಾರೆ. ಅದನ್ನು ಕೊಡಬೇಡಿ ಎಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಸರಕಾರದ ಕೆಲವು ಅಧಿಕಾರಿಗಳು ಸಿಂಡಿಕೇಟ್ ಮೈಂಡೆಡ್ ಆಗಿದ್ದಾರೆ. ಅವರೆಲ್ಲಾ ಸಿಂಡಿಕೇಟ್ ಪರವಾಗಿ ಕೆಲಸ ಮಾಡಕೂಡದು ಎಂದು ಅವರಿಗೆ ಆದೇಶ ಕೊಡಬೇಕು. ಜನತೆಗೆ ನೀಡಿದ ವಚನವನ್ನು ಪೂರೈಸಬೇಕಾದರೆ ಸಿಂಡಿಕೇಟ್ ಮೈಂಡೆಡ್ ಆಗಿರತಕ್ಕಂಥ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳಬೇಕು. ಹೋದ ಸರಕಾರದವರು ಕೆಲವೊಂದು ಬೋರ್ಡುಗಳಿಗೆ ಕೆಲವೊಂದು ಅಧಿಕಾರಿಗಳನ್ನು ನಾಮಿನೇಷನ್ ಮಾಡಿದ್ದಾರೆ. ಅದನ್ನು ನಿಲ್ಲಿಸಬೇಕು. ನಮ್ಮ ಸರಕಾರ ಆದೇಶಗಳನ್ನು ಕಾರ್ಯರೂಪದಲ್ಲಿ ತರುವುದರೊಳಗೆ ಅವರು ಅಡ್ಡಿ ಬರುವ ಪ್ರಸಂಗ ಇದೆ. ಆದುದರಿಂದ ಹೊಸ ಸರಕಾರ ಹೊಸ ಬೋರ್ಡುಗಳನ್ನು ರಚಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಇವೊತ್ತಿನ ದಿವಸ ನನಗೆ ಮಾತನಾಡುವುದಕ್ಕೆ ಅವಕಾಶಕೊಟ್ಟ ಅಧ್ಯಕ್ಷರಿಗೆ ಕೃತಜ್ಞತೆಯನ್ನು ಸೂಚಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The rest of the three names that I will be calling have been included on the specific condition that they would not take more than 5 minutes each. The Whip of the party who had a discussion with the Hon'ble Speaker had informed her that they would not take more than 5 minutes. As such these names have been included inside the Chambers of the Hon'ble Speaker.

Sri B. B. SAYANAK.—Since 5 minutes' restriction has been imposed upon me, I am not going to speak.

† Sri BAPU RAO PATIL.—(Aurad) - [Hindi.]

Sri BAPURAO ANAND RAO (Basavakalyan).—Madam Speaker, I rise to welcome the budget which is practical, purposeful, meaningful, and job oriented budget for which I congratulate the Hon. Finance Minister. He took charge of the Finance Portfolio when the State is facing the financial difficulty. He is managing to get out of the financial difficulty. He has already fulfilled some of the promises made during election. As you all know that Bidar District is a very backward area and it is declared as underdeveloped area. Even the Districts of Raichur and Gulbarga are also backward and under-developed. I would appeal to the House that more funds should be made available to bring these areas to the level of other regions in this State. These areas should not be neglected in all respects of developmental activities. Before going to the details. I suggest a few of the general points to this House.

Corruption has taken a deep root in the body politics. In order to wipe out the character assasination of the public representatives, I request the Chief Minister to bring a legislation in this respect and the office of the Lok Ayukth may be instituted so that we can just avoid corruptive practices. The Vigilence Commissioner's Office has become ineffective. I do not think it is working very efficiently. For Example there is a lot of corruption prevailing in the area where the Vigilence Commissioner's Office is located. The corruption is rampant in the same place. The Staff of the Transport Commissioner and some other officers are indulging in corruption activities. To substantiate this I must say that there are about 100 lorries and other Vehicles of Basavakalyan are registered at Andhra Pradesh and Maharashtra. instead of in Mysore State is losing a huge amount of income. It is a fact and it is in the records.

I want to bring to the notice of this House that in Bidar District, Karanji Project is the only project which could improve the economic conditions of the people. It is the only source of life for the people there. Hon. Minister for Finance has allotted some amount for this project. I have got my own doubt whether it is possible to execute the work to completion within the amount allotted. It is a very meagre amount. Therefore I pray that more grants may be made available because it is a very important project on which the entire population of Bidar is depending. It is also learnt that the

Government has asked the officers to take up and finish the work Departmentaly I doubt very much that such a project could be taken up and completed departmentally. Anyway I leave this matter to the Hon. Minister concened.

Coming to the Education, the State is spending crores of rupees on education. Though the State is spending a large portion of its revenue on Education, the administration of the Primary education is very bad. We are facing a very sad situation. There are a number of complaints in Primary Schools that there is no space to accommodate all the children, no teachers to handle classes particularly for the minority languages. The students are denied admission. I request that the 4th University at Gulbarga may be established. There are many colleges and some more colleges are coming up. The establishment of a University at Gulbarga is long awaited demand and if a 4th University is to be established it should be established at Gulbarga alone. Our request for the 4th University at Gulbarga should be considered first. With these few words I thank the Chair and conclude my speech.

† ಶ್ರೀ ವಿ. ಮಸಿಯಪ್ಪ (ಚಳ್ಳಕೆರೆ).—ಮಾನ್ಯ ಸಭಾಧ್ಯಕ್ಷರೇ, ಅನಿರೀಕ್ಷಿತವಾಗಿ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಸಿಕ್ಕಿದ್ದಕ್ಕಾಗಿ ನಾನು ಮೊಟ್ಟಮೊದಲನೆಯದಾಗಿ ಮಾನ್ಯ ಸಭಾಧ್ಯಕ್ಷರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಮತ್ತು ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕಂಥ ಆಯವ್ಯಯ ಪತ್ರವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈಗಾಗಲೇ ಅನೇಕ ಸದಸ್ಯರು ವ್ಯಕ್ತಪಡಿಸಿರುವ ಹಾಗೆ ಮಾನ್ಯ ಸಚಿವರು ಮೈಸೂರು ರಾಜ್ಯಕ್ಕೆ ಮಾಡಿರತಕ್ಕಂಥ ಒಂದು ಮಹತ್ತರವಾದ ಉಪಕಾರ ಸ್ಮರಣೆ ಮಾಡಿಕೊಳ್ಳುವುದರಲ್ಲಿ ನಾನೂ ಕೂಡ ಅವರ ಜೊತೆಯಲ್ಲಿ ಸೇರುತ್ತೇನೆ.

ಇನ್ನು ಕಾಳೀನದಿ ಯೋಜನೆಯ ಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರದವರೇ ವಹಿಸಿಕೊಳ್ಳುವಂತೆ ಮಾಡಿರತಕ್ಕಂಥಾದ್ದು ಮತ್ತು ಮುಂಗಡ ಹಣವನ್ನು ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಮೂಲಕ ಸರಿಪಡಿಸತಕ್ಕಂಥಾದ್ದು ಬಹಳ ಅಭಿನಂದನೀಯವಾಗಿರತಕ್ಕಂಥ ವಿಷಯ.

ಇನ್ನು ಕಾಳೀನದಿ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ವ್ಯಕ್ತಪಡಿಸಿರತಕ್ಕಂಥ ಸಂಶಯ ಏನು ಇದೆಯೋ ಆ ಸಂಶಯಕ್ಕೆ ಆಸ್ಪದವಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏತಕ್ಕೆಂದರೆ ಈ ನೀರಾವರಿ ಯೋಜನೆಗಳು ಲಾಭದಾಯಕವಾಗಿರತಕ್ಕಂಥಾದ್ದಲ್ಲವೆಂದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ ಆಗಿರಬೇಕಾದರೆ ಈ ಕಾಳೀನದಿ ಯೋಜನೆಗೆ ಕೇಂದ್ರ ಸರ್ಕಾರದವರು ಸಹಾಯ ಮಾಡಲು ಒಪ್ಪಿಕೊಂಡಂತೆ ಬಾಕಿ ಯೋಜನೆಗಳಿಗೂ ಸಹಾಯ ಪಡೆಯಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ನೀರಾವರಿ ಕಂದಾಯವನ್ನು ಹಾಕಿರುವುದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀರಾವರಿ ಕಂದಾಯ ಹಾಕಿರುವುದು ಸೂಕ್ತ ಎಂದು ಹೇಳಿದರೂ ಕೂಡ ನೀರಿನ ದರ ಸ್ವಲ್ಪ ಹೆಚ್ಚಾಗಿದೆ ಎಂದು ಒಂದು ದೃಷ್ಟಿಯಿಂದ ಹೇಳಬೇಕಾಗುತ್ತದೆ. ಮತ್ತೊಂದು ದೃಷ್ಟಿಯಿಂದ ಹೇಳಬೇಕಾದರೆ 1965ರಲ್ಲಿ ವಾಟರ್ ರೇಟ್ ಹಾಕುವಾಗ ಎರಡು ಬೆಳೆಗಳಿಗೂ ಎಂದರೆ ಮೊದಲನೆ ಬೆಳೆಗೆ 16 ರೂಪಾಯಿ ಮತ್ತು ಎರಡನೇ ಬೆಳೆಗೆ 8 ರೂಪಾಯಿ ಹಾಕಬೇಕೆಂದು ಆಜ್ಞೆ ಮಾಡಿದ್ದರು. ಈಗ ಮಾಡಿರುವ ಬದಲಾವಣೆಯಲ್ಲಿ ವರ್ಷಕ್ಕೆ ಒಂದೇ ವಾಟರ್ ರೇಟ್ ಹಾಕಬೇಕೆಂಬುದು ಮಾನ್ಯ ಹಣಕಾಸಿನ ಮಂತ್ರಿಗಳ ಅಭಿಪ್ರಾಯವಿರಬಹುದು ಎಂದು ಭಾವಿಸುತ್ತೇನೆ.

As per the 1965 Rules, water levy for the first crop is 16 rupees and for the second crop, 8 rupees. From this report, it is not clear whether the same thing holds good. I take it for granted that the Hon. Finance Minister wants to levy only one water rate for the year.

(ಶ್ರೀ ವಿ. ಮಾಸಿಯಪ್ಪ)

ಒಂದು ವೇಳೆ ಎರಡು ಬೆಳೆಗಳಿಗೂ ನೀರಿನ ತೆರಿಗೆ ಹಾಕುವುದಾದರೆ ಅದರಿಂದ ರೈತರಿಗೆ ಬಹಳ ಅನ್ಯಾಯವಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರು ಈ ಸಂದರ್ಭದಲ್ಲಿ ಗಮನಿಸಬೇಕೆಂದು ಹೇಳುತ್ತೇನೆ.

ವಾಟರ್ ರೇಟ್ ಬಗ್ಗೆ ಮತ್ತೊಂದು ವಿಷಯವನ್ನು ಮಾನ್ಯ ಸರ್ಕಾರ ಗಮನಿಸಬೇಕಾಗಿದೆ. ಮಂತ್ರಿಗಳ ಭಾಷಣದ 22ನೇ ಪುಟದಲ್ಲಿ ರೈತರಿಗೆ ಅನ್ಯಾಯವಾಗದೆ ಇರತಕ್ಕ ರೀತಿಯಲ್ಲಿ ಸಾಕಷ್ಟು ರಕ್ಷಣೆಯನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಅವರು ಎಷ್ಟು ಒಳ್ಳೆಯ ಮನಸ್ಸಿನಿಂದ ಪ್ರಯತ್ನ ಪಟ್ಟರೂ ಕೂಡ ರೈತರಿಗೆ ಇದರಿಂದ ಆಗತಕ್ಕ ಕಿರುಕುಳವನ್ನು ತಪ್ಪಿಸುವುದಕ್ಕೆ ಅಸಾಧ್ಯ. ಸಣ್ಣ ಪುಟ್ಟ ಕೆರೆಗಳು ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರು ರಾಜ್ಯದಲ್ಲಿವೆ. ಅವುಗಳಲ್ಲಿ ಅನೇಕ ಕೆರೆಗಳ ಕೆಳಗೆ ಒಂದು ಬೆಳೆ ಕೂಡ ಆಗದೆ ಇರುವ ಸಂದರ್ಭಗಳಿವೆ. ಬೆಳೆ ಇಲ್ಲದಾಗ ಕಂದಾಯ ಮಾಫಿ ಮಾಡಬೇಕಾಗುತ್ತದೆ. ಆದುದರಿಂದ ಸಣ್ಣಪುಟ್ಟ ಕೆರೆಗಳಿಗೆ ಸಂಬಂಧಪಟ್ಟಂತೆ ಈ ಪದ್ಧತಿಯನ್ನು ಕೈಬಿಟ್ಟು, ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಮಾತ್ರ ಅನ್ವಯಿಸಬೇಕು. ಸಣ್ಣಪುಟ್ಟ ಕೆರೆಗಳ ಸಂಬಂಧದಲ್ಲಿ ಹಿಂದಿನಿಂದ ಇದ್ದ ತರೀ, ಬಾಗಾಯಿತು, ಖುಷ್ಕಿ ಕಂದಾಯವನ್ನು ವಿಧಿಸತಕ್ಕ ಪದ್ಧತಿಯನ್ನು ಮುಂದುವರಿಸಬೇಕು. ಅಗತ್ಯವಾದಲ್ಲಿ ತರೀ ಕಂದಾಯವನ್ನು ಜಾಸ್ತಿ ಮಾಡಿದರೂ ಚಿಂತೆ ಇಲ್ಲ, ರೈತರು ಕೊಡುತ್ತಾರೆ. ಆದ್ದರಿಂದ ಹಿಂದಿನಿಂದ ಇದ್ದ ಪದ್ಧತಿಯನ್ನು ಸಣ್ಣ ಕೆರೆಗಳ ಮಟ್ಟಿಗೆ ಅನ್ವಯಿಸಬೇಕೆಂದು ಹೇಳುತ್ತೇನೆ.

ಇರಿಗೇಷನ್ ಪ್ರಾಜೆಕ್ಟ್‌ಗಳ ಬಗ್ಗೆ ಒಂದು ಸಲಹೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಕಾವೇರಿ ಪಾತ್ರದಲ್ಲಿನ 45 ಟಿ.ಎಂ.ಸಿ. ನೀರನ್ನು 1974 ರೊಳಗೆ ನಾವು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಅಷ್ಟರೊಳಗಾಗಿ ಉಪಯೋಗ ಮಾಡುವುದಕ್ಕೆ ಆಗದೆ ಹೋದರೆ ನಮ್ಮ ರಾಜ್ಯಕ್ಕೆ ಅಪಾರವಾದ ನಷ್ಟವಾಗುತ್ತದೆ. ಈಗ ಮಾಡಿರತಕ್ಕ ಯೋಜನೆಗಳಲ್ಲಿ ಹೇಮಾವತಿ ಯೋಜನೆ ಮಾತ್ರ ಮುಖ್ಯವಾದುದು. ಇದರಲ್ಲಿ ಕೇವಲ 22 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳಬಹುದು, ಇದನ್ನು 34 ಟಿ.ಎಂ.ಸಿ.ವರೆಗೂ ಹೆಚ್ಚು ಮಾಡಲು ಸರ್ಕಾರದವರು ನಿರ್ಧರಿಸಿದ್ದಾರೆಂದು ಕೇಳಿದ್ದೇನೆ. ಅದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಇದರಿಂದ ನಮ್ಮ ಎಲ್ಲ ಸಮಸ್ಯೆಗಳೂ ಬಗೆಹರಿಯುವುದಿಲ್ಲ. ಇನ್ನೂ 10–12 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಬಡ್ಜೆಟಿನಲ್ಲಿ ಏನೂ ಹಣವನ್ನು ಒದಗಿಸಿದಂತೆ ಕಾಣುತ್ತಿಲ್ಲ.

ಕಾಳಿ ನದಿ ಯೋಜನೆಗೆ ಕೇಂದ್ರದಿಂದ ಹಣವನ್ನು ತರುತ್ತೇವೆಂದು ಹೇಳಿದ್ದಾರೆ. ಇದು ಸಂತೋಷದ ವಿಷಯ. ಕಾವೇರಿ ಯೋಜನೆಗೆ ಸಂಬಂಧಪಟ್ಟ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೋಸ್ಕರ ಬೇರೆ ಕೆಲವು ಯೋಜನೆಗಳನ್ನು ಕೈ ಬಿಟ್ಟು ಆ ಹಣವನ್ನೆಲ್ಲ ಉಪಯೋಗಿಸಿ 1974 ನೇ ಇಸವಿ ಒಳಗಾಗಿ 45 ಟಿ.ಎಂ.ಸಿ. ನೀರನ್ನು ಪೂರ್ಣವಾಗಿ ಬಳಸಿಕೊಂಡು ಮೈಸೂರು ರಾಜ್ಯದಲ್ಲಿ ರೈತರಿಗೆ ಉಪಯೋಗವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು, ಮುಂದಿನ ಪೀಳಿಗೆಯ ಅಭಿನಂದನೆಗೆ ಪಾತ್ರರಾಗಬೇಕೆಂದು ಪ್ರಾರ್ಥನೆ ಮಾಡುತ್ತೇನೆ. 1974ನೇ ಇಸವಿಯ ನಂತರ ಈ ನೀರನ್ನು ಉಪಯೋಗಿಸಿಕೊಳ್ಳತಕ್ಕ ಹಕ್ಕು ನಮಗೆ ಇಲ್ಲದಂತಾಗುತ್ತದೆ ಎನ್ನುವುದನ್ನು ಕೂಡ ಸರ್ಕಾರ ಮನಗಾಣಬೇಕಾಗಿದೆ.

ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸಿಕೊಡತಕ್ಕ ಸಂದರ್ಭದಲ್ಲಿ ಸರ್ಕಾರ ಅನೇಕ ಯಶಸ್ವಿಯಾಗಿರತಕ್ಕ ಕೆಲಸವನ್ನು ಮಾಡಿದೆ. ಈಗ ಆಗಿರತಕ್ಕ ಪ್ರಗತಿಯ ಬಗ್ಗೆ ಅಭಿನಂದಿಸುತ್ತೇನೆ. ಆದರೆ ವ್ಯವಸಾಯಕ್ಕೆ ಉಪಯೋಗಿಸುವ ವಿದ್ಯುಚ್ಛಕ್ತಿಗೆ ಏನು ದರ ವಿಧಿಸುತ್ತಿದ್ದಾರೆ ಅದನ್ನು ವ್ಯವಸಾಯದ ಉತ್ಪಾದನೆಯನ್ನು ಹೆಚ್ಚು ಮಾಡಬೇಕೆಂಬ ದೃಷ್ಟಿಯಿಂದ ಕಡಿಮೆ ಮಾಡುವುದು ಸೂಕ್ತವೆನ್ನುವ ಸಲಹೆಯನ್ನು ಮಾಡುತ್ತೇನೆ.

30ನೇ ಪುಟದಲ್ಲಿ ಕನಿಷ್ಠಪಕ್ಷ ಅತ್ಯವಶ್ಯ ವಸ್ತುಗಳ ಬೆಲೆಗಳನ್ನಾದರೂ ಸ್ಥಿರ ಪಡಿಸುವುದಕ್ಕಾಗಿ ರಾಷ್ಟ್ರೀಯ ಮೌಲ್ಯ ನೀತಿಯನ್ನು ಕೈಕೊಳ್ಳುವುದು ಅಗತ್ಯ ಎಂದು ಹೇಳಿದ್ದಾರೆ. ಅತ್ಯವಶ್ಯ ವಸ್ತುಗಳಲ್ಲಿ ಅನೇಕ ಮುಖ್ಯವಾದ ವಸ್ತುಗಳು ಬರುತ್ತವೆ. ಆದರಲ್ಲಿ ಹತ್ತಿಯ ಪರಿಸ್ಥಿತಿಯನ್ನು ತೆಗೆದುಕೊಂಡರೆ ಹತ್ತಿ ಬಟ್ಟೆ ಧಾರಣೆ ಕಡಮೆಯಾಗಿಲ್ಲ, ಆದರೆ ಹತ್ತಿ ಧಾರಣೆ ಮಾತ್ರ ಕಡಮೆಯಾಗಿದೆ. ಈ ನಡುವೆ ಬರತಕ್ಕ ಲಾಭವೆಲ್ಲ ಎಲ್ಲಿ ಹೋಗುತ್ತದೆ ಎನ್ನುವುದನ್ನು ವಿಮರ್ಶೆ ಮಾಡಬೇಕು. ರಾಜ್ಯದ ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಯಿಂದ ಯಾವ ವ್ಯವಸ್ಥೆಯೂ ಕೂಡ ಆಗುತ್ತಿಲ್ಲ. ರೈತ ಬೆಳೆಯುವ ಪದಾರ್ಥಗಳ ಧಾರಣೆ ಕಡಮೆಯಾಗಿ ಅಪಾರವಾದ ನಷ್ಟವಾಗುವುದನ್ನು ಸರಿ

ಪಡಿಸುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕು ಮತ್ತು ನ್ಯಾಷನಲ್ ಪ್ರೈಸ್ ಪಾಲಿಸಿ ಸ್ಟೆಬಿಲೈಸ್ ಮಾಡುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ತೀವ್ರವಾಗಿ, ಜರೂರಾಗಿ ಕೈಕೊಳ್ಳ ಬೇಕಾದ ಅವಶ್ಯಕತೆ ಇದೆ. ಇಲ್ಲದೆ ಹೋದರೆ ರೈತ ನಷ್ಟಕ್ಕೆ ಗುರಿಯಾಗುತ್ತಾನೆ.

ಮಾನ್ಯ ಸಚಿವರು ಕಾಳಿನದಿ ಯೋಜನೆ ಮತ್ತು ಓವರ್‌ಡ್ರಾಫ್ಟ್ ಸರಿಪಡಿಸುವುದು ಹಾಗೆಯೇ ಉಕ್ಕಿನ ಕಾರ್ಖಾನೆಯನ್ನು ಮೈಸೂರು ರಾಜ್ಯದಲ್ಲಿ ಸ್ಥಿರಗೊಳಿಸುವ ಬಗ್ಗೆ ಯಶಸ್ವಿಯಾಗಿದ್ದಾರೆ. ಆರನೇ ಆರ್ಥಿಕ ಆಯೋಗದ ಮುಂದೆ ರಾಜ್ಯಸರ್ಕಾರದ ಕೇಸನ್ನು ಮಂಡಿಸುವಾಗ ಅದರಲ್ಲಿ ಕೂಡ ಅವರು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಇಷ್ಟು ಮಾತ್ರ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರಿಗೆ ಧನ್ಯ ವಾದಗಳನ್ನು ಅರ್ಪಿಸುತ್ತೇನೆ.

Sri MALLIKARJUN (Gurumitkal).—I welcome the Budget for the year 1972–73, which our Hon. Finance Minister has placed before this august House for approval. I congratulate him for having got over the difficulties of overdraft as well the deficit finances. Further, he has proposed an increase in the Dearness Allowance for the Non-Gazetted Officers and it is also appreciable that he has proposed taxes on classes and not on masses.

4–30 P.M.

The increase in the taxes on Motor Vehicles-contract carriages is justifiable. The benefit of the green revolution has gone to the richer sections of the agriculturists. So the water rate imposed by the Finance Minister is justified.

Secondly, the sales-tax increase on luxuries goods is very meagure and I suggest to the Finance Minister to enhance it from 12 to 15 per cent instead of from 12-14 per cent.

Another thing is that there are a number of villages nearly 1460, which do not have any drinking water wells. And Government has provided three crores to provide drinking water wells in all villages. In Mysore State there are about 29,000 villages out of which nearly 16,600 villages are not electrified. Therefore, Government should take immediate action to electrify all the villages.

Further I want to suggest to the Finance Minister, to abolish the Octroi levy which is not so satisfactory and the Hon'ble Finance Minister himself has agreed that Octroi tax is not so good in principle. The Bhoothalingam Committee constituted by Mysore Government and the Gajendragadkar Committee of Maharashtra have suggested that the octroi is not so good and it should be abolished immediately. Instead of octroi tax, there should be turn-over sales-tax of one per cent on goods and the staff of the octroi department should be absorbed in sales-tax Department as Bill collectors.

Another thing is about the unexploited source of revenue. MATKA gambling is rampant in the districts of Gulbarga, Raichur and Bidar as well as in Bombay Karnatak area. I suggest that either it should be completely banned or it should be legalised as in the case of lottery, races, etc. By legalising that gambling, Government will easily get a

(SRI MALLIKARJUN)

revenue of more than 5-6 crores because in Gulbarga district only, its daily turn-over will be more than two lakhs. Therefore, I suggest that either it should be banned or it should be legalised.

Regarding unemployment problem, in villages there are a number of agricultural labourers and also educated people who are unemployed.

Regarding Upper Krishna Project, Government has adopted a step-motherly attitude, because Government has not provided any sufficient grants in the Budget towards this Upper Krishna Project. Its establishment is only 11 lakhs per year and there is a grant of 194 lakhs provided for the project. Therefore, I request the Finance Minister that as he has taken interest in Kalinadi project, so also he should take keen interest in the Upper Krishna Project and take steps to quicken the tempo of progress on this project.

Next, in the Hyderabad Karnatak area, there are nearly 40 colleges including Bellary. Therefore, I request the Chief Minister to give a new University to Gulbarga District as there are a number of colleges including a medical college and engineering college. There are so many colleges in Gulbarga District.

Another point is, in Mysore State, there is no post-graduation in physical education. Throughout India, there are only two colleges one in Punjab, Patiala and another in Gwaliar in Madhya Pradesh State. Therefore I request this Government to have Post-graduation in physical education in Mysore State also.

I request this Government to propose a new housing scheme in this State because so far the Housing Board has given Houses only to rich class of people and not to poor people. There are only low income group and middle income group housing. It is not possible for the poor class, class IV servants and second division clerks to purchase these houses by depositing Rs. 11,000 or Rs. 16,000. So, this Housing Board should take keen interest for providing lower income-group housing schemes.

In rural areas, the S.C. teachers find it very difficult to get housing accommodation because the Caste-Hindus are not providing houses to them. Therefore I request this Government to have teachers quarters in all the villages. Otherwise, it is not possible for them to carry on their duties or accommodate themselves in the villages. I can also cite instances. There are a number of teachers who have gone to the villages. Some of the schools are run in Hanuman temples and these teachers are not allowed into the temples. So I request the Education Minister to have teachers quarters in all villages where schools are permitted to run. It is also my request to the Education Minister not to post the teachers in villages where they do not get living accommodation. The S.C. teachers, because of untouchability, are put to great hardship in the matter of housing in villages. Unless you

remove casteism, you cannot bring in socialism. This is my firm view. So today, not only there is a struggle between classes– rich and poor, but there is also a fight between castes. Unless we remove casteism, there will be no socialism.

I remember Dr. Ambedkar has said that in order to implement our programmes and policies, there should be good machinery, there should be good administrators.

With these words, I thank the Chair.

† ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಬಡ್ಜೆಟ್ ಚರ್ಚೆಯಲ್ಲಿ ಈ ಸಭೆಯ ಮಾನ್ಯ ಸದಸ್ಯರು ಹೆಚ್ಚಿನ ಆಸಕ್ತಿ ವಹಿಸಿ ಹಲವಾರು ರಚನಾತ್ಮಕವಾದ ಸಲಹೆಗಳನ್ನು ಮಾಡಿದ್ದಾರೆ. ಅದಕ್ಕಾಗಿ ಎಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ಈಗ ನಾನು ಬಡ್ಜೆಟ್ ಭಾಷಣದಲ್ಲಿ ಹೇಳಿದ ಪ್ರಕಾರ, ನಮ್ಮ ರಾಜ್ಯದ ಮುಂದೆ ಮೂರು ಮುಖ್ಯವಾದ ಸಮಸ್ಯೆಗಳು ಇದ್ದುವು. ಮೊದಲನೆಯದಾಗಿ, ಓವರ್ ಡ್ರಾಫ್ಟ್‌ನ ಸಮಸ್ಯೆ, ಅದರ ಜೊತೆಗೆ ಈ ಬಡ್ಜೆಟ್ಟ್ ಡಿಫಿಸಿಟ್. ಇಷ್ಟು ಇದ್ದಾಗ್ಯೂ ರಾಜ್ಯದ ಪ್ರಗತಿಯ ವೇಗವನ್ನು ಕಾಪಾಡಿಕೊಂಡು ಬರಬೇಕಾದುದು ನಮ್ಮ ಜವಾಬ್ದಾರಿ ಇವು ಮೂರು. ಈ ದೃಷ್ಟಿಯಿಂದ ನೋಡಿದರೆ, ನಮ್ಮ ಸರ್ಕಾರ ಸಾಕಷ್ಟು ಪ್ರಯತ್ನವನ್ನು ಸರಿಯಾದ ದಿಕ್ಕಿನಲ್ಲಿ ಮಾಡಿದೆ, ಸಾಕಷ್ಟು ಪ್ರಮಾಣದಲ್ಲಿ ಯಶಸ್ವಿಯಾಗಿ ಆ ಪ್ರಯತ್ನ ನಡೆದಿದೆ ಎಂದರೆ ಅದು ತಪ್ಪಾಗಲಿಕ್ಕಿಲ್ಲ. ಅದನ್ನು ಎಲ್ಲರೂ ಒಪ್ಪುತ್ತಾರೆ ಎಂದು ನಾನು ನಂಬಿದ್ದೇನೆ. ಓವರ್‌ಡ್ರಾಫ್ಟ್ ವಿಷಯ ಬಹಳ ಗಹನವಾದ ವಿಷಯ. 1971ನೇ ಡಿಸೆಂಬರ್ ತಿಂಗಳಲ್ಲಿ ನಮ್ಮ ಸರ್ಕಾರದ ಪರವಾಗಿ ಕೇಂದ್ರದಲ್ಲಿ ಹೋಗಿ 1971-72ರ ಆಖೈರಿನಲ್ಲಿ 43 ಕೋಟಿ ರೂಪಾಯಿ ಮಾತ್ರ ಆಗಬಹುದು ಎಂದು ಹೇಳಿ ಬಂದಿದ್ದರು. 2–3 ತಿಂಗಳು ಆದನಂತರ ನೋಡಿದರೆ. ಮಾರ್ಚಿ 1972ರ ಆಖೈರಿನಲ್ಲಿ ಅದು 62ಕೋಟಿ ರೂಪಾಯಿ ಆಗಿದ್ದುದು ಎಲ್ಲರಿಗೂ ಗೊತ್ತಿರುವ ವಿಷಯ. ಏಪ್ರಿಲ್ 29ನೇ ತಾರೀಖು ಅದು 71 ಕೋಟಿ ರೂಪಾಯಿ ಆಯಿತು. 62 ಕೋಟಿ ರೂಪಾಯಿ ಹೋಗಿ 71 ಕೋಟಿ ರೂಪಾಯಿ ಆದುದಕ್ಕೆ ಹೊಸ ಸರ್ಕಾರ ಜವಾಬ್ದಾರಿಯಲ್ಲ. 8 ಕೋಟಿ ರೂಪಾಯಿ ಹೆಚ್ಚು ಓವರ್‌ಡ್ರಾಫ್ಟ್ ಕಳೆದ ವರ್ಷಕ್ಕೆ ಸಂಬಂಧಪಟ್ಟಿದ್ದು. ಬಿಲ್ಲು ಪೇಮೆಂಟ್ ಮಾತ್ರ ಮಾರ್ಚಿ ತಿಂಗಳು ಆದನಂತರ ಆಯಿತು. ಆದರೆ ಎಕ್ಸ್‌ಪೆಂಡಿಚರ್ ಕಳೆದ ವರ್ಷಕ್ಕೆ ಸಂಬಂಧಪಟ್ಟಿದ್ದು ಈಗ 43 ಕೋಟಿ ರೂಪಾಯಿ ನಿರೀಕ್ಷೆ ಮಾಡಿರತಕ್ಕ ಓವರ್‌ಡ್ರಾಫ್ 71 ಕೋಟಿ ರೂಪಾಯಿ ಆಯಿತು. ಇಂಥ ಭಯಾನಕ ಪರಿಸ್ಥಿತಿ ಹಣಕಾಸಿನ ದೃಷ್ಟಿಯಿಂದ ನಮ್ಮ ರಾಜ್ಯದ ಮುಂದೆ ಇತ್ತು. ಕೇಂದ್ರದವರು ನಮ್ಮ ರಾಜ್ಯಕ್ಕೆ ಟ್ಯಾಕ್ಸ್‌ಸ್‌ನಿಂದ ಬರುವ ಹಣ ಮತ್ತು ಪ್ಲಾನ್‌ಗೋಸ್ಕರ ಬರುವ ಹಣವನ್ನು ನೇರವಾಗಿ ಏನಾದರೂ ಓವರ್‌ಡ್ರಾಫ್ಟ್ ಕಮ್ಮಿ ಮಾಡುವ ದೃಷ್ಟಿಯಿಂದ ಅಜೆಸ್ಟ್ ಮಾಡಿದ್ದರೆ, ಬಹಳ ಅನಾಹುತ ಪರಿಸ್ಥಿತಿ ನಮ್ಮ ರಾಜ್ಯಕ್ಕೆ ಬರುತ್ತಿತ್ತು. ನಾವು ನಮ್ಮ ಬಡ್ಜೆಟ್ ಮಂಡಿಸುವ ಸ್ಥಿತಿಯಲ್ಲಿ ಇರುತ್ತಾ ಇರಲಿಲ್ಲ. ಆದರೆ ಇವೊತ್ತು ಕೇಂದ್ರ ಸರ್ಕಾರದವರು ಅಂತಹ ಒಂದು ಎಕ್ಸ್‌ಟ್ರೀಮ್ ಸ್ಟೆಪ್ ತೆಗೆದುಕೊಳ್ಳಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಾನೂ ಡೆಲ್ಲಿಗೆ ಹೋದಾಗ ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಮತ್ತು ನಮ್ಮ ಓವರ್‌ಡ್ರಾಫ್ಟ್ 71-72ರ ಆಖೈರಿನಲ್ಲಿ ಯಾವ ಒಂದು ಮಟ್ಟದಲ್ಲ ಇತ್ತು ಅಷ್ಟು ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಕೊಡಲಿಕ್ಕೆ ಅವರು ಒಪ್ಪಿದರು. ಅಷ್ಟೇ ಅಲ್ಲ ಇನ್ನು 7ಕೋಟಿ ರೂಪಾಯಿ ಹೋದ ವರ್ಷಕ್ಕೆ ಸಂಬಂಧಪಟ್ಟಿದ್ದು ಇದೆ. ಸಾಧ್ಯವಾದರೆ ಅಷ್ಟಾದರೂ ಕೊಡಿ ಎಂದು ಹೇಳಿದರು. ಸಧ್ಯಕ್ಕೆ ಇಷ್ಟಾದರೂ ಒಪ್ಪಿದರು ಅಷ್ಟನ್ನು ವೇಸ್ ಮತ್ತು ಮೀನ್ಸ್ ಅಡ್ವಾನ್ಸ್ ಎಂದರೆ ಸಾಲವಾಗಿ ಪಡೆದು, ಈ ವರ್ಷದ ಹಣಕಾಸಿನ ಪರಿಸ್ಥಿತಿಯನ್ನು ಯಶಸ್ವಿಯಾಗಿ ಎದುರಿಸುವುದಕ್ಕೆ ಸಾಧ್ಯವಾಯಿತು.

ಶ್ರೀ ಎಚ್. ಡಿ. ದೇವೇಗೌಡ.—ದೀರ್ಘವಾದ ಸಾಲವೇ ?

ಶ್ರೀ ಎಂ. ವೈ. ಘೋರ್ಪಡೆ.—ಓವರ್ ಡ್ರಾಫ್ಟನ್ನು ನೇರವಾಗಿ ಅಜೆಸ್ಟು ಮಾಡಿದ್ದರೆ, ನಾವು ಏನೂ ಮಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಓವರ್ ಡ್ರಾಫ್ಟ್ ಕೊಡುವುದಿಲ್ಲ ಎಂದು ಅಧಿಕಾರ ಸ್ಥಾನದಿಂದ ಹೇಳಿದರೆ ಅದು ಜವಾಬ್ದಾರಿ ಮಾತು ಎಂದು ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮ ಟ್ಯಾಕ್ಸ್ ಶೇರ್ ಮತ್ತು ಸೆಂಟ್ರಲ್ ಕಡೆಯಿಂದ ಬರುವುದನ್ನು ನೇರವಾಗಿ ರಿಸರ್ವ್ ಬ್ಯಾಂಕ್‌ನವರು ಅಡ್ಜಸ್ಟ್ ಮಾಡಿದ್ದರೆ ಓವರ್‌ಡ್ರಾಫ್ಟ್ ರಿಟರ್ನ್ ಮಾಡಬೇಕೇ ಬಿಡಬೇಕೆ ಎನ್ನುವ ಪ್ರಶ್ನೆ ಇರುತ್ತಿರಲಿಲ್ಲ. ಅಂತಹ ಬಿಕ್ಕಟ್ಟಿನ ಪರಿಸ್ಥಿತಿ ಉಂಟುಮಾಡುವುದಕ್ಕೆ ಕೇಂದ್ರ ಸರ್ಕಾರದವರು

(ಶ್ರೀ ಎಂ. ವೈ. ಘೋರ್ಪಡೆ)

ಹೋಗಲಿಲ್ಲ ನಾವು ನಮ್ಮ ಬಡ್ಜೆಟ್ಟಿನಲ್ಲಿ ವೇಸ್ ಮತ್ತು ಮೀನ್ಸ್ ಅಡ್ವಾನ್ಸ್ ರೀಪೇಮೆಂಟಿ ಗೋಸ್ಕರ 6 ಕೋಟಿ 21 ಲಕ್ಷರೂಪಾಯಿ ಮಾತ್ರ ಪ್ರೊವೈಡ್ ಮಾಡಿದ್ದೇವೆ. ಅವರು ಒಮ್ಮೆಯೆ 71 ಕೋಟಿ ರೂಪಾಯಿಗಳನ್ನು ವಾಪಸ್ಸು ಕೊಡಿ ಎಂದು ಕೇಳಿದ್ದರೆ, ನಾವು ಏನೂ ಮಾಡುವುದ ಕ್ಕಾಗುತ್ತಿರಲಿಲ್ಲ. ನಿಧಾನವಾಗಿ ಹಣಕಾಸಿನ ಪರಿಸ್ಥಿತಿಗೆ ಹೆಚ್ಚಿನ ಬಿಕ್ಕಟ್ಟು ಉಂಟಾಗದಂತೆ ಈ ಹಣವನ್ನು ವಾಪಸ್ ಮಾಡುವ ಅವಕಾಶ ಇರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—6 ಕೋಟಿ ರೂಪಾಯಿಗಳನ್ನು ಈ ವರ್ಷ ಸಂದಾಯ ಮಾಡು ತ್ತೀರಿ ಎಂದು ತಾವು ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗಿ ಅದರ ಬಗ್ಗೆ ಚರ್ಚೆ ನಡೆಸಿದ್ದೀರಿ. ಹಾಗೆಯೇ ಎಷ್ಟು ಕಂತುಗಳಲ್ಲಿ ಕೊಡುತ್ತೇವೆಂದು ಒಪ್ಪಿಕೊಂಡು ಬಂದಿದ್ದೀರಿ ?

ಶ್ರೀ ಎಂ. ವೈ. ಘೋರ್ಪಡೆ.—ಇದನ್ನು ಡೀಟೇಲ್ ಆಗಿ ಒಪ್ಪಿಕೊಂಡು ಬಂದಿಲ್ಲ, ನಿಧಾನ ವಾಗಿ ರೀಪೇಮೆಂಟ್ ಮಾಡಬಹುದು. ಓವರ್‌ಡ್ರಾಫ್ಟನ್ನು ನಮ್ಮ ಪ್ಲಾನಿಗಾಗಿ ವೆಚ್ಚ ಮಾಡಲು ಉಪಯೋಗಿಸುವುದು ಹಣಕಾಸಿನ ದೃಷ್ಟಿಯಿಂದ ಬಹಳ ಕೆಟ್ಟ ಅಭ್ಯಾಸ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ ಇದರ ಬಗ್ಗೆ ಕೇಂದ್ರದ ಅಭಿಪ್ರಾಯಕ್ಕೂ ರಾಜ್ಯದ ಅಭಿಪ್ರಾಯಕ್ಕೂ ಎಳ್ಳಷ್ಟೂ ವ್ಯತ್ಯಾಸವಿಲ್ಲ, ಮೈಸೂರಿನ ಓವರ್‌ಡ್ರಾಫ್ಟ್ ಅಗ್ರೀಡ್ ನಾರ್ಮಲ್ ಲಿಮಿಟ್ ಇದೆ. ಮೀರಿದರೆ ಅದಕ್ಕೂ ಅಬ್‌ನಾರ್ಮಲ್ ಆಗುತ್ತದೆ. ಈ ನಾರ್ಮಲ್ ಅಗ್ರೀಡ್ ಲಿಮಿಟ್ ಒಳಗೆ ಇರುವ ರೀತಿಯಲ್ಲಿ ಎಲ್ಲಾ ಪ್ರಯತ್ನ ಸರ್ಕಾರ ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯ ಸುತ್ತೇನೆ. ಶ್ರೀ ದೇವೇಗೌಡರು ಭಾಷಣ ಮಾಡುವಾಗ ಇದರ ಬಗ್ಗೆ ಹೆಚ್ಚಿನ ಪ್ರಸ್ತಾಪ ಮಾಡಿದ್ದಾರೆ. ಏನೋ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್‌ಸ್ ಪಡೆಯುವುದರಿಂದ ನಮ್ಮ ರಾಜ್ಯಕ್ಕೆ ಬರುವ ಹಣಕ್ಕೆ ತೊಂದರೆ ಉಂಟುಮಾಡಿದ್ದೇವೆ ಎನ್ನುವ ಶಂಕೆ ವ್ಯಕ್ತಮಾಡಿದ್ದಾರೆ. ಇದರ ಬಗ್ಗೆ ಅವರು ಕಾಗದ ಕೂಡ ಬರೆದಿದ್ದಾರೆ. ನಾನು ಅದಕ್ಕೆ ಸ್ಪಷ್ಟವಾದ ಉತ್ತರ ಬರಹ ಮೂಲಕ ಕೊಟ್ಟಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈಗಲೂ ಕೂಡ ತಾವು ಸ್ಪಷ್ಟವಾಗಿ ಹೇಳುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—62 ಕೋಟಿ ರೂಪಾಯಿ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಓವರ್ ಡ್ರಾಫ್ಟ್ ಕ್ಲಿಯರ್ ಮಾಡುವುದಕ್ಕೋಸ್ಕರ ಕೊಟ್ಟಿದ್ದು. 4ನೇ ಪಂಚವಾರ್ಷಿಕ ಯೋಜನೆ ಗಾಗಿ ಕೇಂದ್ರದಿಂದ ತಮಗೆ ಗೊತ್ತಿರುವಂತೆ 173 ಕೋಟಿ ರೂಪಾಯಿ 5 ವರ್ಷಗಳಲ್ಲಿ ಬರಬೇಕು. ಅಲ್ಲದೆ ಸ್ಪೆಷಲ್ ಅಸಿಸ್ಟೆನ್ಸ್ 60 ಕೋಟಿ ಬರಬೇಕು ಅದು ಯಾವುದಕ್ಕೂ ಇದರಿಂದ ಧಕ್ಕೆ ಆಗುವುದಿಲ್ಲ ಓವರ್‌ಡ್ರಾಫ್ಟ್ ಬಗ್ಗೆ ಕೊಟ್ಟಿರತಕ್ಕ ಈ ವೇಸ್ ಮತ್ತು ಮೀನ್ಸ್ ಅಡ್ವಾನ್ಸ್‌ನ್ನು ಸ್ಪೆಷಲ್ ಅಸಿಸ್ಟೆನ್ಸ್ ಎಂದು ತಿಳಿದುಕೊಳ್ಳಬೇಕು. ಆದಕಾರಣ ಯಾವ ಪ್ಲಾನ್ ಅಥವಾ ನಾನ್‌ಪ್ಲಾನ್‌ಗಳಿಗೆ ಯಾವ ಧಕ್ಕೆ ಆಗದಂತೆ ಈ ಅಡ್ವಾನ್ಸ್ ಕೊಟ್ಟಿದ್ದಾರೆ. ಅವರು ಅದನ್ನು ಕೊಡದಿದ್ದರೆ ಪ್ಲಾನ್ ಮತ್ತು ನಾನ್ ಪ್ಲಾನಿಗೆ ಗಂಡಾಂತರ ಪರಿಸ್ಥಿತಿ ಬರುತ್ತಿತ್ತು. ಆದರೆ ಆ ರೀತಿ ಆಗದಂತೆ ಕೇಂದ್ರದವರು ಸಹಾಯ ಮಾಡಿದ್ದಾರೆ ಎನ್ನುವುದನ್ನು ಒಪ್ಪಿಕೊಳ್ಳಬೇಕು ಮತ್ತು ಅವರಿಗೆ ಥ್ಯಾಂಕ್ಸ್, ಹೇಳಿದರೂ ತಪ್ಪು ಇಲ್ಲ. ಅವರ ಮೇಲೆ ಅನುಮಾನ ಶಂಕೆ ವ್ಯಕ್ತಪಡಿಸಿದರೆ ಅದು ರಾಜ್ಯದ ದೃಷ್ಟಿ ಯಿಂದ ಶ್ರೇಯಸ್ಕರವಲ್ಲ. ಈಗ ಓವರ್‌ಡ್ರಾಫ್ಟ್ ವ್ಯವಸ್ಥೆ ಬಗೆಹರಿಸುವುದರಿಂದ ನಮ್ಮ ಪ್ಲಾನ್‌ನ ಮೊತ್ತ ಸ್ವಲ್ಪಮಟ್ಟಿಗೆ ಜಾಸ್ತಿ ಮಾಡುವುದಕ್ಕೆ ಸಾಧ್ಯವಾಯಿತು. ಇಲ್ಲದೆ ಹೋದರೆ ಬಹಳ ಕಷ್ಟವಾಗುತ್ತಿತ್ತು. ಇಂಟರಿಮ್ ಬಡ್ಜೆಟ್ಟಿನಲ್ಲಿ ಪ್ಲಾನಿನ ಮೊತ್ತ ಈ ವರ್ಷ 72 ಕೋಟಿ ರೂಪಾಯಿ ಎಂದು ಹೇಳಿದ್ದೆವು. ಅದನ್ನು 76 ಕೋಟಿ ರೂಪಾಯಿ ಮಾಡಿದ್ದೇವೆ. ಮುಂದಿನ ವರ್ಷ ಅದು 80 ಕೋಟಿ ರೂಪಾಯಿ ಆದರೆ ಅದು ಅಷ್ಟು ಆಶ್ಚರ್ಯದ ಮಾತಲ್ಲ. ಪಾಂಚವಾರ್ಷಿಕ ಯೋಜನೆ 365 ಕೋಟಿ ರೂಪಾಯಿ ಮಾಡುವ ಪ್ರಯತ್ನದಲ್ಲಿ ಸರ್ಕಾರ ಇದೆ. ಇನ್ನು ಕಾಳಿನದಿ ಪ್ರಾಜೆಕ್ಟ್‌ನ್ನು ಔಟ್‌ರೈಟ್ ಸ್ಪೆಷಲ್ ಪ್ಲಾನ್ ಆಗಿ ಫೈನಾನ್ಸ್ ಮಾಡುವುದಕ್ಕೆ ಸೆಂಟರ್‌ನವರು ಒಪ್ಪಿದ್ದಾರೆ.

ನಾವು ಕೇಂದ್ರ ಸರ್ಕಾರಕ್ಕೆ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಕಾಳೀನದೀ ಯೋಜನೆಗೆ ಪ್ರಸಕ್ತ ವರ್ಷದಲ್ಲಿ 13 ಕೋಟಿ ರೂಪಾಯಿಗಳನ್ನು, ಮುಂದಿನ ವರ್ಷ 25 ಕೋಟಿ ರೂಪಾಯಿ ಗಳನ್ನು ವೆಚ್ಚ ಮಾಡಬೇಕಾಗುತ್ತದೆ. ಅಂದರೆ ನಾಲ್ಕನೆ ಪಂಚವಾರ್ಷಿಕ ಯೋಜನೆಯ ಕೊನೆಯ ಎರಡು ವರ್ಷಗಳಲ್ಲಿ ಒಟ್ಟು 38 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಇಷ್ಟೊಂದು ಹಣವನ್ನು ಕೇಂದ್ರದಿಂದ ವಿಶೇಷ ಸಹಾಯಧನವಾಗಿ

ಪಡೆದುಕೊಂಡು ಖರ್ಚು ಮಾಡಬೇಕಾಗಿದೆ. ಈ ವಿಚಾರದಲ್ಲಿ ಮಾತುಕತೆ ನಡೆಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಲಾಗಿದೆ. ಮುಖ್ಯವಾಗಿ ಕೇಂದ್ರದಿಂದ ಸಹಾಯ ಪಡೆದುಕೊಂಡು ಅದನ್ನು ಖರ್ಚು ಮಾಡುವ ಜವಾಬ್ದಾರಿ ಸರ್ಕಾರದ ಮೇಲೆ ಇವೆ. ಕೇಂದ್ರ ಸರ್ಕಾರದವರು ನಮ್ಮ ಸರ್ಕಾರಕ್ಕೆ ಕೊಡಬೇಕಾಗಿರುವ 105 ಕೋಟಿ ರೂಪಾಯಿಗಳ ಸ್ಪೆಷಲ್ ಅಸಿಸ್ಟೆಂಟ್ಸನ್ನು ಯಾವ ರೀತಿ ಪಡೆದುಕೊಂಡಿದ್ದೀರಿ ಎಂಬುದಾಗಿ ಶ್ರೀಮಾನ್ ದೇವೇಗೌಡರು ಕೇಳಿದ್ದಾರೆ. ಇದರಲ್ಲಿ ಎರಡು ಭಾಗಗಳಿವೆ. ಈ 105 ಕೋಟಿ ರೂಪಾಯಿಗಳಲ್ಲಿ ಪ್ಲಾನ್‌ಗೋಸ್ಕರ 60 ಕೋಟಿ ರೂಪಾಯಿಗಳನ್ನು ಮತ್ತು ನಾನ್-ಪ್ಲಾನ್‌ಗೋಸ್ಕರ 45 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಡಬೇಕಾಗಿದೆ. ಈ 60 ಕೋಟಿ ರೂಪಾಯಿಗಳ ಪೈಕಿ ಈಗಾಗಲೇ 50 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಉಳಿದಿರುವುದನ್ನು ಇಷ್ಟರಲ್ಲಿಯೇ ಪಡೆದುಕೊಳ್ಳುತ್ತೇವೆ. ನಾನ್ ಪ್ಲಾನ್ ಸ್ಕೀಮ್‌ನಲ್ಲಿ ಕೂಡ ಈಗಾಗಲೇ 6-7 ಕೋಟಿ ರೂಪಾಯಿಗಳನ್ನು ಪಡೆದುಕೊಂಡಿದ್ದೇವೆ. ಕೇಂದ್ರ ಸರ್ಕಾರದ ಲೆಕ್ಕದ ಪ್ರಕಾರ ನಾನ್-ಪ್ಲಾನ್ ಅಸಿಸ್ಟೆಂಟ್ಸ್ ನೋ-ಆಟೋಮ್ಯಾಟಿಕ್ ಕಮಿಟ್‌ಮೆಂಟ್. ಆದ್ದರಿಂದ ಕೇಂದ್ರ ಸರ್ಕಾರದವರು ಬೇಕಾದರೆ ಕೊಡಬಹುದು, ಇಲ್ಲದಿದ್ದರೆ ಕೊಡದಿರಬಹುದು. ಆದರೂ ಈ ಬಾಬಿನಲ್ಲಿ 6-7 ಕೋಟಿ ರೂಪಾಯಿಗಳನ್ನು ಪಡೆದುಕೊಂಡಿದ್ದೇವೆ. ಈಗ ಕೇಂದ್ರ ಸರ್ಕಾರದವರು ಕಾಳೀನದೀ ಯೋಜನೆಗೆ ಪ್ರತ್ಯೇಕವಾಗಿ ಸಹಾಯ ಮಾಡುತ್ತೇವೆಂದು ಏನು ಹೇಳಿದ್ದಾರೆ, ಅದನ್ನು ನಾವು ಗಮನದಲ್ಲಿಟ್ಟುಕೊಂಡಿದ್ದೇವೆ. ಕೇಂದ್ರ ಸರ್ಕಾರದವರು ಈ ಯೋಜನೆಗೆ ಪೂರ್ತಿಯಾಗಿ ಸಹಾಯ ಮಾಡುವುದರಿಂದ ನಮ್ಮ ಮೇಲೆ ಯಾವ ರೀತಿಯಿಂದಲೂ ಅನ್ಯಾಯವಾಗುತ್ತಿಲ್ಲ. ಮುಖ್ಯವಾಗಿ ಕಳೆದ ಮೂರು ತಿಂಗಳುಗಳಲ್ಲಿ ಈ ಸರ್ಕಾರ ಏನೇನು ಮಾಡುವುದಕ್ಕೆ ಸಾಧ್ಯವಿತ್ತೋ ಅಷ್ಟನ್ನೆಲ್ಲಾ ಮಾಡಿದೆ. ಈ ಅಂಶವನ್ನು ಮಾನ್ಯ ವಿರೋಧಪಕ್ಷದ ಸದಸ್ಯರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಕೆಲಸಗಳನ್ನು ನೋಡಿ ಜನರು ರಸ್ತೆ ರಸ್ತೆಗಳಲ್ಲಿ ಜಯಕಾರ ಮಾಡುತ್ತಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ರಾಜಕೀಯ ತಿಳಿವಳಿಕೆ ಒಂದು ರೀತಿಯಲ್ಲಿ ಜನರಲ್ಲಿ ಜಾಸ್ತಿಯಾಗುತ್ತಿದೆ. ಕಾಳೀನದೀ ಯೋಜನೆಯ ಬಗ್ಗೆ ಒಂದು ಮುಖ್ಯವಾದ ವಿಷಯವನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಈ ಯೋಜನೆಯನ್ನು ಪೂರ್ತಿಗೊಳಿಸಲು ಈಗಿನ ಅಂದಾಜಿನಂತೆ 164 ಕೋಟಿ ರೂಪಾಯಿಗಳು ಬೇಕಾಗುತ್ತದೆ. ನಮ್ಮ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲದಿರುವುದರಿಂದ ಇಷ್ಟೊಂದು ಹಣವನ್ನು ಖರ್ಚು ಮಾಡುವುದಕ್ಕೆ ನಮಗೆ ಸಾಧ್ಯವಿಲ್ಲವಾಗಿದೆ. ಈಗ ನಾವು ಪವರ್ ಕಾರ್ಪೊರೇಷನ್ ಸ್ಥಾಪನೆ ಮಾಡಿದ್ದೇವೆ. ಈ ಕಾರ್ಪೊರೇಷನ್‌ಗೆ ವರ್ಷಕ್ಕೆ ಶರಾವತಿ ಯೋಜನೆಯಿಂದ ತಯಾರಾಗತಕ್ಕ ವಿದ್ಯುತ್ತನ್ನು ಮಾರಾಟ ಮಾಡುವುದರಿಂದ 11 ಕೋಟಿ ರೂಪಾಯಿ ಆದಾಯ ಬರುತ್ತಿದೆ. ಈ ಹಣವನ್ನು ನಾವು ಕಾಳೀನದೀ ಯೋಜನೆಗೆ ಖರ್ಚು ಮಾಡಬೇಕಾಗಿತ್ತು. ಆದರೆ ಈ ಯೋಜನೆಗೆ ಕೇಂದ್ರ ಸರ್ಕಾರದವರೇ ಸಹಾಯ ಮಾಡುವುದಾಗಿ ಒಪ್ಪಿಕೊಂಡಮೇಲೆ, ಶರಾವತಿ ಯೋಜನೆಯಿಂದ ಬರತಕ್ಕ ಆದಾಯವಾದ 11 ಕೋಟಿ ರೂಪಾಯಿಗಳನ್ನು ನಾವು ನಮ್ಮ ಬಡ್ಜೆಟ್‌ಗೋಸ್ಕರವೇ ಉಪಯೋಗ ಮಾಡಬಹುದಾಗಿದೆ. ಅಂದರೆ ನಮ್ಮ ಪ್ಲಾನ್ ಮತ್ತು ನಾನ್-ಪ್ಲಾನ್‌ಗಳಿಗೆ ವರ್ಷೇ ವರ್ಷೇ ಖರ್ಚು ಮಾಡುವುದಕ್ಕೆ ಅನುಕೂಲವಾದಂತಾಯಿತು. ಈಗ ಪವರ್‌ನ್ನು ಮಾರಾಟ ಮಾಡುವುದರಿಂದ 11 ಕೋಟಿ ರೂಪಾಯಿಗಳ ವರಮಾನ ಏನು ಬರುತ್ತಿದೆ, ಅದು ಇನ್ನು ಮುಂದೆ ಜಾಸ್ತಿಯಾಗಬಹುದು. ಈ ರೀತಿ ಜಾಸ್ತಿ ಬಂದಂಥ ಹಣವನ್ನು ಕೂಡ ನಮ್ಮ ಬಡ್ಜೆಟ್ ಗೋಸ್ಕರವೇ ಉಪಯೋಗ ಮಾಡಬಹುದು. ಈಗ ಕಾಳೀನದೀ ಯೋಜನೆಯನ್ನು ಪೂರೈಸಲು 164 ಕೋಟಿ ರೂಪಾಯಿಗಳ ಅಂದಾಜನ್ನು ಏನು ತಯಾರು ಮಾಡಲಾಗಿದೆ, ಆ ಅಂದಾಜು ಯೋಜನೆ ಮುಕ್ತಾಯವಾಗುವ ವೇಳೆಗೆ ಇನ್ನೂ ಜಾಸ್ತಿಯಾಗಬಹುದು. ಈ ಯೋಜನೆಯಲ್ಲಿ ಎರಡು ಸ್ಟೇಜ್‌ಗಳಿವೆ. ಮೊದಲನೇ ಸ್ಟೇಜ್ ಕೆಲಸ ಮುಕ್ತಾಯವಾದಾಗ 270 ಎಂ. ಡಬ್ಲ್ಯೂ ಮತ್ತು ಎರಡನೇ ಸ್ಟೇಜ್ ಕೆಲಸ ಮುಕ್ತಾಯವಾದಾಗ 640 ಎಂ. ಡಬ್ಲ್ಯೂ. ಪ್ರಮಾಣದ ವಿದ್ಯುಚ್ಛಕ್ತಿ ತಯಾರಾಗುತ್ತದೆ. ಇಷ್ಟರಲ್ಲಿಯೇ ನಮ್ಮ ರಾಜ್ಯದಲ್ಲಿ ವಿದ್ಯುತ್ತಿನ ಅಭಾವ ಬರುತ್ತದೆ ಎನ್ನುವ ಭಯ ಇದೆ. ನಾನು ಮುಂಬೈಗೆ ಹೋದಾಗ ಅಲ್ಲಿಯವರು ಹೇಳಿದರು, ನಿಮ್ಮ ರಾಜ್ಯದಲ್ಲಿ ಬೇರೆ ರಾಜ್ಯಗಳಂತೆ ವಿದ್ಯುತ್ತಿನ ಅಭಾವವಿಲ್ಲ, ಬೇಕಾದಷ್ಟು ವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತಿದೆ ಎಂಬುದಾಗಿ. ಅದಕ್ಕೆ ನಾನು ಮೈಸೂರು ರಾಜ್ಯದಲ್ಲಿ ಕೂಡ ಇಷ್ಟರಲ್ಲಿ ವಿದ್ಯುತ್ತಿನ ಅಭಾವ ತಲೆದೋರುತ್ತದೆ ಎಂದು ಅವರಿಗೆ ಹೇಳಿದೆ. ಈ ಒಂದು ಅಭಾವವನ್ನು ನೀಗಿಸಲು ನಾವು ಜಾಗ್ರತೆಯಾಗಿ ಕಾಳೀನದೀ ಯೋಜನೆಯ ಕೆಲಸವನ್ನು ಮುಗಿಸಬೇಕಾಗಿದೆ. ಮೈಸೂರು ರಾಜ್ಯ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡತಕ್ಕಂಥ ರಾಜ್ಯ ಎಂದು ಡಾಕ್ಟರ್ ಸರ್. ಎಂ. ವಿಶ್ವೇಶ್ವರಯ್ಯನವರು ಏನು ಹೇಳಿದ್ದರು,

(ಶ್ರೀ ಎಂ. ವೈ. ಘೋರ್ಪಡೆ)

ಅದರಂತೆ ಅವರ ಕನಸನ್ನು ನನಸು ಮಾಡಲು ಈ ಯೋಜನೆಯ ಕೆಲಸವನ್ನು ಜಾಗ್ರತೆ ಮುಗಿಸ ಬೇಕಾಗಿದೆ. ಈ ಒಂದು ಜಲವಿದ್ಯುತ್ ಯೋಜನೆ ಕಾರ್ಯಾರಂಭ ಮಾಡುವ ಹೊತ್ತಿಗೆ ನಮ್ಮ ರಾಜ್ಯದಲ್ಲಿ ಅನೇಕ ಉದ್ದಿಮೆಗಳು ಕೂಡ ಪ್ರಾರಂಭವಾಗಿ ಅನೇಕ ಜನರಿಗೆ ಉದ್ಯೋಗ ಸಿಗುವುದಕ್ಕೆ ಅವಕಾಶವಾಗುತ್ತದೆ. ಇಂತಹ ಒಂದು ಯೋಜನೆಗೆ ನಾವು ಏನು ಖರ್ಚು ಮಾಡುತ್ತೇವೆ, ಅದಕ್ಕೆ ಹತ್ತರಷ್ಟು ಹಣ ಅದರ ಡೆವಲಪ್‌ಮೆಂಟ್‌ಗೆ ಖರ್ಚಾಗುತ್ತದೆಂಬು ತಿಳಿದವರು ಹೇಳುತ್ತಾರೆ. ಈಗ ನಾವು 164 ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಖರ್ಚು ಮಾಡಿದ ಮೇಲೆ, ಅದರಿಂದ ಉತ್ಪತ್ತಿಯಾಗತಕ್ಕಂಥ ವಿದ್ಯುತ್ತನ್ನು ಉಪಯೋಗಿಸಿಕೊಳ್ಳಲು 1,160 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇದನ್ನೆಲ್ಲಾ ಲೆಕ್ಕ ಹಾಕಿದರೆ ಇದರಿಂದ ಎಷ್ಟರಮಟ್ಟಿಗೆ ಆರ್ಥಿಕವಾಗಿ ನಮಗೆ ಅನುಕೂಲವಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿದೆ. ಇದು ಒಂದು ಅತಿ ಮುಖ್ಯವಾದಂಥ ಪ್ರಾಜೆಕ್ಟ್ ಆದ್ದರಿಂದ ಇದಕ್ಕೆ ಕೇಂದ್ರ ಸರ್ಕಾರದವರೇ ಪೂರ್ತಿಯಾಗಿ ಸಹಾಯ ಮಾಡಲು ಒಪ್ಪಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಮತ್ತು ನಾನೂ ಇತ್ತೀಚೆಗೆ ದೆಹಲಿಯಲ್ಲಿ ಕೇಂದ್ರದ ಮಂತ್ರಿಗಳಾದ ಶ್ರೀ ಚವ್ಹಾಣ್ ಮತ್ತು ಶ್ರೀ ಸುಬ್ರಮಣ್ಯಂ ಅವರೊಡನೆ ಈ ಯೋಜನೆಯ ಬಗ್ಗೆ ಚರ್ಚೆ ನಡೆಸಿದ ಮೇಲೆ ಕೇಂದ್ರದಿಂದ ಪೂರ್ತಿಯಾಗಿ ಹಣ ಒದಗಿಸುವುದಾಗಿ ಒಪ್ಪಿಕೊಂಡರು. ಆದರೆ ಅವರು ಹಣ ಒದಗಿಸುವ ಬಗ್ಗೆ ನಮ್ಮ ಮೇಲೆ ಯಾವ ಒಂದು ಕಂಡೀಷನನ್ನು ಹಾಕಿಲ್ಲ. ಆದ್ದರಿಂದ ಈ ಯೋಜನೆಗೆ ಕೇಂದ್ರದಿಂದ ಯಾವ ರೀತಿ ಹಣ ಪಡೆದುಕೊಳ್ಳಬೇಕೆಂಬ ಬಗ್ಗೆ ವಿವರಗಳನ್ನು ಸಂಬಂಧಪಟ್ಟ ಅಧಿಕಾರಿಗಳು ತಯಾರುಮಾಡುತ್ತಾರೆಯೇ ಹೊರತು, ಕೇಂದ್ರ ಸರ್ಕಾರದವರು ರಾಜಕೀಯ ದೃಷ್ಟಿ ಇಟ್ಟುಕೊಂಡು ಅಥವಾ ಯಾವುದೇ ಒಂದು ಕಂಡೀಷನ್ ಹಾಕಿ ಹಣ ಕೊಡುತ್ತೇವೆಂದು ನಮಗೆ ಹೇಳಿಲ್ಲ. ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಕಾಳೀನದೀ ಯೋಜನೆಯನ್ನು ಪೂರ್ತಿಯಾಗಿ ಕೇಂದ್ರ ಸರ್ಕಾರಕ್ಕೇ ರಾಜ್ಯ ಸರ್ಕಾರದವರು ಬಿಟ್ಟುಬಿಡುತ್ತಾರೆ ಎನ್ನುವ ಮಾತಿನಲ್ಲಿ ಅರ್ಥವಿಲ್ಲ. ಈ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೇ ವಹಿಸಿಬಿಟ್ಟು ತಾವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಹೇಳುವ ಮಟ್ಟಕ್ಕೆ ಈ ಸರ್ಕಾರ ಇನ್ನೂ ಬಂದಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಅಂತಹ ಒಂದು ಭಯ ವಿರೋಧ ಪಕ್ಷದ ಮಾನ್ಯ ಸದಸ್ಯರಿಗೆ ಇರುವುದು ಬೇಡ ಎಂದು ಹೇಳುತ್ತೇನೆ. ಈ ಯೋಜನೆಯಿಂದ ಏನು ವಿದ್ಯುಚ್ಛಕ್ತಿ 1980ರ ವೇಳೆಗೆ ಉತ್ಪತ್ತಿಯಾಗುತ್ತದೆ ಅದನ್ನು ಉಪಯೋಗಿಸಿಕೊಳ್ಳುವ ಶಕ್ತಿ ನಮ್ಮ ಮೈಸೂರು ರಾಜ್ಯಕ್ಕೇ ಇರುತ್ತದೆ. ಈಗ ಏನು ಒಂದು ವಿದ್ಯುತ್ತಿನ ಬೇಡಿಕೆ ಬರುತ್ತಿದೆ, ಅದನ್ನೆಲ್ಲಾ ಲೆಕ್ಕ ಹಾಕಿದ್ದೇ ಆದರೆ, ಈ ಕಾಳೀನದೀ ಯೋಜನೆಯಿಂದ ಉತ್ಪತ್ತಿಯಾಗತಕ್ಕ ವಿದ್ಯುತ್ತನ್ನು ನಾವೇ ಉಪಯೋಗ ಮಾಡಿಕೊಳ್ಳುವುದಕ್ಕೆ ಬರುತ್ತದೆ. ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗತಕ್ಕಂಥ ವಿದ್ಯುತ್‌ನ್ನು ನಾವು ಉಪಯೋಗ ಮಾಡಿಕೊಳ್ಳುವುದು ಬೇಡ ಎಂದು ಹೇಳುವುದಕ್ಕೆ ಕೇಂದ್ರಕ್ಕೆ ಹುಚ್ಚು ಹಿಡಿದಿಲ್ಲ. ಒಂದು ಪಕ್ಷ ನಾವು ಅಷ್ಟನ್ನೂ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗದಿದ್ದರೆ, ಹೆಚ್ಚಿನ ಪವರ್‌ನ್ನು ನೆರೆ ರಾಜ್ಯಗಳಿಗೆ ಮಾರಾಟ ಮಾಡಿದರೆ ಅದರಿಂದಲೂ ಕೂಡ ನಮಗೆ ಆದಾಯ ಬರುತ್ತದೆ. ಹೀಗಿರುವಾಗ, ಮೈಸೂರಿನಲ್ಲಿ ಉತ್ಪತ್ತಿಯಾಗತಕ್ಕಂಥ ಪವರ್‌ನ್ನು ಕರ್ನಾಟಕದ ಜನತೆಗೆ ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ, ಆ ರೀತಿ ಉಪಯೋಗ ಮಾಡಿಕೊಳ್ಳುವುದರಲ್ಲಿ ಅಡ್ಡಿಆತಂಕಗಳು ಬರಬಹುದು ಎಂಬ ಭಯ ವಿರೋಧಪಕ್ಷದ ಮಾನ್ಯ ಸದಸ್ಯರಲ್ಲಿ ಇದ್ದರೆ ಅದು ನಿರಾಧಾರವಾದುದು. ಆದ್ದರಿಂದ ಈ ರೀತಿ ಭಯ ಇಟ್ಟುಕೊಂಡು ಅನುಮಾನಾಸ್ಪದವಾದ ಟೀಕೆಯನ್ನು ಮಾನ್ಯ ಸದಸ್ಯರು ಮಾಡದೆ, ಇವೊತ್ತು ಕೇಂದ್ರ ಸರ್ಕಾರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಏನು ಒಂದು ಒಳ್ಳೆಯ ವಾತಾವರಣವಿದೆ ಅದನ್ನು ಕಾಪಾಡಿಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಇದು ಪಾರ್ಟಿ ವಿಷಯವಲ್ಲ. ಪಾರ್ಟಿ ವಿಷಯ ಬಂದಾಗ ಬೇಕಾದರೆ ಜಗಳವಾಡೋಣ. ಆದರೆ ಒಳ್ಳೆಯ ಕೆಲಸಗಳಾಗುತ್ತಿರುವಾಗ ಅದನ್ನು ಎಲ್ಲ ಪಕ್ಷದವರೂ ಸಂಪೂರ್ಣವಾಗಿ ಸ್ವಾಗತಿಸಬೇಕು. ಕಾಳೀನದೀ ಬಗ್ಗೆ ಕೇಂದ್ರ ಸರ್ಕಾರದವರು ಪೂರ್ತಿಯಾಗಿ ಸಹಾಯ ಮಾಡುವುದಾಗಿ ಒಪ್ಪಿಕೊಂಡಿರುವುದರಿಂದ ಕೇಂದ್ರ ಸರ್ಕಾರದವರನ್ನು ಬಾಯಿತುಂಬ ಹೊಗಳುವುದರಲ್ಲಿ ತಪ್ಪೇನೂ ಇಲ್ಲ. ಒಂದು ರಾಜಕೀಯ ದೃಷ್ಟಿಯಿಂದ ಏನೋ ಊಹೆ ಮಾಡಿದರೆ ಅದು ಸ್ವಲ್ಪ ಅಪಾಯಕಾರಿಯಾಗಬಹುದು. ಈ ನನ್ನ ಭರವಸೆಯಿಂದ ಮಾನ್ಯ ದೇವೇಗೌಡರಲ್ಲಿ ಇದ್ದ ಅನುಮಾನ ಪರಿಹಾರವಾಯಿತು ಎಂದು ನಾನು ಸಂಪೂರ್ಣವಾಗಿ ನಂಬುತ್ತೇನೆ. ಕೇಂದ್ರ ಸರ್ಕಾರದವರು ಮಾಡುವ ಸಹಾಯಕ್ಕಾಗಿ ನಾವೆಲ್ಲರೂ ವಂದನೆ ಮಾಡೋಣ. ಮತ್ತು ಅವರು ಕೊಡುವ ಸಹಾಯವನ್ನು ಒಳ್ಳೆಯ ರೀತಿಯಿಂದ ಖರ್ಚು ಮಾಡಿದರೆ ಅದರಿಂದ ನಮ್ಮ ರಾಜ್ಯಕ್ಕೆ ಒಳ್ಳೆಯದಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಯಾವ ಒಂದು ಕಂಡೀಷನ್ ಇಲ್ಲದೆ ಕೇಂದ್ರದವರು ಸಹಾಯ ಮಾಡುವುದಾದರೆ, ಕೇಂದ್ರ ಸರ್ಕಾರದವರನ್ನು ಅಭಿನಂದಿಸುವ ಒಂದು ಯುನಾನಿಮಸ್ ರೆಜಲೂಷನನ್ನು ಪಾಸ್‌ಮಾಡಿ ಕಳಿಸಿಕೊಡೋಣ. But you should not hand over the Kalinadi project to the Centre.

Sri M. Y. GHORPADE.—It is not in the interest of the State to create doubts and controversies with regard to Kalinadi. It is not in our interest to imagine all sorts of things. It is in the interest of the State to complete the Kalinadi Project as soon as possible and make every effort to fully utilise the Kali Power in Mysore State.

ಶ್ರೀ ಕಾಗೋಡು ತಿಮ್ಮಪ್ಪ.—ಅವರಿಗೂ ನಿಮಗೂ ಮಾತುಕತೆ ಆಗಿದ್ದರೆ ಟರ್ಮ್ಸ್ ಅಂಡ್ ಕಂಡೀಷನ್ಸ್ ಏನು ?

5-00 P.M.

ಶ್ರೀ ಎಂ. ವೈ. ಘೋರ್ಪಡೆ.—ಟರ್ಮ್ಸ್ ಅಂಡ್ ಕಂಡೀಷನ್ಸ್ ಹಾಕಿ ಎಂದು ನಾನು ಅವರಿಗೆ ಹೇಳಿಕೊಡಬೇಕಲ್ಲ ?

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಾದರೆ ಅವರು ನಮಗೆ ಅದನ್ನು ಮುಫತ್ತಾಗಿ ಕೊಟ್ಟಿದ್ದಾರೆ ಎಂದು ತಾವು ಹೇಳಬಹುದಲ್ಲವೇ ?

ಶ್ರೀ ಎಂ. ವೈ. ಘೋರ್ಪಡೆ.—ಇದರಲ್ಲಿ ಕೇಂದ್ರ ಸರ್ಕಾರ ಸ್ವಲ್ಪ ಇಂಟರೆಸ್ಟ್ ತೆಗೆದುಕೊಂಡು ಈ ಪ್ರಾಜೆಕ್ಟಿಗೆ ಅವರು ಫೈನಾನ್ಷಿಯಲ್ ಅಸಿಸ್ಟೆನ್ಸ್ ಕೊಡುತ್ತಾರೆ. ಇದರಲ್ಲಿ ಅಬ್‌ನಾರ್ಮಲ್ ಏನಿದೆ ?

ಶ್ರೀ ಕೆ. ಎಚ್. ಪಾಟೀಲ್.—ಕೆಲವರ ಭಾಷಣಗಳನ್ನು ಕೇಳಿದ್ದರಲ್ಲಿ ಈ ಕಾಳೀನದಿಯ ಯೋಜನೆ ಆಗಿದ್ದು ಅವರಿಗೆ ಸಂತೋಷ ಇದೆಯೋ ಇಲ್ಲವೋ ಎನ್ನುವ ಅನುಮಾನ ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ಕೃಷ್ಣಾ ಯೋಜನೆಗೆ ಸ್ಪೆಷಲ್ ಅಸಿಸ್ಟೆನ್ಸ್ ತನ್ನಿ. ಆಗ ನಾನು ನಿಮ್ಮ ಮಂತ್ರಿಮಂಡಲಕ್ಕೆ ಆಭಾರಿಯಾಗುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಒಂದು ಗುಡ್ಡ ಹತ್ತಿ ಬಂದರೆ ಅದಲ್ಲ, ಇನ್ನೊಂದು ಗುಡ್ಡ ಹತ್ತಿ ಬನ್ನಿ ಶಹಭಾಶ್‌ಗಿರಿ ಕೊಡುತ್ತೇವೆ ಎಂದರೆ ಹೇಗೆ ?

ಈಗ ಓವರ್ ಡ್ರಾಫ್ಟ್ ಜಾಸ್ತಿ ಆಗಬಾರದು ಎಂದು ಹೇಳಿದಾಗ ಬಡ್ಜೆಟ್ಟಿನಲ್ಲಿ ಹೆಚ್ಚಿಗೆ ಡಿಫಿಸಿಟ್ ಇರಬಾರದು ಎನ್ನುವ ಅಭಿಪ್ರಾಯ ಬರುತ್ತದೆ. ಈಗ ನಮ್ಮ ಬಡ್ಜೆಟ್ಟಿನಲ್ಲಿ 43 ಕೋಟಿ ರೂಪಾಯಿಗಳ ಡಿಫಿಸಿಟ್ ಇದೆಯೆಂದು ಹೇಳಿ ಗೊತ್ತಾಗಿದೆ. ಈ 43 ಕೋಟಿ ರೂಪಾಯಿಗಳಲ್ಲಿ 6 ಕೋಟಿ ರೂಪಾಯಿಗಳು ಪ್ಲಾನಿಂಗ್ ಡಿಫಿಸಿಟ್, 3 ಕೋಟಿ ರೂಪಾಯಿಗಳು ನಾನ್‌ಪ್ಲಾನ್ ಡಿಫಿಸಿಟ್. ಕೇಂದ್ರದಿಂದ ವಿಶೇಷ ನೆರವು ಬರುತ್ತದೆ ಎಂದು ವಾರ್ಷಿಕ ಯೋಜನೆಯನ್ನು 72 ಕೋಟಿ ರೂಪಾಯಿಗಳಿಗೆ ಮಾಡಿದ್ದೆವು. ಕೇಂದ್ರದಿಂದ 11 ಕೋಟಿ 50 ಲಕ್ಷ ರೂಪಾಯಿ ವಿಶೇಷನೆರವು ಬಂದದ್ದರಿಂದ ವಾರ್ಷಿಕ ಯೋಜನೆಯನ್ನು 76 ಕೋಟಿ ರೂಪಾಯಿಗಳಿಗೆ ಏರಿಸಿದ್ದೇವೆ. ನಾನ್ ಪ್ಲಾನ್‌ನಲ್ಲಿ 5 ಕೋಟಿ ರೂಪಾಯಿಗಳು ಡಿಫಿಸಿಟ್ ಬಂದು ಬಹಳ ತೊಂದರೆಯ ಪ್ರಶ್ನೆಯಾಗಿತ್ತು. ಇದನ್ನು 3 ಕೋಟಿ 45 ಲಕ್ಷ ರೂಪಾಯಿಗಳಿಗೆ ಇಳಿಸಿದ್ದೇವೆ. ಈಗ ಉದಾಹರಣೆಗೆ ಹೇಳುವುದಾದರೆ ನಾವು 10 ಕೋಟಿ 50 ಲಕ್ಷ ರೂಪಾಯಿಗಳನ್ನು ರೆವಿನ್ಯೂ ಬಾಬಿನಲ್ಲಿ ಜಾಸ್ತಿ ಮಾಡುವ ಪ್ರಯತ್ನ ಮಾಡಿದ್ದೇವೆ. ಇವರ ಬಗ್ಗೆ ಎಕ್ಸೈಜ್ ಮತ್ತು ಸೇಲ್ಸ್‌ಟ್ಯಾಕ್ಸ್‌ಗೆ ಸಂಬಂಧಪಟ್ಟ ಹಾಗೆ ವಿವರಗಳನ್ನು ಕೊಟ್ಟಿದೆ. ಇದು ಒಂದು ಅಡ್ಜಸ್ಟ್‌ಮೆಂಟ್ ಎಂದು ಹೇಳುವುದಕ್ಕೆ ಬರುವುದಿಲ್ಲ. ರಿಡಕ್ಷನ್ ಆಫ್ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಅನ್ನು 5 ಕೋಟಿ ರೂಪಾಯಿ ಮಾಡಿದ್ದೇವೆ. ಇದನ್ನು ಅಡ್ಜಸ್ಟ್‌ಮೆಂಟ್ ಎಂದು ಹೇಳುವುದಕ್ಕಾಗುವುದಿಲ್ಲ. ವಿದ್ಯುಚ್ಛಕ್ತಿ ಮಾರಾಟದಲ್ಲಿ ಪವರ್ ಕಾರ್ಪೊರೇಷನ್ನಿನಿಂದ 7 ಕೋಟಿ ರೂಪಾಯಿಗಳು ಹೆಚ್ಚಾಗಿ ಬರುತ್ತದೆ. ಪಬ್ಲಿಕ್ ಸಾಲ ಎತ್ತುವುದರಿಂದ 3 ಕೋಟಿ ರೂಪಾಯಿ ಬರುತ್ತದೆ. ಇದರ ಡೀಟೈಲ್ಸ್ ಅನ್ನು ಬಡ್ಜೆಟ್ಟಿನಲ್ಲಿ ಕೊಟ್ಟಿದೆ. ಸ್ಮಾಲ್ ಸೇವಿಂಗ್ಸ್ ಯೋಜನೆಯಲ್ಲಿ 5 ಕೋಟಿ 75 ಲಕ್ಷ ರೂಪಾಯಿಗಳನ್ನು ಮಾಡಿದ್ದೇವೆ. ಮೊದಲು 3 ಕೋಟಿ 75 ಲಕ್ಷ ರೂಪಾಯಿಗಳು ಇತ್ತು, ಈಗ ಈ ಬಾಬಿನಲ್ಲಿ ಎರಡುಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡಲು ನಾವು ಪ್ರಯತ್ನ ಮಾಡಿದ್ದೇವೆ. ಇದೂ ಕೂಡ ಅಡ್ಜಸ್ಟ್‌ಮೆಂಟ್ ಎಂದು ಹೇಳು

(ಶ್ರೀ ಎಂ. ವೈ. ಘೋರ್ಪಡೆ)

ವುದಕ್ಕಾಗುವುದಿಲ್ಲ. ಈ ರೀತಿಯಾಗಿ ನಾನಾ ಬಾಬುಗಳಿಂದ 30 ಕೋಟಿ 50 ಲಕ್ಷ ರೂಪಾಯಿಗಳ ಡಿಫಿಸಿಟ್ ಕಡಿಮೆ ಮಾಡಿದ್ದೇವೆ. ಇದು ಬರೀ ಫಿಗರ್ಸ್‌ನಿಂದ ರೀ ಅರೇಂಜ್ ಮಾಡಿರತಕ್ಕ ಕೆಲಸವಲ್ಲ. ಒಟ್ಟಿನಲ್ಲಿ 35 ಕೋಟಿರೂಪಾಯಿ ನಾನ್‌ಪ್ಲಾನ್ ಡಿಫಿಸಿಟ್ ಇತ್ತು. ಅದನ್ನು 4.5 ಕೋಟಿ ರೂಪಾಯಿಗಳಿಗೆ ಇಳಿಸಿದ್ದೇವೆ.

ನಂತರ ಕೆಳದರ್ಜೆ ನೌಕರರಿಗೆ ತುಟ್ಟಿ ಭತ್ಯವನ್ನು ಜಾಸ್ತಿ ಮಾಡಿರುವ ವಿಚಾರ ಬಂದಿದೆ. ಇದರ ಅಂಕಿಅಂಶಗಳನ್ನು ಬಡ್ಜೆಟ್ಟಿನಲ್ಲಿ ಕೊಟ್ಟಿದೆ. ಕಡಿಮೆ ಸಂಬಳವನ್ನು ಪಡೆಯತಕ್ಕವರು ಸುಮಾರು ಎರಡು ಲಕ್ಷಕ್ಕೂ ಮೇಲ್ಪಟ್ಟು ಇದ್ದಾರೆ. ಆದ್ದರಿಂದ ಅವರಿಗೆ 7—8 ರೂಪಾಯಿ ಡಿ.ಎ. ಜಾಸ್ತಿ ಮಾಡಿದೆ. ಇದರಿಂದ 2 ಕೋಟಿ 40 ಲಕ್ಷ ರೂಪಾಯಿ ಖರ್ಚು ಜಾಸ್ತಿಯಾಗುತ್ತದೆ. ಈ ವರ್ಷ ಒಂದು ಕೋಟಿ 60 ಲಕ್ಷ ರೂಪಾಯಿ ಆಗುತ್ತದೆ.

ಅನಂತರ ಕೆಲವು ಟ್ಯಾಕ್ಸೇಷನ್ ಪ್ರಪೋಜಲ್ಸ್‌ನಿಂದ 3 ಕೋಟಿ 95 ಲಕ್ಷ ರೂಪಾಯಿ ಆದಾಯ ಬರುತ್ತದೆ. ಈ ವರ್ಷ 2 ಕೋಟಿ 65 ಲಕ್ಷ ರೂಪಾಯಿ ಬರುತ್ತದೆ. ತೆರಿಗೆಯನ್ನು ಹಾಕುವಾಗ ಯಾರಿಗೆ ತೆರಿಗೆಯನ್ನು ಕೊಡಲು ಚೈತನ್ಯ ಇದೆ ಅಂಥವರ ಮೇಲೆ ಮಾತ್ರ ನಾವು ತೆರಿಗೆಯನ್ನು ಹಾಕಿದ್ದೇವೆ. ಆದರೂ ಕೂಡ ಮಾನ್ಯ ವಿರೋಧಪಕ್ಷದ ನಾಯಕರು ಇದು ಕ್ಯಾಪಿಟಲಿಸ್ಟ್ ಬಡ್ಜೆಟ್ ಎಂದು ಹೇಳಿದರು. ಈ ರೀತಿ ಹೇಳುವುದರಲ್ಲಿ ಅರ್ಥ ಏನಿದೆ ? ಕ್ಯಾಪಿಟಲಿಜಮ್ ಅರ್ಥ ಏನು ? ಸೋಷಿಯಲಿಜಮ್ ಅರ್ಥ ಏನು ಎಂದು ನಾನು ಅವರನ್ನು ಕೇಳಬೇಕಾಗುತ್ತದೆ. ಕಾಂಟ್ರಾಕ್ಟ್ ಕ್ಯಾರೇಜ್‌ಗಳ ಮೇಲೆ ತೆರಿಗೆಯನ್ನು ಹಾಕಿದ್ದು ತಪ್ಪೇ. ಕಬ್ಬು ಬೆಳೆಯುವರಿಗೆ ಸಾಕಷ್ಟು ಆದಾಯ ಬರುತ್ತದೆ. ಆದ್ದರಿಂದ ಅವರಿಗೆ ಟ್ಯಾಕ್ಸ್ ಹಾಕಿದ್ದು ತಪ್ಪೆ ? ಸೈಕಲ್ ಮೇಲೆ ತೆರಿಗೆ ಹಾಕಬೇಕಾಗಿತ್ತು ಎಂದು ಶ್ರೀಮಾನ್ ದೇವೇಗೌಡರ ಪಕ್ಷದ ನೀತಿ ಎಂದು ಕಾಣುತ್ತದೆ. ಕಾಂಟ್ರಾಕ್ಟ್ ಕ್ಯಾರೇಜಸ್‌ನವರ ಮನವಿಗೆ ಶ್ರೀಮಾನ್ ದೇವೇಗೌಡರು ಶಿಫಾರಸ್ಸು ಮಾಡಿದರು. ಅದರಿಂದ ನನಗೇನೂ ಆಶ್ಚರ್ಯವಾಗಿಲ್ಲ. ಏತಕ್ಕೆಂದರೆ ಅವರ ಪಕ್ಷದ ದೃಷ್ಟಿಯಿಂದ ನೋಡಿದರೆ ಅದು ಸರಿ ಎಂದು ಕಾಣುತ್ತದೆ. ಬಸ್ ಮಾಲಕರ ಡೆಲಿಗೇಷನ್ ಮಾನ್ಯ ದೇವೆಗೌಡರು ಲೀಡ್ ಮಾಡಿಕೊಂಡು ಬಂದಿದ್ದರು.

ಶ್ರೀ ಎಚ್. ಡಿ. ದೇವೆಗೌಡ.—ಅವರು ನಿಮ್ಮ ಕಾಂಗ್ರೆಸ್ (ಆರ್) ಬೋರ್ಡು ಹಾಕಿಕೊಂಡು ಬಂದಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಈಗ ತಾವು ಹೇಳುವುದೇನು ? ಕಾಂಟ್ರಾಕ್ಟ್ ಬಸ್ಸುಗಳ ಮೇಲೆ ತೆರಿಗೆ ಹಾಕಬೇಕೇ ಅಥವಾ ಸೈಕಲುಗಳ ಮೇಲೆ ತೆರಿಗೆ ಹಾಕಬೇಕೇ ; ಯಾವುದರ ಮೇಲೆ ತೆರಿಗೆ ಹಾಕಬೇಕು ?

Sri H. D. DEVE GOWDA.—I have every right to forward that memorandum. Even now I hold the same opinion.

Sri D. DEVARAJ URS.—The hon. member has a right to criticise in the manner he likes. Government also has a right to reply in the manner it likes.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ದೇವೇಗೌಡರು ಅಲ್ಲಿ 200 ಬಸ್ಸುಗಳು ಬಂದು ನಿಂತಿವೆ ಎಂದು ಹೇಳಿದರು. ಇಡೀ ರಾಜ್ಯದಲ್ಲಿರುವ ಅಂಥ ಬಸ್ಸುಗಳ ಸಂಖ್ಯೆ ಕೇವಲ ಒಂದು 300 ಆಗಬಹುದು. ನನಗೆ ಅವರು ಭೇಟಿಯಾದಾಗ, ಈ ರೀತಿ ಬಸ್ಸುಗಳನ್ನು ತಂದು ಪ್ರಜಾಪ್ರಭುತ್ವದ ಕೇಂದ್ರವಾಗಿರತಕ್ಕಂತಹ ವಿಧಾನ ಸೌಧಕ್ಕೆ ಮುತ್ತಿಗೆ ಹಾಕುತ್ತೇವೆಂದು ಬೆದರಿಕೆಯನ್ನು ಹಾಕಿದರೆ ನಾವು ಅದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲ ಎಂದು ಹೇಳಿದೆ. ಆದರೆ ಏನಾದರೂ ನ್ಯಾಯವಾಗಿ ನೋಡಬೇಕಾದ ವಿಚಾರವಿದ್ದರೆ ಅದರ ಬಗ್ಗೆ ನಾವು ಕೂತುಕೊಂಡು ಚರ್ಚೆ ಮಾಡೋಣವೆಂದು ಸಹ ಹೇಳಿದ್ದೇನೆ. ಆದರೆ ಹೆದರಿಕೆ ಬೆದರಿಕೆ ಹಾಕುವುದು ಮಾತ್ರ ನಡೆಯಲಾರದು ಎಂದು ಹೇಳಿದ್ದೇನೆ.

ಈಗ 35 ರೂಪಾಯಿ ಪರ್ ಸೀಟ್, ಪರ್ ಕ್ವಾರ್ಟರ್ ಇದ್ದುದನ್ನು ನಾವು 100 ರೂಪಾಯಿ ಪರ್ ಸೀಟ್, ಪರ್ ಕ್ವಾರ್ಟರ್ ಮಾಡಿದ್ದೇವೆ. ಮದ್ರಾಸಿನಲ್ಲಿಯೂ ಈ ರೀತಿಯ ರೇಟ್ ಇದೆ. ಅವರಿಗೆ ಸಾಕಷ್ಟು ಲಾಭವೂ ಆಗುತ್ತಿದೆ ; ಅದರಿಂದ ಸ್ವಲ್ಪ ಟ್ಯಾಕ್ಸ್ ಕೊಟ್ಟರೆ ಏನೂ ತೊಂದರೆಯಾಗುವುದಿಲ್ಲ. ಉದಾಹರಣೆಗೆ ಇದರಿಂದ ಒಂದು 800—900 ರೂಪಾಯಿ ಜಾಸ್ತಿಯಾಗಬಹುದೆಂದು ತಿಳಿಯುತ್ತೇನೆ.

Sri C. M. ARUMUGAM.—Has it come to your notice that the contract carriage owners have raised the passenger fares ?

Sri M. Y. GHORPADE.—Supposing some passengers want the comforts let them pay a little more. ನಮ್ಮ ರಾಜ್ಯದಲ್ಲಿ ಹೆಚ್ಚು ಕಮ್ಮಿ 300 ಬಸ್‌ಗಳು ಇವೆ. ಅವುಗಳಲ್ಲಿ 200 ಕಂಟ್ರಾಕ್ಟ್ ಬಸಸ್ ಆಫ್ ಸ್ಟೇಟ್ ಪರ್ಮಿಟ್. ಇನ್ನು ಉಳಿದ 100 ರಿಜಿಸ್ಟರ್ಡ್ ಬಸಸ್ ಇವೆ. ಅವರು ಜೆನ್ಯುನ್ ಟೂರಿಸ್ಟ್‌ಗೋಸ್ಕರ, ಸ್ಕೂರ್ ಪಾರ್ಟಿಗೋಸ್ಕರ, ಮದುವೆ ಪಾರ್ಟಿಗೋಸ್ಕರ ಓಡಾಡಿಸುತ್ತೇವೆಂದು ಹೇಳಿದರು. ಅದಕ್ಕೆ ಯಾವರೀತಿ ಮಾಡುತ್ತೇವೆಂಬುದನ್ನು ಕನ್ಸಿಡರ್ ಮಾಡುತ್ತೇವೆಂದು ಹೇಳಿದ್ದೇನೆ. ಇದರಲ್ಲಿ ಅಡ್ಮಿನಿಸ್ಟ್ರೇಟಿವ್ ಅಥವಾ ಕಾನೂನು ದೃಷ್ಟಿಯಲ್ಲಿ ಏನಾದರೂ ತೊಂದರೆ ಅಥವಾ ಕಷ್ಟ ಇದ್ದರೆ, ಅದರ ಬಗ್ಗೆ ಯೋಚನೆ ಮಾಡುತ್ತೇವೆಂದು ಹೇಳಿದ್ದೇನೆ. ಇಂಥ ಸ್ಕೂರ್ ಪಾರ್ಟಿ, ಪಿಲ್ಗ್ರಿಮೇಜ್ ಪಾರ್ಟಿ ಮತ್ತು ಮದುವೆ ಪಾರ್ಟಿಗಳಿಗೆ ಉಪಯೋಗಿಸುವಂತಹ ಕೇಸುಗಳಲ್ಲಿ ನಾನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ. ಇನ್ ಪ್ರಾಕ್ಟೀಸ್, ನನಗನಿಸುತ್ತದೆ, ಈ ರೀತಿಯ ವ್ಯತ್ಯಾಸ ಮಾಡುವುದು ಬಹಳ ಕಷ್ಟ ಎಂದು. ಆದರೂ ಸಾಧ್ಯವಾದರೆ ನೋಡುತ್ತೇನೆಂದು ಹೇಳಿದ್ದೇನೆ. ಇದರ ಬಗ್ಗೆ ಒಂದು ಬಿಲ್ ತಂದು ಅದನ್ನೂ ಜುಲೈ ಒಂದನೇ ತಾರೀಕಿನಿಂದ ಜಾರಿಗೆ ತರುವಂತೆ ಮಾಡುತ್ತೇವೆ. ಆದ್ದರಿಂದ ಟ್ಯಾಕ್ಸ್ ಕೊಡುವ ಚೈತನ್ಯ ಯಾರಿಗೆ ಇದೆ, ಅಂಥವರಿಗೆ ಇದನ್ನು ಕೊಡಿ ಎಂದು ಕೇಳುತ್ತಿದ್ದೇನೆ, ಅಷ್ಟೇ.

ಈಗ ಇರಿಗೇಶನ್ ಟ್ಯಾಕ್ಸ್ ಬಗ್ಗೆ ತಮಗೆಲ್ಲರಿಗೂ ಗೊತ್ತಿರುವಹಾಗೆ ಒಂದು ವಿಚಾರ ದೇಶದ ಮುಂದೆ ಇದೆ. ಅದೇನೆಂದರೆ ವ್ಯವಸಾಯ ಕ್ಷೇತ್ರದಲ್ಲಿ ಶಕ್ತಿ ಇರತಕ್ಕ ರೈತರ ಮೇಲೆ ತೆರಿಗೆ ಹಾಕಲು ಸರ್ಕಾರದವರು ಹೆದರುತ್ತಿದ್ದಾರೆ ಎಂದು. ಅದೇ ರೀತಿ ಬಡ ರೈತರಿಗೆ ಹಿಂಸೆ ಕೊಡುತ್ತಿದ್ದಾರೆಂದು ಕೂಡ ಹೇಳುತ್ತಿದ್ದಾರೆ. ಆದ್ದರಿಂದ ಇದನ್ನು ಹೋಗಲಾಡಿಸುವುದಕ್ಕೋಸ್ಕರ ಈ ರೀತಿಯ ಒಂದು ಪದ್ಧತಿಯನ್ನು ನಾವು ಅನುಸರಿಸಿದ್ದೇವೆ. ಇರಿಗೇಶನಿಗೆ ಬಹಳ ಹೆಚ್ಚು ಮಾಡಿಲ್ಲ. ನನ್ನ ಭಾಷಣದಲ್ಲಿ ಹೇಳಿದ ಪ್ರಕಾರ 1957ರಲ್ಲಿ ಏನು ಒಂದು ರೇಟ್ ಇತ್ತು, 100 ಎಕರೆ ಮತ್ತು ಅದಕ್ಕೆ ಮೇಲ್ಪಟ್ಟು ಅದು ಹೆಚ್ಚು ಕಮ್ಮಿ ಅದೇ ರೀತಿ ನಾವು ಈಗಲೂ ಮಾಡಿದ್ದೇವೆ. ಆದರೆ ಶುಗರ್‌ಕೇನಿಗೆ ಮಾತ್ರ ಸ್ವಲ್ಪ ಜಾಸ್ತಿ ಮಾಡಿದ್ದೇವೆ. ಅದು 30 ರೂಪಾಯಿ ಇದ್ದುದನ್ನು 40 ರೂಪಾಯಿ ಮಾಡಿದ್ದೇವೆ. ಬಾಕಿ ಎಲ್ಲಾ ಬೆಳೆಗಳಿಗೂ 100 ಎಕರೆಗಿಂತ ಮೇಲ್ಪಟ್ಟು ಹಿಂದೆ ಏನು ಇತ್ತು, ಅದೇ ರೀತಿ ಮಾಡಿದ್ದೇವೆ. ಇವತ್ತು ತಮಗೆಲ್ಲಾ ಗೊತ್ತಿರುವಂತೆ ಇದರಿಂದ ಮೈಂಟೆನೆನ್ಸ್ ಮತ್ತು ವರ್ಕಿಂಗ್ ಖರ್ಚು ಕೂಡ ಬರುತ್ತಾ ಇಲ್ಲ. ಮತ್ತು ರಿಟರ್ನ್ ದೃಷ್ಟಿಯಿಂದ ನ್ಯಾಯವಾಗಿ ನೋಡುವುದಾದರೆ ಒಂದು ಎಕರೆಗೆ 120 ರೂಪಾಯಿ ಬರಬೇಕೆಂದು ಲೆಕ್ಕ ಇದೆ. ಮಹಾರಾಷ್ಟ್ರದಲ್ಲಿ ಒಂದು ಎಕರೆಗೆ 200 ರೂಪಾಯಿಯಂತೆ ಕಬ್ಬು ಬೆಳೆಯುವವರು ಕೊಡುತ್ತಿದ್ದಾರೆ. ನಾನೂ ಕಬ್ಬು ಬೆಳೆದಿದ್ದೇನೆ. ಅದರ ವಿಚಾರ ನನಗೂ ಹೆಚ್ಚು ಗೊತ್ತುಂಟು. ಇವತ್ತು ಏನು ನಾವು ಕೇಳುತ್ತೇವೆ, ಅದನ್ನು ಅವರು ಕಷ್ಟಪಟ್ಟು ಕೊಡಬೇಕಾಗಿಲ್ಲ. ಮಹಾರಾಷ್ಟ್ರದಲ್ಲಿ ಇದನ್ನು ಸುಖವಾಗಿ ಕೊಡುತ್ತಿದ್ದಾರೆ. ಇದು ದೇಶದಲ್ಲಿರತಕ್ಕಂತಹ ಪರಿಸ್ಥಿತಿ. ಇದರ ಬಗ್ಗೆ ನನ್ನ ಭಾಷಣದಲ್ಲಿ ಎಕ್ಸ್‌ಪರ್ಟ್ ಕಮಿಟಿ, ನಿಜಲಿಂಗಪ್ಪ ಕಮಿಟಿಯ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಅದನ್ನು ಮಾನ್ಯ ದೇವೇಗೌಡರು ರಾಜಕೀಯವೆಂದು ಹೇಳಿದರು. ಆದರೆ ಇದರಲ್ಲಿ ರಾಜಕೀಯವೇನೂ ಇಲ್ಲ. ಅವರು ವಾಟರ್ ಟ್ಯಾಕ್ಸ್ ಗ್ರಾಸ್ ಇನಕಂನ 5–12 ಪರ್‌ಸೆಂಟ್ ಇರಬೇಕೆಂದು ಹೇಳಿದ್ದಾರೆ. ಶುಗರ್‌ಕೇನ್ ಸರಾಸರಿ ಒಂದು ಎಕರೆಗೆ 40 ಟನ್ ಬೆಳೆದರೆ, ಒಂದು ಟನ್ನಿಗೆ 80 ರೂಪಾಯಿ ರೇಟ್ ಅಂದುಕೊಂಡರೂ, 3200 ರೂಪಾಯಿ ಬರುತ್ತದೆ. ಈ 3200 ರೂಪಾಯಿ ಆದಾಯದ ಮೇಲೆ 5 ಪರ್‌ಸೆಂಟ್ ಟ್ಯಾಕ್ಸ್ ಹಾಕಿದರೆ ಅದು 160 ರೂಪಾಯಿ ಯಾಗುತ್ತದೆ. ಆದರೆ ನಾವು ಹಾಕಿರತಕ್ಕದ್ದು 40-60 ರೂಪಾಯಿ. ಒಂದು ಎಕರೆಯಲ್ಲಿ 1-2 ಸಾವಿರ ರೂಪಾಯಿ ಲಾಭ ಬರುತ್ತಾ ಇರುವಾಗ ಇದರಲ್ಲಿ 40-60 ರೂಪಾಯಿ ಕೊಡುವುದು ಕಷ್ಟವೇನೂ ಅಲ್ಲ. ನೀವು ಹೇಳಬಹುದು, ಫ್ಯಾಕ್ಟರಿಯಲ್ಲಿ ಕಬ್ಬು ಅರೆಯುವವರಿಗೆ ಮತ್ತು ಬೆಲ್ಲಮಾಡುವವರಿಗೆ ರೇಟ್ ಚೆನ್ನಾಗಿ ಬರುತ್ತದೆಂದು. ಇನ್ನೊಂದು ವರ್ಷ ಬರುವುದಿಲ್ಲವೆಂದೂ ಹೇಳಬಹುದು. ಒಟ್ಟು ಸರಾಸರಿ ಐದು ವರ್ಷಗಳ ಲಾಭವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಒಂದು ವರ್ಷ ರೇಟ್ ಕಡಿಮೆಯಾದರೆ, ಇನ್ನೊಂದು ವರ್ಷ ಜಾಸ್ತಿಯಾಗುತ್ತದೆ. ಆದ್ದರಿಂದಲೇ ಕೆಲವರು ಫ್ಯಾಕ್ಟರಿಗೆ ತೆಗೆದುಕೊಂಡು ಹೋಗುವುದಿಲ್ಲ. ಏಕೆಂದರೆ ಬೇರೆ ಕಡೆ ಅಟ್ರಾಕ್ಟಿವ್ ರೇಟ್ ಸಿಗುತ್ತದೆ. ಆದ್ದರಿಂದ ಯಾವ ದೃಷ್ಟಿಯಿಂದ ನೋಡಿದರೂ ಇದಕ್ಕೆ ತೆರಿಗೆಯನ್ನು ಜಾಸ್ತಿಯಾಗಿ ಹಾಕಿಲ್ಲ. ಇರ್ರಿಗೇಷನ್ ಪಂಪುಸೆಟ್ಟುಗಳನ್ನು ಹಾಕಿಕೊಂಡಿರತಕ್ಕವರಿಗೆ ಒಂದು ತಿಂಗಳಿಗೆ 20 ರಿಂದ 24 ರೂಪಾಯಿಗಳವರೆಗೆ ನೀರನ್ನು ಎತ್ತುವುದಕ್ಕೆ ಎಲೆಕ್ಟ್ರಿಕ್ ಚಾರ್ಜಸ್ ಆಗು

(SRI M. Y. GHORPADE)

ತ್ತದೆ. ಅಂದಮೇಲೆ ಒಂದು ವರ್ಷಕ್ಕೆ 250 ರೂಪಾಯಿಗಳಿಂದ 300 ರೂಪಾಯಿಗಳವರೆಗೆ ಕೊಡುತ್ತಾರೆ. "Irrigation-well-man pays to lift water. Apart from that he repays the well loan." ಅವನೂ ರೈತ. ಕೆನಾಲ್ ಕೇಳುವವನೂ ರೈತ, ಟ್ಯಾಂಕ್ ಕೇಳುವವನೂ ಸಹ ರೈತನೇ. ಭೂತಲಿಂಗಂ ಕಮಿಟಿಯವರು 8 ತಿಂಗಳುಗಳಿಗೆ ಮೇಲ್ಪಟ್ಟು ನೀರು ಬರುವ ಕಡೆ 90ರಷ್ಟು ತೆರಿಗೆ ಹಾಕಬೇಕೆಂದು ಹೇಳಿದರು. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡಿದ್ದಾರೆ. ನ್ಯಾಯವಾಗಿರುವ ಹಾಗೆ ಕಡಿಮೆ ದರವನ್ನು ಹಾಕಿದ್ದೇವೆ. ಇನ್ನು ಹೆಚ್ಚು ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿ ಕೆರೆಗಳು ಬಹಳ ಇವೆ. ಸುಮಾರು 29 ಸಾವಿರ ಕೆರೆಗಳಿವೆ. 50 ಎಕರೆಗಿಂತ ಕಡಿಮೆ ಅಯಕಟ್ಟಿನಲ್ಲಿರತಕ್ಕ ಕೆರೆಗಳಾಗಿ ಇವು ಇವೆ. ಇದರಿಂದಲೇ ರೈತರಿಗೆ ಹೆಚ್ಚಿಗೆ ತೊಂದರೆಯಾಗುತ್ತಿರುವುದು. ಅಲ್ಲಿ ಬತ್ತ ಬೆಳೆದರೆ ಒಂದೊಂದುಸಾರಿ ನೀರು ಬರದಿದ್ದರೆ, ಆಗ ವಾಟರ್ ರೇಟ್ ಬೇರೆ ಹಾಕಿದರೆ ರೈತರಿಗೆ ತೊಂದರೆಯಾಗುತ್ತದೆ. ಅದು ಅಪಾಯಕಾರಿ. It is not the rate, but the difficulty in applying the rate in an efficient manner. ಇಂಥಾದಕ್ಕೆ ಪರಿಹಾರ ಹುಡುಕುವುದು ಅಷ್ಟು ಸುಲಭವಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ನೀವು ಈರೀತಿ ತೆರಿಗೆ ಹಾಕುವುದಕ್ಕೆ ಬದಲು ಇನ್‌ಕಂ ಮೇಲೆ ಹಾಕಬಹುದು.

Sri M. Y. GHORPADE.—I want to emphasize that in the Budget speech, while recommending the rates, I have said that the Government have decided not to levy water-rate when no crop could be raised on account of failure of water-supply. We will watch how this works in practice and make further efforts for simplification. ಇದು ಸ್ಪಷ್ಟವಾದ ಹೇಳಿಕೆ. ಇದರಲ್ಲಿ ಏನಾದರೂ ಅಡ್ಮಿನಿಸ್ಟ್ರೇಷನ್‌ನಲ್ಲಿ ತೊಂದರೆಯಾದರೆ, ಸಾಕಷ್ಟು ಕೆರೆಗಳೇ ಇಲ್ಲದೆ ಇರತಕ್ಕ ಗ್ರಾಮಗಳಲ್ಲಿರುವ ರೈತರಿಗೆ ತೊಂದರೆಯಾದರೆ, ಅದರ ಬಗ್ಗೆ ಯಾವ ರೀತಿಯಲ್ಲಿ ರಿಪರೆನ್ಸ್ ಮಾಡಬೇಕೆಂಬ ಬಗ್ಗೆ ಸರ್ಕಾರದ ಆಲೋಚನೆ ಇದೆ. ಆದರೆ ರೇಟಿನ ಬಗ್ಗೆ ಯಾವ ಅನುಮಾನವೂ ಇಲ್ಲ. ಹೆಚ್ಚು ಇದರ ಬಗ್ಗೆ ಚರ್ಚೆ ಕೂಡ ಅನಾವಶ್ಯಕವೆಂದು ನಾನು ಹೇಳಬಯಸುತ್ತೇನೆ.

ಇನ್ನು ಅಡಿಷನಲ್ ರೆವಿನ್ಯೂ ಐಟಂನಿಂದ ವರ್ಷ ಒಂದಕ್ಕೆ ಒಂದು ಕೋಟಿ 70 ಲಕ್ಷ ರೂಪಾಯಿಗಳು ಬರುತ್ತಿವೆ. ಈ ವರ್ಷ ಒಂದು ಕೋಟಿ ರೂಪಾಯಿಗಳು ಬರುತ್ತದೆಂದು ಹೇಳಬಹುದು. ಮಾನ್ಯ ಶ್ರೀ ಸತ್ಯನಾರಾಯಣ ಸಿಂಗ್ ಅವರು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ ಅದರೆ ಪೇಮೆಂಟ್ ಆಫ್ ಶುಗರ್‌ಕೇನ್ ಮತ್ತು ಅದರ ಕಂಟೆಂಟ್ಸ್‌ನ್ನು ಅಳೆಯುವುದರಲ್ಲಿ ಸರ್ಕಾರದ ಕಂಟ್ರೋಲ್ ಇರಬೇಕೆಂದು ಹೇಳಿದರು. ಅದು ಒಳ್ಳೆಯ ಸೂಚನೆ ಅದನ್ನು ಪರಿಶೀಲಿಸುವುದಕ್ಕೆ ಪ್ರಯತ್ನಪಡುತ್ತೇನೆ. ಆದರೆ ವಿಜಯನಗರದ ಅರಸರ ಸಾಮ್ರಾಜ್ಯಕಾಲದಲ್ಲಿ ಕೊಟ್ಟಿರುವಂಥಾದ್ದಕ್ಕೆ ಈಗಲೂ ವಾಟರ್ ರೇಟ್ ಹಾಕುವುದು ಸರಿಯಾದುದಲ್ಲವೆಂದು ಹೇಳಿದರು. ವಾಟರ್ ರೇಟಿನಿಂದ ಮೂರು ಕೋಟಿ ರೂಪಾಯಿಗಳು ಸರ್ಕಾರಕ್ಕೆ ಬರಬೇಕು.

ಶ್ರೀ ವಾಟಾಳ್ ನಾಗರಾಜ್.—ಅವರಿಗೆ ಈಗ ಇದರಿಂದ 3 ಕೋಟಿ ರೂಪಾಯಿಗಳ ಲಾಭ ಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಲ್ಯಾಂಡ್ ರೆವಿನ್ಯೂ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೋ ಆ ಪ್ರಕಾರವಾಗಿ ಡಿಸಿಷನ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದನ್ನು ಸಮಗ್ರವಾಗಿ ಯೋಚನೆಮಾಡಬೇಕಾಗಿದೆ. ಲ್ಯಾಂಡ್ ರೆವಿನ್ಯೂ ಬಗ್ಗೆ ಇರತಕ್ಕ ಕೆಲವು ವಿಚಾರಗಳನ್ನು ನಿಮ್ಮ ಮುಂದೆ ಇಡಬೇಕಾಗುತ್ತದೆ. ಅದರಲ್ಲಿ ಫ್ಲ್ಯಾಟ್ ಟ್ಯಾಕ್ಸ್ ಇದೆ. ಅದು ಪ್ರೋಗ್ರೆಸ್ಸಿವ್ ಆಗಿಲ್ಲ. ಅದರ ಮೇಲೆ ಸರ್‌ಚಾರ್ಜ್ ಹಾಕಬೇಕೆಂದು ಪ್ಲಾನಿಂಗ್ ಕಮಿಷನ್ನಿನವರು ವಿಚಾರಮಾಡುತ್ತಿದ್ದಾರೆ. ಲ್ಯಾಂಡ್ ರೆವಿನ್ಯೂವನ್ನು ಪ್ರೋಗ್ರೆಸ್ಸಿವ್ ಮಾಡಬೇಕಾದರೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಿದರೆ ಆಗ ಶಾಶ್ವತವಾದ ಪರಿಹಾರ ಸಿಗುತ್ತದೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಕೇಂದ್ರ ಸರ್ಕಾರದ ಕೆ. ಎನ್. ರಾಜ್ ಸಲಹಾ ಕಮಿಟಿಯವರು ಈ ಬಗ್ಗೆ ವಿಚಾರಮಾಡಿ ನೋಡುತ್ತಿದ್ದಾರೆ. ಅದರ ಬಗ್ಗೆಯೂ ನಾವು ನಮ್ಮ ರಾಜ್ಯದಲ್ಲಿಯೂ ಒಂದು ಧೋರಣೆಯನ್ನು ಹಾಕಿಕೊಳ್ಳಬೇಕು. ಅದರ ಬಗ್ಗೆ ನಾವು ನಿರ್ದಿಷ್ಟವಾದ ಒಪಿನಿಯನ್ನನ್ನು ಕೊಟ್ಟಿಲ್ಲ.

ಇನ್ನು ಆಕ್ಟ್ರಾಯಿ ಬಗ್ಗೆ ಕೆಲವು ಸದಸ್ಯರು ಹೇಳಿದರು; 6–7 ಕೋಟಿ ರೂಪಾಯಿಗಳು ಮುನಿಸಿಪಾಲಿಟಿಗೆ ಬರುತ್ತದೆಂದು. ಅಲ್ಲಿಗೆ ಬರೀ ಆದಾಯ ಬರಬೇಕೆಂಬ ವ್ಯವಸ್ಥೆಮಾಡ ಬೇಕೆಂದರೆ ಅದು ಅಷ್ಟು ಸುಲಭವಲ್ಲ. ಬೆಂಗಳೂರಿನಲ್ಲಿ ಆಕ್ಟ್ರಾಯಿ ಇನ್‌ಕಂ ಸೇಕಡ 60 ರಷ್ಟಿದೆ. ಅದು ಟೆಕ್ಸ್‌ಟೈಲ್ಸ್, ಟೊಬಾಕೊ ಮತ್ತು ಷುಗರ್ ಬಾಬುಗಳಿಂದಲೇ ಬರುತ್ತಿದೆ. ಅದನ್ನೇ ನಾದರೂ ಈಗ ತೆಗೆದುಹಾಕಿದರೆ, ಆ 6–7 ಕೋಟಿ ರೂಪಾಯಿಗಳನ್ನು ಟ್ಯಾಕ್ಸ್‌ಪೇಯರ್ಸ್‌ನಿಂದ ಬೇರೆ ತೆರಿಗೆಗಳ ಮೂಲಕ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಸೇಕಡ 10 ರಷ್ಟಾದರೂ ಬೇರೆ ರೀತಿಯಲ್ಲಿ ತೆರಿಗೆಗಳನ್ನು ಹಾಕಬೇಕಾಗಿದೆ. ಇನ್ನು ಸೇಲ್ಸ್‌ಟ್ಯಾಕ್ಸ್‌ನಿಂದ ಸುಮಾರು 60 ಕೋಟಿ ರೂಪಾಯಿಗಳಷ್ಟು ಆದಾಯವಿದ್ದರೂ ಅಧರಲ್ಲಿ ಸೇಕಡ 10 ರಷ್ಟು ಮಾತ್ರ ಕಡಿಮೆ ಮಾಡಬೇಕೆಂದು ಹೇಳುತ್ತಿದ್ದಾರೆ. ಇದನ್ನು ಯೋಚನೆಮಾಡಿ ಮಾಡಬೇಕು. ಇದನ್ನು ಅಷ್ಟು ಅವಸರದಲ್ಲಿ ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಮುನಿಸಿಪಾಲಿಟಿಗಳ ಜೊತೆ ಯಲ್ಲಿ ಮಾತನಾಡಿ 6–7 ಕೋಟಿ ರೂಪಾಯಿಗಳ ಆದಾಯ ಬೇರೆ ರೀತಿಯಿಂದ ಯಾರಿಗೂ ಅನ್ಯಾಯವಾಗದಂತೆ ಮಾಡುವುವಕ್ಕೆ ಪ್ರಯತ್ನಪಟ್ಟಮೇಲೆ ಈ ಆಕ್ಟ್ರಾಯಿಯನ್ನು ತೆಗೆದುಹಾಕ ಬಹುದು. ಒಟ್ಟಿನಲ್ಲಿ ಆಕ್ಟ್ರಾಯಿ ಒಳ್ಳೆಯ ಟ್ಯಾಕ್ಸಲ್ಲ.

ಇನ್ನು ಹಾರ್ಸ್ ರೇಸಿಂಗ್ ಬಗ್ಗೆ ಕೆಲವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ಯೋಜನೆಮಾಡಿ ಸರ್ಕಾರದ ಹತೋಟಿಯನ್ನು ಅದರ ಮೇಲೆ ಹೆಚ್ಚಿಸಿ ಇನ್ನಷ್ಟು ನ್ಯಾಯ ವಾದ ರೀತಿಯಲ್ಲಿ ಹಾರ್ಸ್‌ರೇಸ್ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಈ ದಿನ ಬೆಳಿಗ್ಗೆ ನನಗೆ ತಿಳಿದಂತೆ ಒಬ್ಬ ಸ್ಟೆವರ್ಡ್ ಮಾನ್ಯ ಶ್ರೀ ವೇಲು ಅವರು ಬೆಟ್ಟಿಂಗ್ ಕೊಡುತ್ತಿದ್ದಾರೆ. ಇದರ ಬಗ್ಗೆ ರೂಲಿಂಗ್ ಕೊಡಬೇಕು. ನನ್ನ ಹತ್ತಿರ 50 ವರ್ಷಗಳ ಪಟ್ಟಿ ನನ್ನಲ್ಲಿದೆ. ಬೇಕಾದರೆ ಅದನ್ನು ತಂದುಕೊಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಯಾರೋ ಒಬ್ಬರು ಮಾಡುತ್ತಿದ್ದಾರೆಂದು ಹೇಳಿದರೆ, ಅದಿನ್ನೂ ನಮ್ಮ ಗಮನಕ್ಕೆ ಬಂದಿಲ್ಲ. ರೂಲ್ಸ್ ಪ್ರಕಾರ ಹೇಳಬೇಕೆಂದರೆ, as I understand no Steward should go in for betting. If there is any such thing, we will take notice of it.

ಶ್ರೀ ವಾಟಾಳ್ ನಾಗರಾಜ್.—ತಾವೇ ಬಂದು ನೋಡಿ, ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಅವರು ಯಾರು ಎಂಬುದನ್ನು ಸ್ಪೆಸಿಫಿಕ್ಕಾಗಿ ಹೇಳಿದರೆ, I will get it verified. I learnt that in other places the Stewards go on betting. But only in Bangalore, they have this rule and I am told that they are adhering to it strictly.

ಶ್ರೀ ಎಂ. ವೈ. ಘೋರ್ಪಡೆ.—ಇನ್ನು ಲಗ್ಜುರಿ ಐಟಂಗಳ ಬಗ್ಗೆ ಸೇಲ್ಸ್‌ಟ್ಯಾಕ್ಸನ್ನು 12 ರಿಂದ 14 ರವರೆಗೆ ಜಾಸ್ತಿ ಮಾಡುತ್ತಿದ್ದೇವೆ. ಅದನ್ನು ಇನ್ನು ವಿಪರೀತವಾಗಿ ಮಾಡುವುದಕ್ಕೆ ಆಗುವುದಿಲ್ಲ. ನೇಬರಿಂಗ್ ಸ್ಟೇಟ್‌ಗಳಲ್ಲಿ ಏನಿದೆಯೋ ಅದನ್ನು ನೋಡಿ ಮಾಡಬೇಕಾಗಿದೆ. ಈಗ ಅದನ್ನು ರ್‍ಯಾಷನಲೈಜೇಷನ್ ಮಾಡಿದ್ದೇವೆ. ಅದಕ್ಕಾಯೇ 5 ಸ್ಲ್ಯಾಬ್‌ಗಳನ್ನು ಮಾತ್ರ ಮಾಡಿದ್ದೇವೆ. ಮುಂಚೆ ಏನಿತ್ತೋ ಅದು ಸಮಂಜಸವಾದಂಥ ಸ್ಲ್ಯಾಬ್ಸ್ ಆಗಿರಲಿಲ್ಲ. ಭೂತಲಿಂಗಂ ಕಮಿಟಿ ಯವರು 4 ಸ್ಲ್ಯಾಬ್‌ಗಳನ್ನು ಸೂಚನೆ ಮಾಡಿದ್ದರು. ಅಮೇಲೆ ಎರಡು ಸ್ಲಾಬ್‌ಗಳನ್ನು ಮಾಡಿದರು. ಅದು 25 ಸಾವಿರ ರೂಪಾಯಿನಿಂದ 50 ಸಾವಿರ ರೂಪಾಯಿಗಳವರೆಗೆ ಒಂದು, ಇನ್ನೊಂದು 50 ಸಾವಿರ ರೂಪಾಯಿನಿಂದ 75 ಸಾವಿರ ರೂಪಾಯಿಗಳವರೆಗೆ. ಆಗ 25 ಸಾವಿರ ರೂಪಾಯಿ ಟರ್ನ್ ಓವರ್ ಇದ್ದವನೂ ಕೂಡ 50 ಸಾವಿರ ರೂಪಾಯಿ ಟರ್ನ್‌ಓವರ್ ಇದ್ದವನು ಕೊಟ್ಟಹಾಗೆ ಟ್ಯಾಕ್ಸ್ ಕೊಡಬೇಕಾಗಿತ್ತು. ಈ ರೀತಿಯಾಗಿ ಕೇವಲ ಎರಡೇ ಸ್ಲ್ಯಾಬ್ಸ್ ಇದ್ದುದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತಿತ್ತು. ಆದ್ದರಿಂದ 5 ರಿಂದ 10 ಸಾವಿರ ರೂಪಾಯಿ, 25 ರಿಂದ 35 ಸಾವಿರ ರೂಪಾಯಿ ಮತ್ತು 35 ರಿಂದ 75 ಸಾವಿರ ರೂಪಾಯಿಗಳವರೆಗೂ ಕೆಲವು ಸ್ಲ್ಯಾಬ್‌ಗಳನ್ನು ಮಾಡಿದ್ದೇವೆ. ಇದು ಬಹಳ ಶಾಸ್ತ್ರೀಯವಾಗಿದೆ. ಭೂತಲಿಂಗಂ ಕಮಿಟಿಯ ಆಧಾರದ ಮೇಲೆ ಈ ರೀತಿಯಾದ ಒಂದು ಸ್ಲ್ಯಾಬ್ ರೇಟ್‌ಗಳನ್ನು ಮಾಡಿದ್ದೇವೆ.

ಇದು ಈಗ ಶಾಸ್ತ್ರೀಯವಾಗಿದೆ. ಇದನ್ನು ಕಾಂಪೋಜಿಷನ್ ಮಾಡುವುದಕ್ಕಾಗುವುದಿಲ್ಲ. ಇಲ್ಲಿಯವರೆಗೂ ಕೆಲವಕ್ಕೆ ಮೂರು ಪರ್ಸೆಂಟ್ ಟ್ಯಾಕ್ಸ್ ಬೀಳುತ್ತಿದ್ದುದಕ್ಕೆ ಬದಲಾಗಿ ಇನ್ನು ಮುಂದೆ ಮೂರುವರೆ ಪರ್ಸೆಂಟ್ ಟ್ಯಾಕ್ಸ್ ಬೀಳುತ್ತದೆ. ಕೆಲವಕ್ಕೆ ಮೂರು ಪರ್ಸೆಂಟಿಗೂ ಕಡಮೆ ಬೀಳುತ್ತದೆ. ತಾವು ಕೇಳತಕ್ಕ ಪರ್‌ಫ್ಯೂಮರಿಗೂ ಹತ್ತು ಪರ್ಸೆಂಟ್ ಟ್ಯಾಕ್ಸ್ ಬೀಳುತ್ತದೆ.

(ಶ್ರೀ ಎಂ. ವೈ. ಘೋರ್ಪಡೆ)

ಇನ್ನು ನಮ್ಮ ರಾಜ್ಯದಲ್ಲಿ ರೇಷ್ಮೆ ಮೇಲೆ ಟ್ಯಾಕ್ಸನ್ನು ಹಾಕತಕ್ಕ ವಿಚಾರದಲ್ಲಿ ಕಾಂಟ್ರವರ್ಷಿ ಯಲ್ಲಾಗಿದೆ. ಅದನ್ನು ಇನ್ನೂ ಪರಿಶೀಲನೆ ಮಾಡುವುದರಲ್ಲಿದೆ.

5-30 P.M.

ಇನ್ನು ಇರಿಗೇಷನ್ ವಿಚಾರಕ್ಕೆ ಬಂದರೆ ಮೈಸೂರು ರಾಜ್ಯದಲ್ಲಿ ಇದರ ಬಗ್ಗೆ ಈಗಾಗಲೇ ಸಾಕಷ್ಟು ಪ್ರಯತ್ನಗಳು ನಡೆದಿವೆ. ಇದರಲ್ಲಿ ಮ್ಯಾಸೀವ್ ಪ್ಲಾನುಗಳೆಲ್ಲಾ ನಮ್ಮ ನಾಲ್ಕನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸೇರಿವೆ. ಈ ದಿವಸ ನಾವು ನಮ್ಮಲ್ಲಿರತಕ್ಕ ಎಲ್ಲಾ ನೀರಾವರಿ ಯೋಜನೆ ಗಳನ್ನೂ ಕೈಗೊಂಡು ಅವುಗಳನ್ನು ಪೂರ್ಣಗೊಳಿಸುವುದಕ್ಕೆ ನಮಗೆ ಏನಿಲ್ಲಾ ಎಂದರೂ 200-300 ಕೋಟಿ ರೂಪಾಯಿಗಳು ಬೇಕಾಗುತ್ತವೆ. ನಮ್ಮ ರಾಜ್ಯ ಮಟ್ಟದಲ್ಲಿ ನಾವು ಎಷ್ಟು ಸಂಪನ್ಮೂಲ ಗಳನ್ನು ರೂಢಿಸಿಕೊಂಡರೂ ನಮಗೆ ಕೇಂದ್ರದಿಂದ ಧನಸಹಾಯ ಬಾರದಿದ್ದರೆ ಈ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಈ ಕೆಲಸ ಕಾರ್ಯಗಳೆಲ್ಲಾ ಬಹಳ ಮಟ್ಟಿಗೆ ಕೇಂದ್ರದಿಂದ ಬರತಕ್ಕ ಧನಸಹಾಯವನ್ನು ಅವಲಂಬಿಸಿವೆ. ಆ ಅಪ್ಪರ್ ಕೃಷ್ಣಾ ಯೋಜನೆ ಒಂದಕ್ಕೆ ಸುಮಾರು 116 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಯೋಜನೆ ಅನೇಕ ದೃಷ್ಟಿ ಯಿಂದ ಬಹಳ ಪ್ರಾಮುಖ್ಯವಾದದ್ದು. ಇದನ್ನು ಹೇಗಾದರೂ ಮಾಡಿ ಪೂರ್ಣಗೊಳಿಸಬೇಕೆಂಬುದೇ ನಮ್ಮ ಸರ್ಕಾರದ ಉದ್ದೇಶ. ಆದರೆ ಸಧ್ಯದಲ್ಲಿ ಇದಕ್ಕೆ ನಮ್ಮ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಹಣ ಸಾಲದು. ಆದುದರಿಂದ ಇದಕ್ಕೆ ಮ್ಯಾಸೀವ್ ಅಸಿಸ್ಟೆನ್ಸ್ ಬಂದರೇನೇ ಇದನ್ನು ಪೂರ್ಣಗೊಳಿಸುವು ದಕ್ಕೆ ಸಾಧ್ಯ ಎಂದು ಹೇಳುತ್ತಿರುವುದು. ಅದಕ್ಕಾಗಿ ನಾವು ಆ ಕೇಂದ್ರದೊಡನೆ ಎಷ್ಟು ಮುತು ವರ್ಜಿವಹಿಸಿ ಪ್ರಯತ್ನಗಳನ್ನು ಮಾಡಬೇಕೋ ಅಷ್ಟೂ ಮುತುವರ್ಜಿ ವಹಿಸಿ ಕೆಲಸ ಮಾಡಲಾಗುತ್ತಿದೆ. ಆದುದರಿಂದ ಇದರ ಬಗ್ಗೆ ಯಾರೂ ಎಳ್ಳಷ್ಟೂ ಸಂಶಯಪಡಬೇಕಾಗಿಲ್ಲ.

ಶ್ರೀ ಎಸ್. ವೈ. ಪಾಟೀಲ್.—ಇದರಲ್ಲಿ ಹಣವೊಂದೇ ಪ್ರಾಮುಖ್ಯವಾದುದಲ್ಲ. ಮುಖ್ಯ ಮಂತ್ರಿಗಳು ಮನಸ್ಸು ಮಾಡಿದರೆ ಇದು ಸಾಧ್ಯವಾಗುತ್ತದೆ. ಬಿಜಾಪುರ ಜಿಲ್ಲೆ ಪ್ರತಿವರ್ಷ ಬರಗಾಲದಿಂದ ನರಳುತ್ತಿದೆ. ನಮ್ಮ ಜಿಲ್ಲೆಗೆ ಈ ಯೋಜನೆ ಒಂದು ಜೀವನಾಡಿ ಆಗಿದೆ.

ಶ್ರೀ ಭಾಪುಗೌಡ ರಾಯಪ್ಪ.—ವರ್ಲ್ಡ್ ಬ್ಯಾಂಕಿನಿಂದ ಹಾಗೂ ಎಲ್ಐಸಿ ಇಂದ ಏಕೆ ಸಾಲವನ್ನು ಎತ್ತಬಾರದು ?

ಶ್ರೀ ಎಂ. ವೈ. ಘೋರ್ಪಡೆ.—ಹಣ ಎಲ್ಲಿಂದರೇ ಬರಲಿ ಅದಕ್ಕೆ ಕೇಂದ್ರ ಸರ್ಕಾರದ ಆಶೀರ್ವಾದ ಬೇಕೇ ಬೇಕು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಹೇಳಿದ ಸಂಸ್ಥೆಗಳೇನಿದ್ದರೂ ಕಮರ್ಷಿಯಲ್ ಪರ್ಪಸಸ್‌ಗೆ ಮಾತ್ರ ಸಾಲ ಕೊಡುತ್ತವೆಯೇ ವಿನಾ ಇಂಥ ಕೆಲಸಗಳಿಗೆ ಕೊಡುವುದಿಲ್ಲ. ಈ ದಿವಸ ಆ ತುಂಗಭದ್ರಾ ಪ್ರಾಜೆಕ್ಟನ್ನು ಕಟ್ಟಿ ಎಷ್ಟು ವರ್ಷಗಳಾಯಿತು ? ಇಲ್ಲಿಯವರೆಗಾದರೂ ಮೂರು ಕಾಸೇನಾದರೂ ರಿಟರ್ನ್ ಬಂದಿದೆಯೇ ? ಅದಕ್ಕೆ 25-30 ಕೋಟಿ ರೂಪಾಯಿಗಳು ಖರ್ಚಾಗಿದೆ. ಅಸಲು ಬರುವುದು ಹಾಗಿರಲಿ ಅದಕ್ಕೆ ಬರಬೇಕಾದ ಬಡ್ಡಿಯಾದರೂ ಬರುತ್ತಿದೆಯೇ ? ಇನ್ನೂ ಕೂಡ ಯಾರದೋ ಹಣದಲ್ಲಿ ಅದಕ್ಕೆ ಬಡ್ಡಿಯನ್ನು ಕೊಡಲಾಗುತ್ತಿದೆ. ಅಲ್ಲಿ ಯಾರೋ ಭತ್ತ ಕಬ್ಬು ಇತ್ಯಾದಿ ಬೆಳೆಗಳನ್ನು ಬೆಳೆದುಕೊಳ್ಳುತ್ತಿದ್ದಾರೆ. ಇಂಥ ಬಾಬುಗಳಿಗೆ ವರ್ಲ್ಡ್ ಬ್ಯಾಂಕಿನವರಾಗಲಿ ಅಥವಾ ಎಲ್.ಐ.ಸಿ. ಅವರಾಗಲಿ ಸಾಲ ಕೊಡುವುದಿಲ್ಲ. ಕೇಂದ್ರ ಸರ್ಕಾರದಿಂದ ಇದು ಪೂರ್ಣ ಅಪ್ರೂವಾಗಿ ಬರದ ವಿನಾ ಈ ಪ್ರಾಜೆಕ್ಟನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ವೈ. ಪಾಟೀಲ್.—ನಮ್ಮ ಜಿಲ್ಲೆಯ ಜನರ ಪ್ರಾಣವೆಲ್ಲಾ ಇದರ ಮೇಲೆ ಇದೆ. ಇದನ್ನು ಕಾರ್ಯಗತ ಮಾಡದಿದ್ದರೆ ಆ ಜಿಲ್ಲೆಯ ಜನರು 365 ದಿನವೂ ಬರದಲ್ಲಿ ಸಿಕ್ಕಿ ನರಳಬೇಕಾಗು ವುದು. ಇದರ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಿಂದು ಮುಂದೂ ನೋಡ ಬಾರದು. ಹಿಂದುಳಿದ ವರ್ಗದವರಿಗೆ ಮತ್ತು ಹರಿಜನರಿಗೆ ಅನುಕೂಲತೆಗಳನ್ನು ಒದಗಿಸಲು ಹೇಗೆ ಸ್ಪೆಷಲ್ ಕಾನೂನುಗಳನ್ನು ಮಾಡುತ್ತಾರೋ ಹಾಗೆ ಇದರ ಬಗ್ಗೆಯೂ ಒಂದು ಸ್ಪೆಷಲ್ ಆರ್ಡರನ್ನು ಮಾಡಿ ಈ ಕಾರ್ಯವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಇನ್ನು Re-schedule of deting of Repayment of debts ವಿಚಾರಕ್ಕೆ ಬಂದರೆ......

Sri C. M. ARUMUGHAM.—When the Hon'ble Member has pleaded so much, I think, the Government should make some statement with regard to the completion of Upper Krishna Project.

Sri M. Y. GORPHADE.—I have made a specific mention of Upper Krishna Project as a very important project in that part of Karnataka. I have also said that the Government is conscious that massive investment will be required to complete that project and every effort will be made to get as much assistance as is possible from the Centre and from various other sources to complete the project as early as possible. We cannot do more than that. How can I make a commitment without adequate financial resources ? I am not having a magic wand.

ಶ್ರೀ ಬಾಪೂಗೌಡ ರಾಯಪ್ಪ.—ತಾವು ಹಾಗೆ ತೇಲಿಸಿ ಹೇಳಿದರೆ ಹೇಗೆ ? ಸರ್ಕಾರದವರು ಖಚಿತವಾಗಿ ಯಾವ ಕೋರ್ಸನ್ನು ತೆಗೆದುಕೊಳ್ಳುತ್ತಾರೆ, ಇದಕ್ಕೆ ಹಣವನ್ನು ಹೇಗೆ ಒದಗಿಸುತ್ತಾರೆಂಬುದನ್ನು ಹೇಳಿ ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಖಚಿತವಾಗಿ ಹೇಳಬೇಕೆಂದರೆ ಅದಕ್ಕೆ ಈಗ 500 ಕೋಟಿ ರೂಪಾಯಿಗಳು ಬೇಕು. ಅಷ್ಟು ಹಣ ನಮ್ಮಲ್ಲಿಲ್ಲ. ಆದುದರಿಂದ ಅದರ ಬಗ್ಗೆ ಈಗ ಖಚಿತವಾಗಿ ಏನೂ ಹೇಳುದಕ್ಕಾಗುವುದಿಲ್ಲ.

ಶ್ರೀ ಬಾಪೂಗೌಡ ರಾಯಪ್ಪ.—ಅದಕ್ಕೆ 500 ಕೋಟಿ ರೂಪಾಯಿಗಳು ಖರ್ಚಾದರೆ 500 ಕೋಟಿ ರೂಪಾಯಿಗಳ ಆಸ್ತಿ ನಮ್ಮಲ್ಲಿದ್ದ ಹಾಗೆ ಆಗುತ್ತದೆ. ಅಲ್ಲಿ ಈಗಾಗಲೇ ಕೆಲವು ಡಿವಿಜನ್ನುಗಳನ್ನು ಮುಚ್ಚುತ್ತಿದ್ದಾರೆ. ಅದಕ್ಕಾಗಿ ನಾನು ಇದನ್ನು ಇಷ್ಟು ಒತ್ತಾಯಪೂರ್ವಕವಾಗಿ ಕೇಳಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಅವು ಅಲ್ಲಿ ಏತಕ್ಕಿರಬೇಕು ? ಅದನ್ನು ಪೂರ್ಣವಾಗಿ ಕಾರ್ಯಗತ ಮಾಡಬೇಕಾಗಿದ್ದರೆ 500 ಕೋಟಿ ರೂಪಾಯಿಗಳು ಬೇಕು, ಈಗಾಗಲೆ ಆ ಅಪ್ಪರ್ ಕೃಷ್ಣಾ, ಮಲಪ್ರಭಾ ಮತ್ತು ಘಟಪ್ರಭಾ ಈ ಯೋಜನೆಗಳಿಗಾಗಿ 50—60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾಗಿದೆ. ನಾವೇನೂ ಸುಮ್ಮನೆ ಕೈ ಕಟ್ಟಿ ಕುಳಿತುಕೊಂಡಿಲ್ಲ. ಆದರೆ ಅಂಥ ಒಂದು ದೊಡ್ಡ ಯೋಜನೆಯನ್ನು ಮೂರು ವರ್ಷಗಳಲ್ಲೇ ಮಾಡಿ ಮುಗಿಸುತ್ತೇವೆಂದರೆ ಅದೊಂದು ಅಪಹಾಸ್ಯದ ಮಾತಾದೀತು. ಅದಕ್ಕೆ ತಗುಲುವ ಪೂರಾ ಹಣ ಈ ದಿವಸ ನಮ್ಮಲ್ಲಿದೆ ಅಂತ ಹೇಳಿದರೂ ಅದನ್ನು ಪೂರ್ಣಗೊಳಿಸುವುದಕ್ಕೆ ಕನಿಷ್ಟ 10 ವರ್ಷಗಳಾದರೂ ಬೇಕು. ಅಷ್ಟಕ್ಕೆ ಕಡಮೆ ಆಗುವುದಿಲ್ಲ.

ಶ್ರೀ ಬಾಪೂಗೌಡ ರಾಯಪ್ಪ.—ಅದಕ್ಕಾಗೇ ನಾನೂ ಕೂಡ ಸರ್ಕಾರ ಇದನ್ನು ಒಂದು ಫೇಸ್ಡ್ ಪ್ರೋಗ್ರಾಂ ಪ್ರಕಾರ ಹಣವನ್ನು ಒದಗಿಸಿಕೊಂಡು ಕೆಲಸ ಮಾಡಬೇಕೆಂದು ಹೇಳುತ್ತಿದ್ದೇನೆ. ಆದರೆ ಇಲ್ಲಿ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿರುವುದನ್ನು ನೋಡಿದರೆ ಒಂದು ತಾರತಮ್ಯಭಾವನೆ ಇರುವುದು ಎದ್ದು ಕಾಣುತ್ತಿದೆ.

ಶ್ರೀ ಡಿ. ದೇವರಾಜ ಅರಸ್.—ಸರ್ಕಾರಕ್ಕೂ ಕೂಡ ಯಾವ ಕೆಲಸವನ್ನು ಮೊದಲು ಮಾಡಬೇಕು ಯಾವುದನ್ನು ಹಿಂದಾಗಿ ಮಾಡಬೇಕು ಎಂಬುದರ ಬಗ್ಗೆ ವಿವೇಚನೆ ಮಾಡಿ ಕೆಲಸ ಮಾಡುವುದಕ್ಕೆ ಅವಕಾಶವಿದೆ. ಕೆಲವು ಬೇಗ ಮುಗಿಯುತ್ತವೆ. ಕೆಲವು ವಿಧಾನವಾಗುತ್ತವೆ.

When did it happen ? Please understand, it is only after we came to tower, I ordered for its being taken up.

ಶ್ರೀ ಎಂ. ವೈ ಘೋರ್ಪಡೆ.—ತಾವು ನಮ್ಮ ದೇಶದ ಹಣಕಾಸಿನ ಪರಿಸ್ಥಿತಿಯನ್ನು ನೋಡಬೇಕು. ಆಮೇಲೆ ರೀಷೆಡ್ಯೂಲಿಂಗ್ ಡೆಟ್ ಬಗ್ಗೆ ಹೇಳಿದ್ದಾರೆ. ರೀಷೆಡ್ಯೂಲಿಂಗ್ ಮಾಡಲೇಬೇಕು. ಹಾಗೆ ಮಾಡುವರೆಂದು ನಂಬಿದ್ದೇನೆ. ಆರನೆಯ ಫೈನಾನ್ಸ್ ಕಮಿಷನ್ ಮುಂದೆ ದಕ್ಷ ರೀತಿಯಿಂದ ನಮ್ಮ ರಾಜ್ಯದ ಪರಿಸ್ಥಿತಿಯನ್ನು, ನಮ್ಮ ಕೇಸನ್ನು ಮಂಡಿಸುತ್ತೇವೆ. ಈ ಸಲ ಫೈನಾನ್ಸ್ ಕಮಿಷನ್ನಿಗೆ ಜವಾಬ್ದಾರಿಯುಳ್ಳ ವ್ಯಕ್ತಿಯನ್ನು ನೇಮಕಮಾಡಿದ್ದಾರೆ, ಇದು ಸ್ವಾಗತಾರ್ಹವಾದ ವಿಚಾರ.

(ಶ್ರೀ ಎಂ. ವೈ. ಘೋರ್ಪಡೆ)

ಈಗ ಹೊಸ ಬಜೆಟ್ಟಿನಲ್ಲಿ ಕೆಲವು ಹೊಸ ಐಟಂಗಳನ್ನು ಸೇರಿಸಿ ಹಣಕಾಸಿನ ಪರಿಸ್ಥಿತಿಗನುಗುಣವಾಗಿ ಸಾಧ್ಯವಿರುವಷ್ಟು ಅವಕಾಶವನ್ನು ಕಲ್ಪಿಸಿದ್ದೇವೆ. ಅದರಲ್ಲಿ ಮುಖ್ಯವಾದುದು ಕನ್ನಡ ಭಾಷೆಯ ಅಭಿವೃದ್ಧಿಯ ವಿಷಯ. ಇದಕ್ಕೆ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದನ್ನು ಯಾವರೀತಿಯಾಗಿ ಪರಿಣಾಮಕಾರಿಯಾಗಿ ಉಪಯೋಗಿಸಬೇಕು ಎಂಬ ಬಗ್ಗೆ ಮಾನ್ಯ ಸದಸ್ಯರು ಸಲಹೆ ಕೊಟ್ಟರೆ ಅದರಂತೆ ಮಾಡಲು ಪ್ರಯತ್ನಮಾಡುತ್ತೇವೆ. ಇದರ ವಿಚಾರದಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮ ನಾವು ಹಾಕಿಲ್ಲ. ಮಾನ್ಯ ಸದಸ್ಯರು ಸಲಹೆ ಕೊಡಲು ಅವಕಾಶವಿದೆ. ಈ ಬಾಬಿಗೆ ಹಣ ಕಡಮೆ ಬೀಳುವುದಿಲ್ಲವೆಂಬ ಭಾವನೆ ಇದೆ.

ಹರಿಜನರಿಗೆ ಎಷ್ಟೇ ಖರ್ಚುಮಾಡಿದರೂ ಕೂಡ ಅದು ಕಡಮೆ ಎಂಬುದು ನನ್ನ ಅಭಿಪ್ರಾಯ. ಅವರು ಹಿಂದುಳಿದಿರುವುದರಿಂದ ಸಾಧ್ಯವಾದ ಸಹಾಯ ಮಾಡಲು ಪ್ರಯತ್ನಮಾಡಿದ್ದೇವೆ, ಪ್ರತಿಯೊಂದು ಜಿಲ್ಲೆಯಲ್ಲೂ ಅವರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಒಂದು ಜನರಲ್ ಹಾಸ್ಟಲನ್ನು ಸ್ಥಾಪಿಸಲು ಅವಕಾಶಮಾಡಿದೆ. ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು ಮುಖ್ಯವಾದುದು, ಜನರಲ್ ಹಾಸ್ಟಲನ್ನು ಸ್ಥಾಪಿಸಿದರೂ ಹೆಚ್ಚುಮಂದಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ವಿದ್ಯಾರ್ಥಿಗಳಿಗೆ ಅವಕಾಶವಿರುವುದು. ಈ ದೃಷ್ಟಿಯಿಂದ 20 ಲಕ್ಷ ರೂಪಾಯಿಗಳನ್ನೊದಗಿಸಲಾಗಿದೆ.

ಹಳ್ಳಿಗಳಲ್ಲಿ ಕುಡಿಯುವ ನೀರಿನ ಸೌಕರ್ಯ ಒದಗಿಸಲು ಇಂಟರಿಂ ಬಜೆಟ್ಟಿನಲ್ಲಿ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿತ್ತು. ಈಗ ಅದನ್ನು ಒಂದುವರೆ ಕೋಟಿಗೆ ಹೆಚ್ಚಿಸಲಾಗಿದೆ. ಇದು ಬಹಳ ಮುಖ್ಯವಾದ ಬಾಬು. ನಮ್ಮ ರಾಜ್ಯದಲ್ಲಿ 1,400 ಗ್ರಾಮಗಳಲ್ಲಿ ಕುಡಿಯಲು ನೀರಿಲ್ಲ, ಇದಕ್ಕೆ 3 ಕೋಟಿ ರೂಪಾಯಿಯಾದರೂ ಬೇಕು. ಈ ವರ್ಷ ಒಂದೂವರೆ ಕೋಟಿ ರೂಪಾಯನ್ನು ಮಾತ್ರ ಕೊಡಲಾಗಿದೆ. ಅನೇಕ ಹ್ಯಾಮಲೇಟ್ಸ್ ಇವೆ. ಅವುಗಳಿಗೆ ಕುಡಿಯುವ ನೀರಿನ ತೊಂದರೆ ಇದೆ. ಇದು ಬರೀ ಹಣದ ಪ್ರಶ್ನೆಯಲ್ಲ. ಒಂದೊಂದು ಕಡೆ ಎರಡು ಮೂರು ಬಾವಿಗಳನ್ನು ಮಾಡಿದ್ದಾರೆ, ಕೆಲವು ಕಡೆ ಬಾವಿಗಳೇ ಇಲ್ಲ. ಆದಕಾರಣ ಎಲ್ಲ ಸದಸ್ಯರು ತಮ್ಮ ಕ್ಷೇತ್ರಗಳನ್ನು ಭೆಟ್ಟಿಮಾಡಿ ಯಾವ ಕಾರಣದಿಂದ ನೀರನ್ನೊದಗಿಸಿಲ್ಲ ಎಂಬುದನ್ನರಿತು ಅದರ ನೈಜ ಚಿತ್ರವನ್ನು ಸರಕಾರಕ್ಕೆ ಕೊಡುವ ಜವಾಬ್ದಾರಿ ಮಾನ್ಯ ಸದಸ್ಯರಮೇಲಿದೆ. ನೀರಿನ ಅನುಕೂಲವಾಗದಿರುವುದಕ್ಕೆ ಹಲವಾರು ಕಾರಣಗಳಿವೆ. ಕೆಲವು ಕಡೆ ನೀರು ಸಿಕ್ಕುವುದಿಲ್ಲ, ಸಿಕ್ಕಿದರೂ ಕುಡಿಯಲು ಯೋಗ್ಯವಾಗಿಲ್ಲದಿರುವಂಥ ನೀರು ದೊರೆಯುವುದು. ಈ ಪ್ರಕಾರ ಕೆಲವು ವಿಶೇಷ ಕಾರಣಗಳಿವೆ. ಇದಕ್ಕೆ ತಕ್ಕಂತೆ ವಿಶೇಷ ಗಮನಕೊಟ್ಟು ಆಯಾ ಸನ್ನಿವೇಶಕ್ಕೆ ತಕ್ಕಂತೆ ಕ್ರಮ ಕೈಕೊಳ್ಳಬೇಕು. ಆದ ಕಾರಣ ಮಾನ್ಯ ಸದಸ್ಯರು ತಮ್ಮ ಕ್ಷೇತ್ರಗಳಲ್ಲಿ ಎಲ್ಲಿ ಕುಡಿಯುವ ನೀರಿನ ಅನುಕೂಲವಿಲ್ಲವೆಂಬುದನ್ನು ತಿಳಿದು ಅಂಥ ಗ್ರಾಮಗಳಲ್ಲಿ ನೀರಿನ ಅನುಕೂಲವಿಲ್ಲದಿರುವುದಕ್ಕೆ ಸರಿಯಾದ ಕಾರಣ ತಿಳಿದು ಇರುವ ನೈಜ ಚಿತ್ರವನ್ನು ಸರಕಾರಕ್ಕೆ ಕೊಟ್ಟರೆ ಈ ಸಮಸ್ಯೆಯನ್ನು ಬೇಗ ಬಗೆಹರಿಸಲು ಸಾಧ್ಯವಾಗುವುದು. ಇದು ಬರೀ ಹಣದ ಪ್ರಶ್ನೆಯಲ್ಲ.

ಆಮೇಲೆ ಅರ್ಬನೈಜೇಷನ್ ಎಂಬ ಪದ ಉಪಯೋಗಿಸಿರುವ ಬಗ್ಗೆ ಚರ್ಚೆಯಾಗಿದೆ. ಅದು ಹೊಸ ಪದವಾದರೂ ಕೂಡ ಸಮರ್ಪಕವಾಗಿದೆ. ಉದ್ದೇಶವಿಷ್ಟೆ : ಔದ್ಯೋಗೀಕರಣ ಬರೀ ಬೆಂಗಳೂರಿನಲ್ಲಿರಬಾರದು, ಹಳ್ಳಿಗಳಿಗೂ ಹಬ್ಬಬೇಕು. ಹಾಗೆ ಮಾಡಲು ಪ್ರತಿಯೊಂದು ಗ್ರಾಮಕ್ಕೂ ವಿದ್ಯುಚ್ಛಕ್ತಿಯನ್ನೊದಗಿಸಬೇಕು. ಈ ಸಂಬಂಧದಲ್ಲಿ ಮದ್ರಾಸಿನ ಉದಾಹರಣೆಯನ್ನು ಕೊಡಬಹುದು. ಅಲ್ಲಿ ಸಾಮಾನ್ಯವಾಗಿ ಎಲ್ಲ ಗ್ರಾಮಗಳಿಗೂ ಕೂಡ ವಿದ್ಯುತ್ತನ್ನು ಒದಗಿಸಲಾಗಿದೆ. ಅಲ್ಲಿ ಗ್ರಾಮ ಮತ್ತು ಪಟ್ಟಣಗಳಿಗೆ ವ್ಯತ್ಯಾಸ ಮಾಡುವುದೇ ಕಷ್ಟ. ಈ ರೀತಿ ಅಲ್ಲಿ ಮಾಡಿದ್ದಾರೆ. ಕೇರಳದಲ್ಲೂ ಕೂಡ ಹಾಗೆ ಮಾಡಿದ್ದಾರೆ. ನಮ್ಮ ರಾಜ್ಯದಲ್ಲೂ ಕೂಡ ಪಂಚವಾರ್ಷಿಕ ಯೋಜನೆಯಲ್ಲಿ ಅವಕಾಶಮಾಡಿಕೊಂಡು ಹಾಗೆ ಮಾಡಬೇಕಾಗಿದೆ. ಎಲ್ಲ ಗ್ರಾಮಗಳಿಗೂ ವಿದ್ಯುತ್ತನ್ನು ಕೊಡುವ ಶಕ್ತಿ ನಮ್ಮ ರಾಜ್ಯಕ್ಕಿದೆ. ಹಾಗೆ ಮಾಡಬೇಕಾಗಿದೆ. ಇದಕ್ಕಾಗಿ ಅರ್ಬನೈಜೇಷನ್ ಪದ ಉಪಯೋಗಮಾಡಲಾಗಿದೆ.

ಈಗ ಅರ್ರ್ಯಾಕ್ ಮತ್ತು ಟಾಡಿಗಳ ಬಗ್ಗೆ 10 ಲಕ್ಷ ರೂಪಾಯಿಗಳನ್ನು ಎಕ್ಸ್‌ಪೆರಿಮೆಂಟಲ್ ಆಗಿ ಕೊಡಲಾಗಿದೆ. ಎಷ್ಟೋ ಕಡೆ ಸರಿಯಾದ ವ್ಯವಸ್ಥೆ ಇಲ್ಲದೆ ತೊಂದರೆಯಾಗಿದೆ. ಅದಕಾರಣ ಎಲ್ಲಿ ಅಂಗಡಿ ತೆರೆಯಬೇಕು, ಅದು ಯಾವರೀತಿ ಇರಬೇಕು ಎಂದು ಪರಿಶೀಲಿಸಿ ಷೆಡ್ಯೂಲ್ಡ್ ಕ್ಯಾಸ್ಟಿನವರು ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ತೊಂದರೆಯಾಗದಹಾಗೆ ಒಂದು ವ್ಯವಸ್ಥೆಮಾಡಲು ಹತ್ತು ಲಕ್ಷ ರೂಪಾಯಿಗಳನ್ನು ಎಕ್ಸ್‌ಪೆರಿಮೆಂಟಲ್ಲಾಗಿ ಬಜೆಟ್ಟಿನಲ್ಲಿ ತೆಗೆದಿಡಲಾಗಿದೆ.

ಮನೆಗಳಿಗೆ ಸೈಟುಗಳನ್ನು ಒದಗಿಸುವ ವಿಚಾರ. ರಾಜ್ಯದಲ್ಲಿ ಮೂರು ವರ್ಷಗಳಲ್ಲಿ ಮೂರು ಲಕ್ಷ ಸೈಟುಗಳನ್ನು ಕೊಡಲಾಗಿದೆ. ಇದು ಹೊಸ ಪ್ರಶ್ನೆಯಲ್ಲ. ಇದಕ್ಕೆ 50 ಲಕ್ಷ ರೂಪಾಯಿ ಇದೆ. ಎರಡೂವರೆ ಕೋಟಿ ರೂಪಾಯಿ ಕೇಂದ್ರ ಸರಕಾರದಿಂದ ಕೇಳಿದ್ದೇವೆ. ಬೇಕಾದಷ್ಟು ಹಣ ಸಿಕ್ಕುತ್ತದೆ, ಇದರ ವಿಚಾರದಲ್ಲಿ ಅನುಮಾನವಿಲ್ಲ. ಆದರೆ ಸರಿಯಾದ ಚೈತನ್ಯ ಸರಕಾರಕ್ಕೆ ಮಾತ್ರವಲ್ಲ, ಜನರಿಗೂ ಬೇಕು.

ಶ್ರೀ ಎಸ್. ಬಂಗಾರಪ್ಪ.—ಅಕ್ವಿಜಿಷನ್ ವಿಚಾರದಲ್ಲಿ ಪ್ರೊಸೀಜರ್ ಸುಲಭಮಾಡಿ ಜಾಗ್ರತೆ ಆಗುವಂತೆ ಮಾಡದಿದ್ದರೆ ಜಾಗ್ರತೆ ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶವಾಗುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಎನ್. ಡಿ. ಸಿ. ಮೀಟಿಂಗಿಗೆ ಹೋಗಿದ್ದಾಗ ಈ ಸೂಚನೆ ಬಂತು. ಅಕ್ವಿಜಿಷನ್ ಮಾಡುವಾಗ ತಡವಾಗುತ್ತದೆ, ಎಮರ್ಜೆನ್ಸಿ ಬೇಸಿಸ್ ಮೇಲೆ ಮಾಡುವುದಕ್ಕೆ ಅಧಿಕಾರವಿರಬೇಕು ಎಂಬ ಪ್ರಶ್ನೆ ಬಂತು. ಈಗ ರಾಷ್ಟ್ರ್ಯಾಂಗ ತಿದ್ದುಪಡಿಯಾಗಿದೆ, ಎಮರ್ಜೆನ್ಸಿ ಬೇಸಿಸ್ ಮೇಲೆ ಅಕ್ವಿಜಿಷನ್ ಮಾಡಿಕೊಳ್ಳಲು ಅವಕಾಶವಿರುವಂತೆ ಮಾಡುವ ವಿಚಾರದಲ್ಲಿ ಕೇಂದ್ರ ಸರಕಾರ ಸೂಕ್ತ ಕ್ರಮ ಕೈಕೊಳ್ಳಬೇಕು ಎಂದು ಮುಖ್ಯ ಮಂತ್ರಿಗಳು ಸೂಚಿಸಿದ್ದಾರೆ. ಇದು ಸಮಂಜಸವಾಗಿದೆ.

ಶ್ರೀ ಕೆ. ಎಫ್. ಪಾಟೀಲ್.—25 ಸಾವಿರದೊಳಗೆ ಜನಸಂಖ್ಯೆ ಇರುವ ಸಣ್ಣ ಪಟ್ಟಣಗಳಲ್ಲಿರುವವರಿಗೂ ಅನುಕೂಲವಾಗುವಂತೆ ವ್ಯವಸ್ಥೆ ಮಾಡಿದರೆ ಒಳ್ಳೆಯದು.

ಶ್ರೀ ಎಂ. ವೈ. ಘೋರ್ಪಡೆ.—ಮಾಸ್ ಮೂವಮೆಂಟ್ ಬೇಸಿಸ್ ಮೇಲೆ ಮೊದಲು ವ್ಯವಸ್ಥೆಯಾಯಿತು. ಮೊದಲು ಎಲ್ಲೋ ಒಂದು ಕಡೆ ನಡೆಯಿತು. ಒಂದು ಸೈಟನ್ನು ಅಕ್ವೈರ್ ಮಾಡಿಕೊಳ್ಳಲು ಕೋರ್ಟಿನಲ್ಲಿ ತೀರ್ಮಾನವಾಗಲು ಹತ್ತು ವರ್ಷವಾಗುತ್ತದೆ. ನಿಧಾನವಾಗುವುದನ್ನು ತಪ್ಪಿಸಲು ಈಗ ಅನುಕೂಲವಾಗುವುದೆಂಬ ಆಶಯವಿದೆ. ಇದು ಬರೀ ಹಣಕಾಸಿನ ಪ್ರಶ್ನೆಯಲ್ಲ. ಸೌಕರ್ಯದ ಪ್ರಶ್ನೆ. ಸರಕಾರ ಮತ್ತು ಜನತೆ ಒಂದಾಗಿ ಸರಿಯಾದ ಪ್ರಯತ್ನಮಾಡಿದರೆ ಯಶಸ್ವಿಯಾಗುವುದು.

ಆಮೇಲೆ ಸ್ಪೆಷಲ್ ಎಂಪ್ಲಾಯ್‌ಮೆಂಟ್ ಸ್ಕೀಂ ಬಗ್ಗೆ ಎಷ್ಟೋ ಸದಸ್ಯರು ಮಾತನಾಡಿ ಸ್ಕೀಂ ಬಹಳ ಚಿಕ್ಕದು ಇದೆ ಇದರಿಂದ ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ಸಾಲ್ವ್ ಆಗುವುದಿಲ್ಲ ಎಂದು ಭಾಷಣ ಮಾಡಿದರು. ಸ್ಪೆಷಲ್ ಎಂಪ್ಲಾಯ್‌ಮೆಂಟ್ ಸ್ಕೀಂನ ಉದ್ದೇಶ ಸಂಪೂರ್ಣವಾಗಿ ಅನ್ ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ಸಾಲ್ವ್ ಮಾಡಬೇಕಾಗಿಲ್ಲ. ಇದು ಸ್ಪೆಷಲ್ ಎಂಪ್ಲಾಯ್‌ಮೆಂಟ್‌ಸ್ಕೀಂ ಎಷ್ಟುಮಟ್ಟಿಗೆ ಎಜುಕೇಟೆಡ್ ಅನ್‌ಎಂಪ್ಲಾಯ್ಡ್ ಇದ್ದಾರೆ ಅವರಿಗೆ ಸಹಾಯ ಮಾಡುವ ಉದ್ದೇಶ ಅಷ್ಟೇ ಇದರದು. It is a special effort. It is not a total effort to solve unemployment. ಇದರಿಂದ ಎಲ್ಲಾ ಕಡೆ ಪೂರ್ತಿ ಅನ್‌ಎಂಪ್ಲಾಯ್‌ಮೆಂಟ್ ಹೋಗುತ್ತದೆ ಎನ್ನುವುದು ಇದರ ಉದ್ದೇಶ ಅಲ್ಲ. ಈಗ ದೇಶದಲ್ಲಿ ಪ್ರಗತಿ ಆಗುತ್ತಿದೆ, ಆದ್ದರಿಂದ ಅನ್‌ಎಂಪ್ಲಾಯ್‌ಮೆಂಟ್ ಕೂಡ ಹೋಗುತ್ತದೆ. ಬರೀ ಒಂದು ಸ್ಕೀಂನಿಂದ ಅನ್‌ಎಂಪ್ಲಾಯ್‌ಮೆಂಟ್ ಹೋಗುವುದಿಲ್ಲ. ಆದುದರಿಂದ ಈ ಒಂದು ಸ್ಕೀಂನ ಮೇಲೆ ಹಾಗೆ ಟೀಕೆ ಮಾಡುವುದು ಸಮಂಜಸವಾಗುವುದಿಲ್ಲ. ಇದಕ್ಕಾಗಿ ಕೇಂದ್ರ ಸರಕಾರದವರು ಒಂದು ಕೋಟಿ 40 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಮ್ಯಾಚಿಂಗ್ ಗ್ರ್ಯಾಂಟ್ ಕೇಳುತ್ತಿದ್ದೇವೆ. ಇದನ್ನು ಉಪಯೋಗಿಸಿ 1,700 ಜನ ಗ್ರ್ಯಾಜ್ಯುಯೇಟ್ ಎಜುಕೇಟೆಡ್‌ಗಳಿಗೆ ಉದ್ಯೋಗ ದೊರೆಯಲಿದೆ. 1,800 ಜನರಿಗೆ ಕುಶಲ ವೃತ್ತಿಯಲ್ಲಿ ತರಬೇತು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇಷ್ಟೇ ಇದರ ಉದ್ದೇಶ.

ಬಜೆಟ್‌ನ ಮೇಲೆ ಬೇರೆ ಬೇರೆ ಡಿಪಾರ್ಟ್‌ಮೆಂಟುಗಳ ಬಗ್ಗೆ ಎಷ್ಟೋ ಜನ ಸದಸ್ಯರುಗಳು ಸೂಚನೆಗಳನ್ನು ಕೊಟ್ಟಿದ್ದಾರೆ. ಅದಕ್ಕೆಲ್ಲಾ ಉತ್ತರ ಹೇಳಲಿಕ್ಕೆ ಈಗ ಅವಕಾಶ ಇಲ್ಲ, ವೇಳೆ ಇಲ್ಲ. ಸಂಬಂಧಪಟ್ಟ ಡಿಮಾಂಡ್‌ಗಳ ಮೇಲೆ ಮಾತನಾಡುವಾಗ ಅವರವರ ಡಿಮಾಂಡ್‌ಗಳಿಗೆ ಸಂಬಂಧಪಟ್ಟ ಸೂಚನೆಗಳಿಗೆ ಸೂಕ್ತವಾದ ಉತ್ತರ ಕೊಡುತ್ತೇನೆ ಎಂದು ನಾನು ತಿಳಿದುಕೊಂಡಿದ್ದೇನೆ. ಬಜೆಟಿನ ಮೇಲೆ ಮಾನ್ಯ ಸದಸ್ಯರು ಮಾತನಾಡುವ ಧಾಟಿ ನೋಡಿದರೆ ಸಂಪೂರ್ಣ ಸಮಾಜಸ್ವರೂಪ—Total transformation of Society ಬಜೆಟ್ ಮೂಲಕ ಮಾಡುವುದಕ್ಕೆ ಸಾಧ್ಯ ಎನ್ನುವ ಧಾಟಿಯಲ್ಲಿ ಮಾತನಾಡಿದ್ದಾರೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ ಬಜೆಟ್ ಹಣಕಾಸಿನ ಸೂತ್ರ. It is only one finding weapon. It is one aspect. So, total transformation of Society ಏನಿದೆ ಅದನ್ನು ಮಾಡಲು ಬಜೆಟ್ ಫಿಸಿಕಲ್ ಇನ್‌ಸ್ಟ್ರುಮೆಂಟ್. It is only one instrument. ಇದರ ಜೊತೆಗೆ ತಿಳುವಳಿಕೆ ಬೇಕು, ಸಂಘಟನಾ ಶಕ್ತಿ ಬೇಕು, ಸರಿಯಾದ ಚಳುವಳಿಬೇಕು. ಚಳುವಳಿ ಎಂದರೆ ಗಲಾಟೆ ಅಲ್ಲ. ಸಂಘಟನಾ ಶಕ್ತಿ, Structural changes ಬೇಕು. ಜನತೆಯಲ್ಲಿ ಸಂಘಟನೆ ಶಕ್ತಿ ಬೆಳಸಬೇಕು.

(ಶ್ರೀ ಎಂ. ವೈ. ಘೋರ್ಪಡೆ)

ಲ್ಯಾಂಡ್ ರಿಫಾರಂಸ್ ಕಾನೂನು ಮಾಡಿದ್ದರಿಂದ ಲ್ಯಾಂಡ್ ರಿಫಾರಂಸ್ ಎಲ್ಲಿಯೂ ಆಗಿಲ್ಲ. ಕಾನೂನು ತಿಳಿದುಕೊಂಡು ಹಳ್ಳಿಯ ಜನರಿಗೆ ತಿಳುವಳಿಕೆ ಹೇಳಿ ಅಮೇಲೆ ಕಾರ್ಯಗೂಪಕ್ಕೆ ತರಬೇಕಾಗುತ್ತದೆ. ಆ ದೃಷ್ಟಿಯಿಂದ ಸಂಘಸಂಸ್ಥೆಗಳು ಒಳ್ಳೆಯ ರೀತಿಯಿಂದ ಕೆಲಸ ಮಾಡಬೇಕು. ಇನ್‌ಸ್ಟಿಟ್ಯೂಷನಲ್ ಸ್ಟ್ರಕ್ಚರಲ್ ಚೇಂಜಸ್ ಆಗಬೇಕು. ಎಲ್ಲಕ್ಕಿಂತ ಹೆಚ್ಚಾಗಿ ವಿಚಾರ ಕ್ರಾಂತಿ ಆಗಬೇಕು. ಆದಕಾರಣ ಈ ವಿಚಾರದಲ್ಲಿ ಕ್ರಾಂತಿ ಆಗಬೇಕು. ಮೂಲಭೂತ ಪರಿವರ್ತನೆ ಸಂಘ ಸಂಸ್ಥೆಗಳಿಂದ ಸಂಘಟಿತ ಸಾಮೂಹಿಕ ಪ್ರಯತ್ನ ನಡೆಯಬೇಕು. ಇದರ ಜೊತೆಗೆ ಸರಕಾರದಿಂದ ಹಣಕಾಸಿನ ಪ್ರಯತ್ನ ಅಲ್ಲ. ಹಣಕಾಸಿನ ಪ್ರಯತ್ನ ಒಂದು ಭಾಗ, ಒಂದು ಅಂಶ. ಇಷ್ಟು ತಿಳಿದುಕೊಳ್ಳಬಹುದು. It is not total instrument. Through budget you cannot delay transfor mation of society. ಬಜೆಟ್ ಮೇಲೆ ಟೀಕೆ ಮಾಡುವಾಗ ಒಂದು ಹೇಳಬಹುದು. ಎಲ್ಲಿ ಟ್ಯಾಕ್ಸ್ ಹಾಕಬಹುದಾಗಿತ್ತು ಅಲ್ಲಿ ಹಾಕಲಿಲ್ಲ; ಎಲ್ಲಿ ಹಾಕಬಾರದಾಗಿತ್ತು ಅಲ್ಲಿ ಹಾಕಿದ್ದಾರೆ; ಎಲ್ಲಿ ಜಾಸ್ತಿ ಹಣ ಕೊಟ್ಟಿದ್ದಾರೆ ಅಲ್ಲಿ ಕಮ್ಮಿ ಕೊಡಬಹುದಾಗಿತ್ತು ಎಂದೆಲ್ಲಾ ಹೇಳಬಹುದು. ನಮ್ಮ ಹಣಕಾಸಿನಶಕ್ತಿ ಇದ್ದ ಪರಿಸ್ಥಿತಿಯಲ್ಲಿ ನ್ಯಾಯವಾಗಿ ಪರ್ಯಾಲೋಚಿಸಿ ಪ್ರಗತಿ ಪರವಾದ ಅಭಿವೃದ್ಧಿ ಮಾಡಿದ್ದಾರೆಯೋ ಇಲ್ಲವೋ ನೋಡಬೇಕಾಗುತ್ತದೆ. ನ್ಯಾಯವಾಗಿ ಕಾಮನ್ ಮ್ಯಾನ್‌ಗೆ ಟ್ಯಾಕ್ಸ್ ಹಾಕುವುದಕ್ಕೆ ಹೋಗಲಿಲ್ಲ. ಹಣವನ್ನು ಖರ್ಚು ಮಾಡುವಾಗ ನ್ಯಾಯವಾಗಿ ಖರ್ಚು ಮಾಡುತ್ತೇವೆಯೋ ಇಲ್ಲವೋ ಎನ್ನುವುದನ್ನು ನೋಡುತ್ತೇವೆ. ಈ ದೃಷ್ಟಿಯಿಂದ ಒಳ್ಳೆಯದು ಕೆಟ್ಟದ್ದು ಹೇಳಲಿಕ್ಕೆ ಸಾಧ್ಯ ಹೊರತು ಬಜೆಟ್ ಮ್ಯಾಜಿಕ್‌ವ್ಯಾಂಡ್ ಆಗಿದೆ ಎನ್ನುವ ದೃಷ್ಟಿಯಲ್ಲಿ ಇಡೀ ಟ್ರಾನಸ್ಫರ್ಮೇಷನ್ ಆಫ್ ಸೊಸೈಟಿ ಒಂದು ಬಜೆಟಿನಿಂದ ಆಗುತ್ತದೆ ಎಂದು ನಾನು ತಿಳಿಯುವುದಿಲ್ಲ. ಸರಿಯಾದ ಮಾರ್ಗದಲ್ಲಿ ಸರಿಯಾಗಿ ಹೆಜ್ಜೆ ಇಡುವುದು ಮುಖ್ಯ. ಎಷ್ಟು ಚಿಕ್ಕ ಹೆಜ್ಜೆ ಆದರೂ ಸರಿಯಾದ ಮಾರ್ಗದಲ್ಲಿ ಇಡಬೇಕಾಗುತ್ತದೆ. ತಪ್ಪುದಾರಿಯಲ್ಲಿ ಹೆಜ್ಜೆ ಇಟ್ಟರೆ ಹಾನಿಯಾಗುತ್ತದೆ. ಈಗ ನಾವು ಇಟ್ಟಿರುವದು ಚಿಕ್ಕ ಹೆಜ್ಜೆ ಆದರೂ ಸರಿಯಾದ ದಾರಿಯಲ್ಲಿ ಇಟ್ಟಂತಹ ಹೆಜ್ಜೆ ಎಂದು ಹೇಳಬೇಕಾಗುತ್ತದೆ.

ಇಷ್ಟು ಹೇಳಿದನಂತರ ಮಾನ್ಯ ಶ್ರೀ ದೇವೇಗೌಡರು ಅವರು ಭಾಷಣ ಮಾಡುವಾಗ ಒಂದು ಮಾತು ಹೇಳಿದರು. 40—60 ಕೋಟಿ ರೂಪಾಯಿಗಳ ಡಿಫಿಸಿಟ್ ಆಗುತ್ತದೆ ಎಂದು ಹೇಳಿದರು. ಅದಕ್ಕಿಂತ ಮುಂಚೆ ಅವರ ಪಾರ್ಟಿಗೆ ಸೇರಿರತಕ್ಕವರು ಮಾಜಿ ಹಣಕಾಸಿನ ಮಂತ್ರಿಗಳು 30 ಕೋಟಿ ಡಿಫಿಸಿಟ್ ಆಗುತ್ತದೆ ಎಂದು ಹೇಳಿದರು. ಅವರು 30 ಕೋಟಿ ಎಂದ ತಕ್ಷಣ ದೇವೇಗೌಡರು 40—60 ಕೋಟಿ ಆಗುತ್ತದೆ ಎಂದು ಹೇಳಿದರು. ದೇವೇಗೌಡರು ಯಾಕೆ ಅಷ್ಟು ಡಿಫಿಸಿಟ್ ಆಗುತ್ತದೆ ಎಂದು ಹೇಳುವ ಪ್ರಯತ್ನ ಮಾಡಲಿಲ್ಲ. ? ಮಾಡಿದ್ದರೆ ಒಳ್ಳೆಯದಾಗುತ್ತಿತ್ತು.

ಶ್ರೀ ಎಚ್. ಡಿ. ದೇವೇಗೌಡ.—ಅವರು ಹೇಳಿದ ಮೇಲೆ ಹೇಳಲಿಲ್ಲ. ನನಗೆ ತಿಳಿದಿರುವಷ್ಟು ವಿವೇಕದಲ್ಲಿ ಹೇಳಿದ್ದೇನೆ. ಇನ್ನೂ ಏನಾದರೂ ಇದ್ದರೆ ತಿಳಿದುಕೊಳ್ಳೋಣ ಹೇಳಿ. ಮೇಜರ್ ಇರಿಗೇಷನ್ ಪವರ್ ಪ್ರಾಜೆಕ್ಟುಗಳಿಗೆ 37 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ತಾವು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದಂತೆ 28 ಕೋಟಿ ಚಿಲ್ಲರೆ ಹಣ ಖರ್ಚುಮಾಡಿದ್ದೇವೆ ಎಂದು ಹೇಳಿದ್ದೀರಿ. ಅಂದರೆ 10 ಕೋಟಿ ರೂಪಾಯಿಗಳು ಕಡಿಮೆ ಆಯಿತು. ಎಜುಕೇಷನ್‌ನಲ್ಲಿ 5 ಕೋಟಿ ರೂಪಾಯಿಗಳನ್ನು, ಕಡಿತ ಮಾಡಿದ್ದೀರಿ. 55 ಕೋಟಿ ಎಂದು ಹೇಳಿದಿರಿ ಅದು 60 ಕೋಟಿ ಆಗುತ್ತದೆ. ನಾನು ಹೇಳತಕ್ಕ ಕಾಲದಲ್ಲಿ ಡಿಫಿಸಿಟ್ ಯಾವ ಕಾರಣದಿಂದ ಆಗುತ್ತದೆ ಎಂದು ವಿವರಣೆ ಕೊಟ್ಟಿದ್ದೇನೆ. ಅದಕ್ಕೆ ದಯವಿಟ್ಟು ತಾವು ಉತ್ತರ ತಿಳಿಸಿ.

ಶ್ರೀ ಎಂ. ವೈ. ಘೋರ್ಪಡೆ.—ಬಜೆಟನ್ನು ಬಹಳ ಸ್ಪಷ್ಟವಾದ ರೀತಿಯಿಂದ ಮಂಡಿಸಿದ್ದೇನೆ. ಯಾರಿಗಾದರೂ ಅರ್ಥವಾಗುವ ರೀತಿಯಲ್ಲಿ ಬಜೆಟ್ ಇದೆ. ಸಾಮಾನ್ಯ ಜನತೆ ಯಾರು ನಮಗೆ ಓಟು ಕೊಟ್ಟು ಕಳುಹಿಸಿದ್ದಾರೋ, ಯಾರು ಟ್ಯಾಕ್ಸ್ ಕೊಡುತ್ತಾರೋ ಅಂತಹ ಪ್ರತಿಯೊಬ್ಬರಿಗೂ ಕೂಡ ಅರ್ಥವಾಗುವ ರೀತಿಯಲ್ಲಿ ಬಜೆಟ್ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ನಾವು 15 ವರ್ಷಗಳಿಂದ ಇದ್ದೇವೆ. ನಮಗೆ ಅರ್ಥವಾಗುವುದಿಲ್ಲ. ಕಾಮನ್ ಮ್ಯಾನ್ ಯಾರಿಗೆ ಅರ್ಥವಾಗುತ್ತದೆ ? ನನಗೆ ಅರ್ಥವಾಗುವುದಿಲ್ಲ ಎಂದು ಹೇಳುವುದಕ್ಕೆ ನನಗೆ ನಾಚಿಕೆಯಾಗುವುದಿಲ್ಲ. ಇನ್ನು ಕಾಮನ್ ಮ್ಯಾನ್‌ಗೆ ಹೇಗೆ ಅರ್ಥವಾಗುತ್ತದೆ ?

ಶ್ರೀ ಎಂ. ವೈ. ಘೋರ್ಪಡೆ.—ನಾನು ಹೇಳತಕ್ಕ ಮಾತನ್ನು ತಾವು ಒಪ್ಪಬಹುದು ಅಥವಾ ಬಿಡಬಹುದು. ಇದು ಮಿಂಚುಮರೆ ಇಲ್ಲದಂತೆ ಮಾಡಿದ ಬಜೆಟ್ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಆದರೂ ಕೂಡ ಅವರ ಪಾರ್ಟಿಗೆ ಸೇರಿರತಕ್ಕವರು ಶ್ರೀ ರಾಮಕೃಷ್ಣ ಹೆಗಡೆಯವರು ಹೇಳುತ್ತಾರೆ

"It conceals more than it reveals, like a sick and ugly woman." ಎಂದು ಪತ್ರಿಕೆಯಲ್ಲಿ ಬಂದಿದೆ. ನಾನು ಅದಕ್ಕೆ ಉತ್ತರದಲ್ಲಿ ಹೇಳಬೇಕಾದರೆ.

"The State finance was sick and ugly when we took over. We have not concealed the sickness, but tried to cure it, so that the State can be once again healthy and beautiful."

ಶ್ರೀ ಎಚ್. ಡಿ. ದೇವೇಗೌಡ.—ಬಹಳ ಸಂತೋಷ. ತಾವು ಹೇಳಿದ್ದು ತಿಳಿದಿದೆ. ಒಳ್ಳೆಯದು, ಬೇಕಾದರೆ ಚಪ್ಪಾಳೆ ಹೊಡೆಯುತ್ತೇನೆ. ಅಧಿಕಾರ ಕೈಗೆ ತೆಗೆದುಕೊಂಡಾಗ 71 ಕೋಟಿ ರೂಪಾಯಿ ಓವರ್ ಡ್ರಾಫ್ಟ್ ಇತ್ತು ಎಂದು ಹೇಳಿದಿರಿ. ನಮ್ಮವರು ಸರಕಾರ ಬಿಟ್ಟಾಗ ಸಭೆಯಲ್ಲಿ ಕೊಟ್ಟಿರತಕ್ಕ ಬಜೆಟ್ ಭಾಷಣದ ಪ್ರಕಾರ 30 ಕೋಟಿ ರೂಪಾಯಿ ಡಿಫಿಸಿಟ್ ಇತ್ತು ಎಂದು ಹೇಳಿದ್ದರು. ರಾಮಕೃಷ್ಣ ಹೆಗಡೆಯವರು ಇಟ್ಟಿರತಕ್ಕ ಬಜೆಟ್ ಭಾಷಣದಲ್ಲಿ ಓವರ್ ಡ್ರಾಫ್ಟ್ ಎಷ್ಟು ಇತ್ತು ಎಂದು ಹೇಳಿದ್ದಾರೆ. ಕಳೆದ ಒಂದು ವರ್ಷದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತದಲ್ಲಿ ಅದು 71 ಕೋಟಿ ರೂಪಾಯಿಗೆ ಬಂದಿದೆ. ಒಂದು ವರ್ಷದ ಹೊಣೆಗಾರಿಕೆಯನ್ನು ರಾಮಕೃಷ್ಣ ಹೆಗಡೆಯವರ ಮೇಲೆ ಹೊರಿಸಲಾಗದು.

ಶ್ರೀ ಡಿ. ದೇವರಾಜ ಅರಸ್.—ತಾವು ಹೇಳುವುದು ಸ್ವಲ್ಪ ಅನುಮಾನಾಸ್ಪದವಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಬಹಳ ಸಿಕ್‌ನೆಸ್ ಇತ್ತು ಎಂದು ಅವರು ಹೇಳಿದರು. ಅವರ ಮೇಲೆ ಏನೋ ಪೆಡಂಭೂತ ಕೂಡಿಸಿದಿರಿ. ರಾಜ್ಯದಲ್ಲಿ 71 ಕೋಟಿ ರೂಪಾಯಿ ಓವರ್ ಡ್ರಾಫ್ಟ್ ಇತ್ತು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಜನತೆಗೆ ಅನ್ಯಾಯವಾಗುವುದಿಲ್ಲ, ಇಡೀ ರಾಷ್ಟ್ರದಲ್ಲಿ ಎಲ್ಲಾ ರಾಜ್ಯಗಳವರೂ ಓವರ್ ಡ್ರಾಫ್ಟ್ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ 110 ಕೋಟಿ ರೂಪಾಯಿ ಮಾಡಿದ್ದಾರೆ. ಆಂಧ್ರದಲ್ಲಿ 110 ಕೋಟಿ ರೂಪಾಯಿಗಳವರೆಗೂ ಅವರೂ ಓವರ್ ಡ್ರಾಫ್ಟ್ ಮಾಡಿದ್ದಾರೆ. ಕಾಂಗ್ರೆಸ್ ಡಿವೈಡ್ ಆದಮೇಲೆ ಅವರು ತಮ್ಮ ಪಕ್ಷದವರೇ ಆಗಿದ್ದರು. ಕಳೆದ ಎರಡೂವರೆ, ಮೂರೂವರೆ ವರ್ಷ ಸಿಂಡಿಕೇಟ್ ಅವರಿಗೆ ಗೂಬೆ ಕೂರಿಸಿ ಹೋಗಿದ್ದಾರೆ ಎಂದು ಏನು ಹೇಳಿದ್ದಾರೆ ಅದನ್ನು ಕ್ಲಾರಿಫೈ ಮಾಡಿ. 30 ಕೋಟಿ ರೂಪಾಯಿ ಹಣ ಸರಕಾರ ಅಧಿಕಾರ ಬಿಟ್ಟು ಹೋಗುವ ಕಾಲದಲ್ಲಿ ಓವರ್ ಡ್ರಾಫ್ಟ್ ಇತ್ತು. ನಾನ್ ಪ್ಲಾನ್ ಸ್ಕೀಂ ಕಾವೇರಿ ಪ್ರಾಜೆಕ್ಟ್ ಅದಕ್ಕೆ ಅನ್ವಯವಾಗುವುದು. ಪ್ಲಾನಿಂಗ್ ಕಮಿಷನ್ನಿನವರ ಅಪ್ರೂವಲ್‌ನಿಂದ ಹಣ ರಿಲೀಜ್ ಆಯಿತು ಎಂದು ಅದು ತಮಗೆಲ್ಲಾ ಗೊತ್ತಿರುವ ವಿಷಯ. ಆದುದರಿಂದ ತಾವು ಅಪಘಾತಮಾಡಿದ್ದೇವೆ ಎನ್ನುವುದಕ್ಕೆ ವಿವರಣೆ ಬೇಕು.

6-00 P.M.

ಶ್ರೀ ಎಂ. ವೈ. ಘೋರ್ಪಡೆ.—ನಾನು ಯಾರಮೇಲೂ ಯಾವ ಅಪಾದನೆಯನ್ನೂ ಮಾಡಲಿಕ್ಕೆ ಹೋಗುವುದಿಲ್ಲ. ಎಷ್ಟೇ ಓವರ್ ಡ್ರಾಫ್ಟ್ ಇರಲಿ, ಎಷ್ಟೇ ಡಿಫಿಸಿಟ್ ಇರಲಿ ಅದನ್ನು ಹೋಗಲಾಡಿಸುತ್ತೇವೆ ಎಂದು ಹೇಳಿದರೆ, ಅದು ಸರಿಯಲ್ಲ 30 ಕೋಟಿ ರೂಪಾಯಿ ಡಿಫಿಸಿಟ್ ಆಗುತ್ತದೆ, 60 ಕೋಟಿ ರೂಪಾಯಿ ಡಿಫಿಸಿಟ್ ಆಗುತ್ತದೆ ಎಂದು ಹೇಳುವುದು ತಪ್ಪು: ಎಷ್ಟೇ ಡಿಫಿಸಿಟ್ ಇರಲಿ ಅದನ್ನು ಹೋಗಲಾಡಿಸಬೇಕು. ಇದರಲ್ಲಿ ತಪ್ಪು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೇವೆ ಎಂದು ಹೇಳುವುದು ತಪ್ಪು. ಆದಕಾರಣ ಇದರಲ್ಲಿರುವ ಫಿಗರ್ಸ್ ಸರಿಯೆಂದು ಒಪ್ಪುವುದಾದರೆ ಡಿಫಿಸಿಟ್ ಹೇಗೆ ಜಾಸ್ತಿ ಆಗುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ.—ಎಜುಕೇಷನ್ ಭಾಗದಲ್ಲಿ ಹಣ ಕಡಿತ ಮಾಡಿದ್ದೀರಿ. ಅಷ್ಟು ಹಣ ಕೊಟ್ಟಿಲ್ಲ.

Sri M. Y. GHORPADE.—That is a different matter.

ಶ್ರೀ ಡಿ. ದೇವರಾಜ ಅರಸ್.—ಕಡಿತ ಮಾಡದೇ 71 ಕೋಟಿ ರೂಪಾಯಿಗೆ ಏರಿದೆ. ಇದನ್ನು ಇನ್ನೂ ಹೆಚ್ಚಿಸಿಕೊಂಡು ಹೋಗುವುದಾದರೆ ಓವರ್ ಡ್ರಾಫ್ಟ್ ಜಾಸ್ತಿ ಮಾಡಬೇಕಾಗುತ್ತದೆ. ಇದನ್ನು ಹೆಚ್ಚಿಸಿಕೊಂಡು ಹೋಗಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ರಾಷ್ಟ್ರದಲ್ಲಿ ಮೈಸೂರಿನಲ್ಲಿ ಒಂದರಲ್ಲೇ ಅಲ್ಲ ಓವರ್ ಡ್ರಾಫ್ಟ್ ಮಾಡಿರುವುದು, ಬೇರೆ ರಾಜ್ಯಕ್ಕೂ ಕೂಡ ಕೊಟ್ಟಿದ್ದಾರೆ. ಇನ್ನೊಂದು ಮಾತು ಹೇಳಿದರು ಅವರು ಸಹಾಯ ಕೊಡದೇ ಹೋಗಿದ್ದರೆ ಈ ಬಡ್ಜೆಟ್ಟನ್ನು ಮಂಡಿಸುವುದಕ್ಕೇನೇ ಆಗುತ್ತಿರಲಿಲ್ಲ ಎಂದು. ಬೇರೆ ರಾಜ್ಯದಲ್ಲಿ ಬಡ್ಜೆಟ್ ಮಂಡನೆ ಮಾಡಿದ್ದಾರೆ. ಅವರಿಗೆ ಬಹಳ ಕೊರತೆ ಇದೆ. ಓವರ್ ಡ್ರಾಫ್ಟ್ ಕೊಡತಕ್ಕ ನೀತಿಯನ್ನು ಅನುಸರಿಸಿದ್ದಾರೆ ಎಂದು ನಾನು ಹೇಳಬೇಕಾಗುತ್ತದೆ. ಬೇರೆ ರಾಜ್ಯದಲ್ಲೂ ಕೂಡ ಈ ತರಹ ಓವರ್ ಡ್ರಾಫ್ಟ್ ಕೊಟ್ಟಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—38 ಕೋಟಿ ರೂಪಾಯಿ ಈಗ ಕೊಟ್ಟಿರತಕ್ಕದ್ದು, ಕಾಳೀನದಿ ಪ್ರಾಜೆಕ್ಟ್ ಲೆಕ್ಕ ತಗೆದುಕೊಂಡರೆ ಎಷ್ಟಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ನೀವು 37 ಕೋಟಿ ರೂಪಾಯಿ ಲೆಕ್ಕ ಹಾಕುವುದು ಇರ್ರಿಗೇಷನ್ ಪವರ್ ಎರಡೂ ಸೇರಿ. ಮೊದಲು ರಿಸರ್ವ್ ಬ್ಯಾಂಕ್‌ನಿಂದ ಅಲೋ ಮಾಡುತ್ತಾ ಇದ್ದರು, ಆದುದರಿಂದ ಖರ್ಚು ಮಾಡುತ್ತಾ ಇದ್ದರು. ಈಗ ಅಲೋ ಮಾಡುತ್ತಾ ಇಲ್ಲ, ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ.—15 ಕೋಟಿ ರೂಪಾಯಿಯನ್ನು ಕಡಿಮೆ ಮಾಡಿ ಸರಿದೂಗಿಸಿ ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಹಣ ಕೊಡುವವರು ಇದ್ದರೆ ಡಿಫಿಸಿಟ್ ಮಾಡಿಕೊಂಡು ಹೋಗಬಹುದು.

Sri H. D. DEVE GOWDA.—Then stop all developmental work.

Sri M. Y. GHORPADE.—The Central Government would not henceforth allow overdraft. They have frozen overdraft and indicated what is the normal limit of overdraft.

ಶ್ರೀ ಹೆಚ್. ಡಿ. ದೇವೇಗೌಡ.—45 ಕೋಟಿ ರೂಪಾಯಿ ನಾನ್ ಪ್ಲಾನ್ ಸ್ಕೀಮು. ಇದರ ಬಗ್ಗೆ ಕೇಂದ್ರ ಸರ್ಕಾರದವರು 5-6 ಕೋಟಿ ಕೊಟ್ಟಿದ್ದಾರೆ ಎಂದು ಹೇಳಿದಿರಿ. ತಮ್ಮ ಭಾಷಣದಲ್ಲಿ ಹೇಳಿದಿರಿ, ಸ್ಪೆಷಲ್ ಅಸಿಸ್ಟೆನ್ಸ್ ಏನು ಕೊಡುತ್ತಾರೋ ಅದು ಪ್ರಿನ್ಸಿಪಲ್ ಕೊಡುವುದಕ್ಕೂ ಮತ್ತು ಅದರ ಬಡ್ಡಿಗೂ 5-6 ಕೋಟಿ ರೂಪಾಯಿ ಕೊಡುವುದಕ್ಕೆ ಆಗುತ್ತದೆ. ನಾನ್ ಎಕ್ಸ್‌ಪೆಂಡಿಚರ್ ಬಗ್ಗೆ ಈಗ ಅದು ಪತ್ರಿಕೆಯಲ್ಲಿ ವರದಿ ಆಗಿರುವ ರೀತ್ಯ ಹಣ ರಿಲೀಸ್ ಮಾಡಬೇಕಾದರೆ ಪ್ರತಿವರ್ಷವೂ ನಾನ್‌ಪ್ಲಾನ್ ಬಗ್ಗೆ ಪರಿಶೀಲನೆ ಮಾಡಿ ರಿಲೀಸ್ ಮಾಡಬೇಕೇ, ಎಷ್ಟು ಪ್ರಮಾಣದಲ್ಲಿ ಮಾಡಬೇಕು ಎನ್ನುವುದನ್ನು ಕೇಂದ್ರದವರು ನಿರ್ಧಾರ ಮಾಡುತ್ತಾರೆ. ಹಿಂದಿನ ಸಭೆಯಲ್ಲಿ ಇಂಟೀರಿಯಮ್ ಬಡ್ಜೆಟ್ ಭಾಷಣ ಮಾಡಿದಾಗ 45 ಕೋಟಿ ರೂಪಾಯಿ ಕೊಡುತ್ತಾರೆ ಎಂದು ಅಷ್ಯೂರೆನ್ಸ್ ಕೊಟ್ಟಿದ್ದಾರೆ ಎಂದು ಹೇಳಿದಿರಿ. ಅದರ ಬಗ್ಗೆ ಈಗ ಪುನಃ ಹಿಂದಕ್ಕೆ ಹೋಗುತ್ತಾ ಇದ್ದೀರಿ. ಕೇಂದ್ರ ಸರ್ಕಾರದವರು ಪ್ರತಿವರ್ಷವೂ ಎಕ್ಸಾಮಿನ್ ಮಾಡಿ ರಿಲೀಸ್ ಮಾಡಬೇಕೇ ಬೇಡವೇ ಎನ್ನುವ ವಿವಾದಗಳು ಎದ್ದಿವೆ ಎಂದು ಪತ್ರಿಕಾ ವರದಿ ಪ್ರಕಾರ ಇದೆ.

ಶ್ರೀ ಎಂ. ವೈ. ಘೋರ್ಪಡೆ.—ನಾನ್‌ಪ್ಲಾನ್‌ಗೆ 6 ಕೋಟಿ ರೂಪಾಯಿ ಬಂದು ಬಿಟ್ಟಿದೆ. ಕಾಳೀನದಿ ಪ್ರಾಜೆಕ್ಟ್‌ಗೆ 38 ಕೋಟಿ ರೂಪಾಯಿ ನಾನ್‌ಪ್ಲಾನ್‌ಗೆ ಕೊಟ್ಟಿದ್ದಾರೆ.

Sri H. D. DEVE GOWDA.—Then it is not Special Assistance. ಕಾಳೀನದಿ ಬಗ್ಗೆ 45 ಕೋಟಿ ರೂಪಾಯಿ ಲೆಕ್ಕ ಹಾಕುವುದಾದರೆ then what does it mean ?

ಶ್ರೀ ಎಂ. ವೈ. ಘೋರ್ಪಡೆ.—70 ಕೋಟಿ ರೂಪಾಯಿಗಳಲ್ಲಿ 40 ಕೋಟಿ ರೂಪಾಯಿ ಓವರ್ ಡ್ರಾಫ್ಟ್ ಎಂತ ಇಟ್ಟುಕೊಂಡರೆ ಇನ್ನು 30 ಕೋಟಿ ಎಲ್ಲಿಂದ ಬರುತ್ತದೆ ಎಂದು ಕೇಳುತ್ತೇನೆ. ನಾನ್‌ಪ್ಲಾನ್‌ಗೋಸ್ಕರ ಯಾವ ಯಾವ ಐಟಂಗಳಿಗೆ ಯಾವ ಯಾವ ದುಡ್ಡು ಬರುತ್ತದೆ ಎಂದು ಹೇಳಿದೆ. ಅದಲ್ಲದೆ 38 ಕೋಟಿ ರೂಪಾಯಿ ಈ ಎರಡು ವರ್ಷದಲ್ಲಿ ಅಲ್ಲದೆ ಕಾಳೀನದಿ ಪ್ರಾಜೆಕ್ಟ್ ಬಗ್ಗೆ ಅವರೇ ನೋಡಿಕೊಳ್ಳುತ್ತಾರೆ. ಇದರಲ್ಲಿ ನಾನ್ ಪ್ಲಾನ್ ಮತ್ತು ಪ್ಲಾನ್ ಸ್ಕೀಮುಗಳು ಯಾವ್ಯಾವುದು ಎಂದು ಪ್ರತಿಯೊಂದೂ ಹೇಳಿದೆ. ಎಷ್ಟರಮಟ್ಟಿಗೆ ಹಣ ಬಂದಿದೆ ನೀವೇ ಲೆಕ್ಕ ಹಾಕಿಕೊಳ್ಳಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ಲಾನ್ ಮತ್ತು ನಾನ್ ಪ್ಲಾನ್ಸ್ ಸ್ಕೀಮು ಎಂತ ಎರಡು ಇವೆ. ಇದರಲ್ಲಿ 60 ಕೋಟಿ ರೂಪಾಯಿ ಪ್ಲಾನ್ ಸ್ಕೀಮ್‌ಗೆ 45 ಕೋಟಿ ರೂಪಾಯಿ ನಾನ್ ಪ್ಲಾನ್ ಸ್ಕೀಮಿಗೆ ಎಂದು ಹೇಳಿವಿರಿ. ಪ್ಲಾನ್ ಸ್ಕೀಮು ನೋಡುವುದಾದರೆ 5-10 ಕೋಟಿ ರೂಪಾಯಿ ಪ್ಲಾನ್ ಸ್ಕೀಮ್‌ಗೆಸಿಕ್ಕುತ್ತದೆ. ಅದು healthy growth ಅಲ್ಲ. ನಾನ್ ಪ್ಲಾನ್ ಸ್ಕೀಮ್‌ಗೆ ಬಹಳ ಜಾಸ್ತಿ ಇದೆ. ಅಷ್ಟೊಂದು ಜಾಸ್ತಿ ಇರುವುದು ಒಳ್ಳೆಯದಲ್ಲ. ಪ್ಲಾನ್ ಸ್ಕೀಮ್‌ಗೆ ಜಾಸ್ತಿ ಮಾಡಿ, ನಾನ್ ಪ್ಲಾನ್ ಸ್ಕೀಮ್‌ಗೆ ಕಡಿಮೆ ಮಾಡಬೇಕು, ಈ ವಿಷಯದಲ್ಲಿ ರಾಜ್ಯ ಸರ್ಕಾರ ಏನು ಯೋಚನೆ ಮಾಡಿದೆ ?

ಶ್ರೀ ಎಂ. ವೈ. ಘೋರ್ಪಡೆ.—ಪ್ಲಾನ್‌ಗೋಸ್ಕರ್ ಕೊಡುವುದು 60 ಕೋಟಿ ರೂಪಾಯಿ. ನಾನ್ ಪ್ಲಾನ್ಡ್ ಸ್ಕಿಮನ್ನು ಚರ್ಚೆ ಮಾಡಿ ಎಷ್ಟು ಕೊಡಬೇಕೋ ಅಷ್ಟೇ ಕೊಡುತ್ತಾರೆ.ಅದಕ್ಕೆ firm commitments ಮಾಡಿಲ್ಲ. ಅದಕ್ಕೋಸ್ಕರ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದೇನೆ. ಉಪಾಧ್ಯಾಯರನ್ನು ಪಂಚವಾರ್ಷಿಕ ಯೋಜನೆಯಲ್ಲಿ ನೇಮಕ ಮಾಡಿದರೆ ಅದು ಪ್ಲಾನ್ ಸ್ಕೀಮ್ ಆಗುತ್ತದೆ. ಮುಂದಿನ ಪ್ಲಾನ್‌ನಲ್ಲಿ ಅದೇ ಉಪಾಧ್ಯಾಯರ ಸಂಬಳ ನಾನ್ ಪ್ಲಾನ್‌ಸ್ಕೀಮ್ ಆಗುತ್ತದೆ. ಹೊಸ ಎಸ್ಟಾಬ್ಲಿಷ್‌ಮೆಂಟ್ ಮಾಡುತ್ತೇವೆ. ಅವರ ರೆಕರಿಂಗ್ ಎಕ್ಸ್‌ಪೆಂಡಿಚರ ಏನು ಇದೆ ಅದೆಲ್ಲಾ ನಾನ್‌ಪ್ಲಾನ್‌ನಲ್ಲಿ ಜಾಸ್ತಿ ಆಗಿ ಹೋಗುತ್ತಾ ಇದೆ. ನಾನ್ ಪ್ಲಾನ್ ಕಾಪಾಡಿಕೊಂಡು ಪ್ಲಾನ್ ಮಾಡಬೇಕಾಗುತ್ತದೆ. ನಾನ್‌ಪ್ಲಾನ್ ಮರೆತು ಬಿಟ್ಟರೆ ಪ್ಲಾನ್‌ಗೆ ಧಕ್ಕೆ ಬರುತ್ತದೆ. ಪ್ಲಾನ್ ಮತ್ತು ನಾನ್‌ಪ್ಲಾನ್ ಇಂಟಿಗ್ರೇಟ್ ಮಾಡಿ ನೋಡಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನನ್ನ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಕಾವೇರಿ ಜಲಾನಯನ ಯೋಜನೆಗಳ ಬಗ್ಗೆ ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಸಿ.ಡಬ್ಲ್ಯು. ಪಿ.ಸಿ. ಯಿಂದ ಕ್ಲಿಯರೆನ್ಸ್‌ಗೆ ಅರ್ಜಿ ಹಾಕಿದರೂ ಕೇಂದ್ರ ಸರ್ಕಾರ ವಶತಿಯಿಂದ ಅನೇಕ ಯೋಜನೆಗಳಿಗೆ ಮಂಜೂರಾತಿ ಕೊಡಲಿಲ್ಲ. ಕೇಂದ್ರ ಸರ್ಕಾರದಲ್ಲಿ ಆಗ ಬೇರೆ ಪಕ್ಷ ಇತ್ತು ಇಲ್ಲೊಂದು ಬೇರೆ ಪಕ್ಷ ಇತ್ತು. ಆದಕಾರಣ ಆಗ ನಮಗೆಲ್ಲರಿಗೂ ಕಾತುರವಾಗುತ್ತಿತು. ಆದರೆ ಈಗ ಮೊನ್ನೆ ಚುನಾವಣೆ ಆದಮೇಲೆ ಕೇಂದ್ರದಲ್ಲೂ ಮತ್ತು ಇಲ್ಲೂ ಒಂದೇ ಪಕ್ಷ ಇರುವುದರಿಂದ ಸಿ. ಡಬ್ಲ್ಯು. ಪಿ. ಸಿ. ಯಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯುವುದಕ್ಕೆ ಏನು ಯೋಜನೆ ಮಾಡಿದ್ದೀರಿ ? ಟೆಕ್ನಿಕಲ್ ಕ್ಲಿಯರೆನ್ಸ್ ಪಡೆದರೆ ಸೆಂಟ್ರಲ್ ಆಸಿಸ್ಟೆನ್ಸ್ ಜಾಸ್ತಿ ತೆಗೆದುಕೊಳ್ಳುವುದಕ್ಕೆ ಎಷ್ಟು ಮುಂದೆ ಹೋಗಿದ್ದೀರಿ ಎನ್ನುವ ವಿಷಯ ಕೇಳಿದ್ದೇನೆ. ಅದಕ್ಕೆ ತಮ್ಮಿಂದ ಉತ್ತರ ಬರಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಕಾವೇರಿ ಜಲಾನಯದಲ್ಲಿರತಕ್ಕಂಥಾ ಯೋಜನೆಗಳಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡತಕ್ಕಂಥಾದ್ದು ಅದು ಯಾವ ಆಧಾರದ ಮೇಲೆ ಎನ್ನುತಕ್ಕಂಥಾದ್ದು ಹಿಂದಿನ 1924 ರ ಅಗ್ರಿಮೆಂಟ್ ಇರುವುದರಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡುವುದು ಬಿಡುವುದು ಅದರ ಆಧಾರದ ಮೇಲೆ ಇದೆ. ಕೇಂದ್ರದಲ್ಲಿ ಒಂದು ಸರ್ಕಾರ ಇತ್ತು, ಇಲ್ಲಿ ಬೇರೆ ಸರ್ಕಾರ ಇತ್ತು ಅದುದರಿಂದ ಟೆಕ್ನಿಕಲ್ ಕ್ಲಿಯರೆನ್ಸ್‌ನ್ನು ಕೊಡದೆ ನಿಲ್ಲಿಸಿದ್ದಾರೆ ಎಂದು ಹೇಳಿದರು. ಶ್ರೀಮಾನ್ ಕೆ. ಎಲ್. ರಾವ್ ಅವರ ಜೊತೆಯಲ್ಲೇ ಎಲ್ಲರೂ ಕುಳಿತುಕೊಂಡು ಬಂದ್ದೇವೆ. ಇವರು ದೊಡ್ಡ ಇಂಜನೀಯರ್ ಎಂದು ಶ್ರೀಮಾನ್ ವೀರೇಂದ್ರ ಪಾಟೀಲರು ಮತ್ತು ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದರು. ಈ ವಿಚಾರ ಶ್ರೀಮಾನ್ ದೇವೇಗೌಡರಿಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀಮಾನ್ ಚನ್ನಬಸಪ್ಪನವರು ಕೇಂದ್ರದ ಕುತ್ತಿಗೆ ಕಟ್ಟಿದ್ದೀರಿ. ಆರೀತಿ ಕೇಂದ್ರದ ಕುತ್ತಿಗೆ ಕಟ್ಟಿದರೆ ಆಗುದಿಲ್ಲ ಎಂದು ಹೇಳಿದರು. ಅರ್ಥ ಮಂತ್ರಿಗಳು New era has begun ; conflict between the State and the Centre has gone ಎಂದು ಹೇಳಿದರು.

ಶ್ರೀ ಡಿ. ದೇವರಾಜ್ ಅರಸ್.—ಆಗ ಏನು ಹೇಳಿದರೋ ಈಗಲೂ ಹಾಗೇ ಹೇಳುತ್ತಾರೆ. ಅದು ದೇಶಕ್ಕೆ ಗೊತ್ತು.

ಮೊದಲು ಚೆನ್ನಾಗಿತ್ತು ಎಂದು ಹೇಳುವವರೂ ಅವರೇ, ರಾಜಕೀಯ ದೃಷ್ಟಿಯಿಂದ ನೋಡುತ್ತಿದ್ದಾರೆಂದು ಹೇಳುವವರೂ ಅವರೇ,

(ಶ್ರೀ ಡಿ. ದೇವರಾಜ ಅರಸ್)

ಈಗಲೂ ಟೆಕ್ನಿಕಲ್ ಕ್ಲಿಯರೆನ್ಸ್ ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಸಂಬಂಧಪಟ್ಟ ರಾಜ್ಯಗಳ ಪ್ರತಿನಿಧಿಗಳನ್ನು ಕುರಿತು ಮಾತುಕತೆ ನಡೆಸಿ ಫ್ಯಾಕ್ಟ್ ಫೈಂಡಿಂಗ್ ಸಮಿತಿ ಎನ್ನುವುದನ್ನು ಮಾಡಿ ಇನ್ನು ಐದಾರು ತಿಂಗಳಲ್ಲಿ ಅಂತ್ಯ ತೀರ್ಮಾನ ತೆಗೆದುಕೊಳ್ಳಬೇಕೆಂಬ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಬೇಕಾದರೆ 1924ನೇ ಅಗ್ರಿಮೆಂಟ್ ಇರುವುದರಿಂದ ತಮಿಳುನಾಡು ಸರ್ಕಾರದ ಒಪ್ಪಿಗೆಯನ್ನು ಪಡೆಯದೆ ಕೊಡುವುದಕ್ಕಾಗುವುದಿಲ್ಲ ಎನ್ನುವ ಪ್ರಬಲವಾದ ಕಾರಣದಿಂದ ಕ್ಲಿಯರೆನ್ಸ್ ಬರುವುದಕ್ಕೆ ಆಗಿರಲಿಲ್ಲ. ಹೋದ ಸಾರಿ ಅಸೆಂಬ್ಲಿಯಲ್ಲಿ ಅವರೂ ನಾವೂ ಎಲ್ಲ ಸೇರಿ ಈ ವಿಷಯದ ಬಗ್ಗೆ ಚರ್ಚೆ ಮಾಡಿದಾಗ ಶ್ರೀ ವೀರೇಂದ್ರ ಪಾಟೀಲರು ಹೇಳಿದ ವಿಚಾರವನ್ನು ಜ್ಞಾಪಿಸಿಕೊಳ್ಳಲಿ. ಟೆಕ್ನಿಕಲ್ ಕ್ಲಿಯರೆನ್ಸ್ ಇಲ್ಲದೆ ಹೋದರೆ ನಮಗೆ ಹಣ ಇಲ್ಲದ ಹಾಗಾಗುತ್ತದೆ, ಹಣವಿಲ್ಲದೆ ಹೋದರೆ ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅದಕ್ಕೋಸ್ಕರ 1924ನೇ ಅಗ್ರಿಮೆಂಟನ್ನು ಬದಲಾಯಿಸುವುದಕ್ಕೆ ಸಾಧ್ಯವಿದ್ದರೆ ಮಾಡೋಣ, ಇಲ್ಲದೆ ಹೋದರೆ ಒಪ್ಪಿಕೊಂಡು ಹೋಗಬೇಕಾಗುತ್ತದೆ ಎನ್ನುವ ಮಾತನ್ನು ಹೇಳಿರುವುದನ್ನು ಮರೆಯಬಾರದು.

ಶ್ರೀ ಎಚ್. ಡಿ. ದೇವೇಗೌಡ.—1924ನೇ ಅಗ್ರಿಮೆಂಟನ್ನು ಒಪ್ಪಿಕೊಳ್ಳಬೇಕೆಂದು ಹೇಳಿದ್ದಾರೆನ್ನುವುದು ನನಗೆ ಜ್ಞಾಪಕವಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಪತ್ರಿಕೆಗಳಲ್ಲಿ ಬಂದುದನ್ನು ನಾವೂ ಕೇಳಿದೆವು. ಸೀಕ್ರೆಟ್ಸ್ ಹೇಳುವುದಕ್ಕಾಗುವುದಿಲ್ಲ ಎಂದು ಕಾವೇರಿ ನೀರನ್ನು ಉಪಯೋಗ ಮಾಡಿಕೊಳ್ಳುವ ಬಗ್ಗೆ ಚರ್ಚೆ ಮಾಡಲು ಒಂದು ಉಪಸಮಿತಿಯನ್ನು ಮಾಡಿದರು. ಆ ಸಮಿತಿಯಲ್ಲಿ ಟೆಕ್ನಿಕಲ್ ಕ್ಲಿಯರೆನ್ಸ್ ಕೇಂದ್ರ ಸರ್ಕಾರದವರು ಕೊಡಲಿ ಬಿಡಲಿ ನಾವು ಕಾವೇರಿ ಯೋಜನೆಗಳನ್ನು ಮುಂದುವರಿಸಲೇಬೇಕು ಎನ್ನುವ ತೀರ್ಮಾನವಾಗಿ ಇಂದು ಅದನ್ನು ಮುಂದುವರಿಸುತ್ತಿದ್ದೇವೆ. ಇದೇ ಸಭೆಯಲ್ಲಿ ಸೀಕ್ರೆಟ್ಸ್ ವಿಷಯಗಳನ್ನು ಹೇಳುವುದಕ್ಕಾಗುವುದಿಲ್ಲ ಎಂದು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದಾಗ, ಹಾಗಿದ್ದಮೇಲೆ ಈ ಸಭೆಯಿಂದ ಒಂದು ಸಮಿತಿಯನ್ನು ಮಾಡಿ ಎಂದು ಹೇಳಿದಾಗ 20–25 ಜನರಿರತಕ್ಕ ಒಂದು ಸಮಿತಿಯನ್ನು ಮಾಡಿದರು. ಆ ಸಮಿತಿಯಲ್ಲಿ ಶ್ರೀಮಾನ್ ದೇವೇಗೌಡರು ವಗೈರೆ ಜನರಿದ್ದರು. ಅದರಲ್ಲಿ ನಾನೂ ಇದ್ದೆ, ಶ್ರೀ ಚನ್ನಬಸಪ್ಪನವರಿದ್ದರು, ಶ್ರೀಮಾನ್ ಸಿದ್ದವೀರಪ್ಪನವರಿದ್ದರು, ಶ್ರೀ ಶಿವಪ್ಪನವರಿದ್ದರು. ಇವರೆಲ್ಲರೂ ಸೇರಿ ಚರ್ಚೆ ಮಾಡಿ ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿದ್ದರೆ ಹಣ ಸಹಾಯ ಕೇಂದ್ರ ಸರ್ಕಾರದಿಂದ ಬರುತ್ತಿತ್ತು, ಟೆಕ್ನಿಕಲ್ ಕ್ಲಿಯರೆನ್ಸ್ ಬರದೆ ಇರುವುದರಿಂದ ಹಣವನ್ನು ಒದಗಿಸುವುದಕ್ಕೆ ಕಷ್ಟವಿದೆ ಹೇಗೆ ಮಾಡಬೇಕು ಎನ್ನುವ ವಿಷಯ ಬಂದಾಗ ಅದಕ್ಕೆ ನಾವು ಒಂದು ದಾರಿ ತೋರಿಸಿಕೊಡುತ್ತೇವೆಂದು ಹೇಳಿ ಅದರ ಪ್ರಕಾರ ಒಂದು ಉಪಸಮಿತಿಯನ್ನು ನೇಮಕ ಮಾಡಿ ಫೈನಾನ್ಷಿಯಲ್ ಆಸ್ಪೆಕ್ಟ್ಸ್ ಬಗ್ಗೆ ಮೂರು ತಿಂಗಳು ಕುಳಿತು, ಪ್ರತಿಯೊಬ್ಬ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ, ಬಜೆಟ್ಟಿನಲ್ಲಿ ಹತ್ತು ಕೋಟಿ ರೂಪಾಯಿ ಉಳಿತಾಯ ಮಾಡಲು ಮಾರ್ಗವನ್ನು ಹುಡುಕಿ, ಕಾವೇರಿ ಯೋಜನೆಗಳಿಗೆ ಆ ಹಣವನ್ನು ಖರ್ಚು ಮಾಡಬೇಕೆಂದು ಹೇಳಿದೆವು ಎನ್ನುವ ವಿಷಯವನ್ನು ತಮ್ಮ ಮುಖಾಂತರ ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅದರಂತೆ ಹೋದ ಸಾಲಿನಲ್ಲಿ ಸುಮಾರು 11 ಕೋಟಿ ರೂಪಾಯಿ ಚಿಲ್ಲರೆ ಹಣವನ್ನು ಯೋಜನೆಗಳ ಮೇಲೆ ಖರ್ಚು ಮಾಡುವುದಕ್ಕೆ ಸಾಧ್ಯವಾಯಿತು. ನಾವು ಅದೇ ರೀತಿ ಮುಂದುವರಿಸಿಕೊಂಡು ಹೋಗುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—1924ನೇ ಅಗ್ರಿಮೆಂಟಿಗೆ ಹಿಂದಿನ ಸರ್ಕಾರದವರು ಒಪ್ಪಿದ್ದರು, ಅದರ ಬಗ್ಗೆ ಒಂದು ಉಪಸಮಿತಿಯನ್ನು ಮಾಡಿದ್ದರು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ನನಗೆ ಜ್ಞಾಪಕವಿರುವ ಹಾಗೆ ಅವರು ಹೇಳುತ್ತಿರುವುದು ಸತ್ಯಕ್ಕೆ ದೂರವಾದ ಮಾತು. 1924ನೇ ಅಗ್ರಿಮೆಂಟಿಗೆ ಅವರು ಒಪ್ಪಿರಲಿಲ್ಲ ಎಂದು ನನಗೆ ಜ್ಞಾಪಕ. 1924ನೇ ಅಗ್ರಿಮೆಂಟಿಗೆ ಅವರು ಒಪ್ಪಿದ್ದರು ಎನ್ನುವುದಾದರೆ, ಈಗ ಅವರು ಅಧಿಕಾರದಲ್ಲಿದ್ದಾರೆ, ಅವರ ಮುಂದೆ ಫೈಲುಗಳಿವೆ, ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡೆದಿದೆ. ಯಾವುದೇ ಸಂದರ್ಭದಲ್ಲಿ 1924ನೇ ಅಗ್ರಿಮೆಂಟಿಗೆ ಹಿಂದೆ ಅಧಿಕಾರದಲ್ಲಿದ್ದವರು ಒಪ್ಪಿದ್ದರು ಎನ್ನುವುದನ್ನು ದೃಢೀಕರಿಸುವುದಾದರೆ ಅವರು ರಾಜ್ಯದಲ್ಲಿನ ಜನತೆಗೆ ದ್ರೋಹ ಬಗೆದಂತೆ ಎಂದು ಹೇಳುತ್ತೇನೆ. ಇದಕ್ಕಿಂತ ಅಘಾತವಾದುದು ಮತ್ತೊಂದಿಲ್ಲ. ಆದುದರಿಂದ ಕೇಂದ್ರ ಸರ್ಕಾರದ ಯಾವುದೇ ಫೈಲು ಅಥವಾ ಸರ್ಕಾರದಲ್ಲಿರತಕ್ಕ ಫೈಲುಗಳನ್ನು ನೋಡಿ ಸಂಬಂಧಪಟ್ಟ ಮಂತ್ರಿಗಳು ಇದನ್ನು ದೃಢೀಕರಿಸುವುದಾದರೆ

ಅದನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಗುಬ್ಬಚ್ಚಿ ಕಥೆ ಹೇಳುವುದು ಬೇಡ. Let the Chief Minister come to the point. Why does he tell unnecessary things ?

Sri D. DEVARAJ URS.—It is a fact. In this House that charge was made.

Sri H. D. DEVE GOWDA.—I am prepared to take the challenge if he is prepared to prove it.

(*Interruption*)

MADAM SPEAKER.—The general discussion on the Budget is concluded. From to-morrow we will take up Demands for Grants.

The House now stands adjourned to meet to-morrow at 1-00 P.M.

The House adjourned at Twenty Minutes past Six of the Clock to meet again at One of the Clock on Thursday, the 29th June 1972.